CALLING ATTENTION TO MATTERS OF URGENT PUBLIC IMPORTANCE

(i) *re* : State Claim ofRs. 80 Crores through Sixth Finance Commission

ಶ್ರೀ ಎಸ್. ಬಂಗಾರಪ್ಪ (ಸೊರಬ).—ಆರನೇ ವಿತ್ತೀಯ ಆಯೋಗದ ವರದಿ ಪ್ರಕಾರ ರಾಜ್ಯಕ್ಕೆ ಬರಬೇಕಾಗಿರುವ 80 ಕೋಟಿ ರೂಪಾಯಿಗಳ ಬಗ್ಗೆ ಹಣಕಾಸಿನ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಬಜೆಟ್ ಭಾಷಣದಲ್ಲಿ ಆರನೇ ಹಣಕಾಸಿನ ಆಯೋಗದ ಬಗ್ಗೆ ಎಷ್ಟು ಹೇಳಬಹುದೋ ಅದನ್ನು ಹೇಳಿದ್ದೇನೆ. ಮತ್ತೆ ಮೈಸೂರು ಸರ್ಕಾರದ ಕೇಸ್ ಫೈನಾನ್ಸ್ ಕಮಿಷನ್ ಮುಂದೆ ಇಟ್ಟಿರುವ ಬಗ್ಗೆ ಒಂದು ಬುಕ್‌ಲೆಟ್ ಕೂಡ ಮಾಡಿದೆ. ಆದಕಾರಣ ನಾನು ಅದರ ಮೇಲೆ ಈ ಹೊತ್ತು ಹೆಚ್ಚು ಹೇಳುವ ಅವಶ್ಯಕತೆ ಇಲ್ಲ. ಆದರೂ ಕೂಡ ಸಂಕ್ಷಿಪ್ತವಾದ ಒಂದು ಹೇಳಿಕೆಯನ್ನು ಮಾಡಿದರೆ ಸಾಕು ಎಂದು ನನಗನ್ನಿಸುತ್ತದೆ.

I State as follows :—

1. In my presentation of Mysore's case to the Sixth Finance Commission, I had specifically pointed out that the gross inadequacy of the award of the last Finance Commission, was later accepted by implication and partly reflected in the ad-hoc financial assistance that was considered necessary to enable Mysore to fulfil its Fourth Plan outlays. I had also pointed out that if all the subsequent assistance had been part of the Fifth Finance Commission's Award, it would have been in the form of grant and not loan. The Hon'ble Member is requested to refer to Mysore's case to the Sixth Finance Commission as presented by me and to the Memorandum to the Sixth Finance Commission in which this matter has been dealt with in detail.

2. From this, it will be clear that the case of Mysore has been presented as effectively as possible, with a view to correct the inadequacy of the previous Commission's award. The recommendations of the Sixth Finance Commission will now have to be awaited.

10-00 A. M.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಇದರಲ್ಲಿ ತಾವು gross Inadequancy of the award of the last finance commission, was later accepted by implication ಎಂದು ಹೇಳಿದ್ದೀರಿ. ಇಂಪ್ಲಿಕೇಷನ್ ಯಾವರೀತಿ, ? ಕೇಂದ್ರಸರ್ಕಾರದವರು ಐದನೆಯ ಹಣಕಾಸಿನ ಆಯೋಗದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬುದನ್ನು ಒಪ್ಪಿದ್ದಾರೆಯೋ ? ಅಡಹಾಕ್ ಅಸಿಸ್ಟೆನ್ಸ್ ಏನು ಕೊಟ್ಟಿದ್ದಾರೆ ಇದು ಐದನೆಯ ಹಣಕಾಸಿನ ಆಯೋಗದವರು ಕಡಿಮೆ ಅವಾರ್ಡ್ ಮಾಡಿದ್ದರಿಂದ ಅದನ್ನು ತುಂಬುವ ಸಲುವಾಗಿ ಆಡ್‌ಹಾಕ್ ಅಸಿಸ್ಟೆನ್ಸ್ ಕೊಟ್ಟಿದ್ದೇವೆ ಎಂದು ಹೇಳಿದಾರೆಯೋ ?

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಆದಕ್ಕೆ ನಾನು ಹೇಳಿದೆ, ಬೈ ಇಂಪ್ಲಿಕೇಷನ್ ಎಂದು, ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಪ್ಲಾನ್ ಅಸಿಸ್ಟೆನ್ಸ್, ನಾನ್ ಪ್ಲಾನ್ ಅಸಿಸ್ಟೆನ್ಸ್ ಕೊಡಬೇಕು ಎಂದು ಇದೆ. ಐದನೆಯ ಹಣಕಾಸಿನ ಆಯೋಗದವರು ಅವಾರ್ಡ್ ಮಾಡಿದ ನಂತರ ಪ್ಲಾನಿಂಗ್ ಕಮಿಷನ್‌ನವರು ಬೇರೆ ಬೇರೆ ರಾಜ್ಯದಲ್ಲಿ ಏನೇನು ಕೊರತೆ ಇದೆ, ಅದನ್ನು ಲೆಕ್ಕ ಹಾಕಿಕೊಂಡು by implication ಮೈಸೂರಿಗೆ ಫೈನಾನ್ಸ್ ಕಮಿಷನ್ ನಿಂದ ಸಾಕಷ್ಟು ಅವಾರ್ಡ್ ಬಂದಿಲ್ಲ ಎಂದು ಭಾವಿಸಿ ಪ್ಲಾನ್ ಮತ್ತು ನಾನ್ ಪ್ಲಾನ್ ಔಟ್ಲೇಸ್‌ಗೆ ಸ್ಪೆಷಲ್ ಪ್ಲಾನ್ ಅಸಿಸ್ಟೆನ್ಸ್ ಕೊಡಬೇಕೆಂದು ಕೇಂದ್ರಸರ್ಕಾರಕ್ಕೆ ರಕಮಂಡ್ ಮಾಡಿದರು. ಆ ಮೊತ್ತ ಎಷ್ಟು ಎಂದರೆ 60 ಕೋಟಿ

ರೂಪಾಯಿಗಳು ಪ್ಲಾನ್ ಅಸಿಸ್ಟೆನ್ಸ್, ಮತ್ತು 45ಕೋಟಿ ರೂಪಾಯಿಗಳು ನಾನ್ ಪ್ಲಾನ್ ಅಸಿಸ್ಟೆನ್ಸ್. ಪ್ಲಾನ್‌ಅಸಿಸ್ಟೆನ್ಸ್ ಬೇರೆಯಾಯಿತು, ನಾನ್ ಪ್ಲಾನ್‌ಗೆ 45 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇನ್ನೂ ಹೆಚ್ಚಿಗೆ ಬೇಕು ಎಂದು ಹೇಳುತ್ತಾ ಇದ್ದೇವೆ. ಓವರ್ ಡ್ರಾಫ್ಟ್ ಅನ್ನು ಕ್ಲಿಯರ್ ಮಾಡುವುದಕ್ಕೋಸ್ಕರ ಸ್ಪೆಷಲ್ ಆಗಿ ಅಕಾಮಡೇಷನ್ ಕೊಡಬೇಕಾಯಿತು. ಎಲ್ಲಾ ಲೆಕ್ಕ ಹಾಕಿದರೆ, ಸ್ಪೆಷಲ್ ಪ್ಲಾನ್. ನಾನ್ ಪ್ಲಾನ್ ಅಸಿಸ್ಟೆನ್ಸ್ ಓವರ್ ಡ್ರಾಫ್ಟ್ ಕ್ಲಿಯರ್ ಮಾಡುವುದಕ್ಕೋಸ್ಕರ ಏನು ಕೊಡಬೇಕಾಗಿತ್ತೋ ಅದು ನಮಗೆ ಐದನೆಯ ಫೈನಾನ್ಸ್ ಕಮಿಷನ್ ನಿಂದ ಬಂದಿದ್ದರೆ ಈ ರೀತಿ ಸ್ಪೆಷಲ್ ಅಡ್‌ಹಾಕ್ ಅಸಿಸ್ಟೆನ್ಸ್ ಬೇಕಾಗುತ್ತಾ ಇರಲಿಲ್ಲ. ಸ್ಪೆಷಲ್ ಅಸಿಸ್ಟೆನ್ಸ್ ಕೊಟ್ಟಿರುವುದರಿಂದ ಬೈ ಇಂಪ್ಲಿಕೇಷನ್ ಐದನೆಯ ಆಯೋಗದವರಿಂದ ಸಾಕಷ್ಟು ಹಣ ಬರಲಿಲ್ಲ. ನಾನ್ ಪ್ಲಾನ್ ಮತ್ತು ಪ್ಲಾನ್ ಎಕ್ಸ್‌ಪೆಂಡೀಚರ್ ಕೊರತೆ ಬರುವ ಸಂದರ್ಭವನ್ನು ಒಪ್ಪಿಕೊಂಡಿರುವುದು ಸ್ಪಷ್ಟವಾಗುವುದರಿಂದ ಅಸಿಸ್ಟೆನ್ಸ್ ಬೇಕಾಗುತ್ತದೆ, ಇಲ್ಲದಿದ್ದರೆ ಈ ರೀತಿ ಸ್ಪೆಷಲ್ ಅಸಿಸ್ಟೆನ್ಸ್ ಬೇಕಾಗುತ್ತಾ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಿಂದಿನ ಆರ್ಥಿಕ ಆಯೋಗದವರು ಅವಾರ್ಡ್ ಮಾಡುವುದರಲ್ಲಿ ರಾಜ್ಯ ಸರ್ಕಾರಕ್ಕೆ ಎಷ್ಟು ಕಡಮೆ ಅವಾರ್ಡ್ ಮಾಡಿದ್ದಾರೆ? ಎರಡನೆಯದು ಸ್ಪೆಷಲ್ ಅಸಿಸ್ಟೆನ್ಸ್ ಅಥವಾ ಗ್ರಾಂಟ್ಸ್ ಏನು ಇವೆ, ಅವನ್ನು ಯಾವುದೇ ಫೈನಾನ್ಸ್ ಕಮಿಷನ್ ಆದರೂ ಕೂಡ ರಾಜ್ಯಕ್ಕೆ ಎಷ್ಟು ಕೊಡಬೇಕೋ ಅಷ್ಟನ್ನು ಕಡಿಮೆ ಮಾಡಿದರೆ. ಕೊರತೆಗೋಸ್ಕರ ಸ್ಪೆಷಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ ಎಂದಲ್ಲ. ಅವಾರ್ಡನ್ನು ಸರಿಯಾಗಿ ಕೊಡದೆ ಹೋದರೆ ಸ್ಪೆಷಲ್ ಅಸಿಸ್ಟೆನ್ಸ್ ಮತ್ತು ಗ್ರಾಂಟ್ ಇರುತ್ತಾ ಇರಲಿಲ್ಲವೇ? ಐದನೆಯ ಆಯೋಗದವರು ಕೊರತೆ ಮಾಡದೆ ಸರಿಯಾಗಿ ಅವಾರ್ಡ್ ಕೊಟ್ಟಿದ್ದಾರೆ ಎಂದು ಇಟ್ಟುಕೊಳ್ಳೋಣ. ಆಗ ಕೇಂದ್ರಸರ್ಕಾರದವರು ಸ್ಪೆಷಲ್ ಅಸಿಸ್ಟೆನ್ಸ್ ಮತ್ತು ಗ್ರಾಂಟ್ಸ್ ಅನ್ನು ಕೊಡುತ್ತಾ ಇರಲಿಲ್ಲವೆ ?

ಶ್ರೀ ಎಂ. ವೈ. ಘೋರ್ಪಡೆ.—ಸಾಕಷ್ಟು ಹಣ ಬಂದಿದ್ದರೆ, ನಾನ್ ಪ್ಲಾನ್ ನಮ್ಮ ರಾಜ್ಯದಲ್ಲಿ ಇಲ್ಲದೆ ಹೋಗಿದ್ದರೆ, ನಮ್ಮ ಲೆಕ್ಕದ ಪ್ರಕಾರ ಆಯೋಗದವರು ಕೊಟ್ಟಿದ್ದರೆ ಸ್ಪೆಷಲ್ ಅಸಿಸ್ಟೆನ್ಸ್‌ನ ಅವಶ್ಯಕತೆ ಇರುತ್ತಾ ಇರಲಿಲ್ಲ. ಫೈನಾನ್ಸ್ ಕಮಿಷನ್‌ನಿಂದ ಇಷ್ಟು ಕೋಟಿ ಬರಬೇಕಾಗಿತ್ತು, ಇಷ್ಟು ಕೋಟಿ ರೂಪಾಯಿಗಳ ಅನ್ಯಾಯವಾಗಿದೆ ಎಂದು ಹೇಳುವುದು ಬಹಳ ಕಷ್ಟ. ಒಂದು ಮಾತು ಹೇಳಬಹುದು, ನಾಲ್ಕನೆಯ ಫೈನಾನ್ಸ್ ಕಮಿಷನ್ ನಿಂದ ಏನು ಹಣ ಬಂತೋ ಅದಕ್ಕಿಂದ 18 ಕೋಟಿ ರೂಪಾಯಿ ಕಡಿಮೆ ಐದನೆಯ ಫೈನಾನ್ಸ್ ಕಮಿಷನ್‌ನವರಿಂದ ಹಣ ಬಂತು ನಾನ್ ಪ್ಲಾನ್ ಗ್ಯಾಪ್ ಮತ್ತು ಪ್ಲಾನ್ ಗ್ಯಾಪ್ ಬಂದರೂ ಕೂಡ ಅದರಲ್ಲಿ ಇನ್ ಅಡಿಕ್ವಸಿ ರಿಫ್ಲೆಕ್ಟ್ ಆಗುತ್ತದೆ. ಲೆಕ್ಕದ ಪ್ರಕಾರ ಫೈನಾನ್ಸ್ ಕಮಿಷನ್‌ನಿಂದ ಇಷ್ಟು ಬರಬೇಕಾಗಿತ್ತು, ಇಷ್ಟೇ ಕೋಟಿ ರೂಪಾಯಿ ಅನ್ಯಾಯವಾಗಿದೆ ಎಂದು ಹೇಳುವುದು ಬಹಳ ಕಷ್ಟ.

(ii) *re* : Demonstration by the post-graduate Students in Manasa Gangothri, Mysore

SRI N. S. GURUSIDDAPPA (Beligere).—Sir I call the attention of the Minister for Education to the demonstration by the post graduates students of Psychology Department in Manasa Gangothri. Mysore

SRI A. R. BADARINARAYANA (Minister for Education).—I wish to make a statement on this behalf. About 50 students consisting of 25 boys and 25 girls studying in the Post-Graduate Course in Manasagangotri, majority of whom belong to the Post-Graduate Department of Psychology submitted on 29-1-1973 a petition to the Registrar alleging that Sri Parashivamurthy, Lecturer in Psychology in the Post-Graduate Department of Psychology conducted himself with a lady student in a manner that was not benefitting. Among the lady students Smt. K. Rajalakshmi, Smt. Shamantha Kamani and Smt. Kalyani Nair submitted individual representations to the effect that Sri Parashivamurthy had behaved in a very unpleasant manner with these lady students.

(SRI A. R. BADARINARAYANA)

2. The students desired that immediate action should be taken against the Teacher and also called on the Vice-Chanceller at his residence and submitted a similar petition and the Vice-Chancellor assured the students that he would initiate immediate necessary action in the matter.

3. On 30-1-1973 the students went on strike. The Professor and Head of the Department of Psychology called for the explanation of Sri Parashivamurthy on the charges made against him by the students and also advised Sri Parashivamurthy that he should not take any classes in the Post-Graduate Department and he was also not entrusted with any examination work.

4. Sri Parashivamurthy applied for a month's leave from 31-1-1973 and he is now undergoing treatment in the Krishnarajendra Hospital. Since the students started a Hunger Strike on 1-2-1973 commencing from 8-00 A. M. the Head of the Department of Psychology and the Dean of Students Welfare met the students on Hunger Strike and after discussion with them and subsequent discussion with the Registrar and the Vice-Chancellor orders were issued transferring Sri Parashivamurthy to Maharaja's College after which the Students called off the strike.

5. But on 5-2-1973 there was a counter agitation of other students of the Post-Graduate Department urging for retransferring of Sri Parashivamurthy to Manasagangotri and to institute a through enquiry. On 6-2-1973 a group of students who originally started their agitation resumed their hunger strike in the morning in order to impress upon the University Authorities that they should not retract from the original decision. An emergent meeting of the University Syndicato was held on 9 2-1973 and the Syndicate has constituted an Enquiry Committee consisting of 5 Members of the Syndicate. The Enquiry Committee is continuing its deliberations and a final decision in this behalf is awaited. The situation is peaceful and normal.

ಶ್ರೀ ಎನ್. ಎಸ್. ಗುರುಸಿದ್ದಪ್ಪ.— ಎನ್‌ಕ್ವೈಯರಿ ರಿಪೋರ್ಟ್ ಬಂದ ಮೇಲೆ ಈ ಸಭೆಯ ಗಮನಕ್ಕೆ ತರುತ್ತೀರಾ, ಅದರಲ್ಲಿ ಯಾರಿಗಾದರೂ ಅನ್ಯಾಯವಾಗಿದ್ದರೆ ಸರಿಪಡಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಎನ್‌ಕ್ವಯರಿ ರಿಪೋರ್ಟ್ ಬಂದಮೇಲೆ ವಿಮರ್ಶೆ ಮಾಡಿ ನ್ಯಾಯವನ್ನು ಮಾಡುವುದಕ್ಕೆ ಏನೂ ಅಭ್ಯಂತರವಿಲ್ಲ.

ಶ್ರೀ ಎನ್. ಎಸ್ ಗುರುಸಿದ್ದಪ್ಪ.—ಈಚೆಗೆ ಮೈಸೂರು ಯೂನಿವರ್ಸಿಟಿಯಲ್ಲಿ ಸ್ವಜಾತಿ, ಜಾತೀಯತೆ ಮತ್ತು ಗುಂಪುಗಾರಿಕೆ ವಿಪರೀತವಾಗಿ ಬೆಳೆಯುತ್ತಿದೆ. ಅದನ್ನು ಏನಾದರೂ ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ಎಜಿಟೇಷನ್ ಮತ್ತು ಕೌಂಟರ್ ಎಜಿಟೇಷನ್ ನೋಡಿದರೆ ನಿಜವಾಗಿ ಗುಂಪುಗಾರಿಕೆ ಕಾಣುತ್ತದೆ. ಅಂಥಾದ್ದು ಏನಾದರೂ ಸರ್ಕಾರದ ಗಮನಕ್ಕೆ ತಂದರೆ, ಅಂಥವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಸರಿಪಡಿಸುತ್ತೇವೆ, ಗುಂಪುಗಾರಿಕೆ ಎಂದು ಹೇಳುವುದನ್ನು ಒಪ್ಪುವುದಿಲ್ಲ. Disgruntled and disatisfied people are there everywhere. They only form themselves into opposition camps and create this situation.

ಶ್ರೀ ಎಚ್. ಡಿ. ದೇವೇಗೌಡ.— ಏನು ಘಟನೆ ನಡೆದಿದೆ ಆ ಘಟನೆ ವಿಷಯದ ಬಗ್ಗೆ ನಾನು ಅದರ ಮೆರಿಟ್ಸ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದು ದುರ್ದೈವದ ಘಟನೆ. ವಿಚಾರಣೆ ಮಾಡುವುದಕ್ಕೆ ಈ ಕಮಿಟಿ ಏನು ಕಾನ್ಸಿಟ್ಯೂಟ್ ಮಾಡಿದ್ದಾರೆ ಇದರ ಬಗ್ಗೆ ಯಾವ ಭಾವನೆಯನ್ನೂ ಎಕ್ಸ್‌ಪ್ರೆಸ್ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಒಂದೇ ಕೋಮಿಗೆ ಸೇರಿದವರು ಈ ಕಮಿಟಿಯಲ್ಲಿದ್ದಾರೆ ಎಂದು ಒಂದು ಕಡೆ ಅಸಮಾಧಾನ ಬೆಳೆಯುತ್ತಿದೆ ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಏತಕ್ಕೆ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ ಎಂದರೆ ಅಲ್ಲ ಜಾತಿಜಾತಿಗಳಲ್ಲಿ ವೈಷಮ್ಯವನ್ನು ಬೆಳೆಯತಕ್ಕದ್ದಕ್ಕೆ ಕಲವು ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ. ಅದುದರಿಂದ ಎನ್‌ಕ್ವೈರಿ ಆದ ಮೇಲೆ ಯಾರಿಗೂ ಇದರಿಂದ ಅನ್ಯಾಯವಾಗಬಾರದು; ಯಾವುದೇ ತರಹವಾದ ಪ್ರಚೋದನೆಗೂ ಯಾವರೀತಿಯಾದ ಲೋಪದೋಷಗಳಿಗೂ ಅವಕಾಶವಾಗಬಾರದು. ದಯಮಾಡಿ ಸರ್ಕಾರ ಎಲ್ಲಾ ರೀತಿಯ ಮುಂಜಾಗ್ರತೆ ಕ್ರಮ ವಹಿಸಿ ನ್ಯಾಯ ದೊರಕಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ನಂಬಿದ್ದೇನೆ. ಈ ಎನ್‌ಕ್ವೈರಿ ಕಮಿಟಿಯಲ್ಲಿ ಒಂದೇ ವರ್ಗದವರು ಇದ್ದಾರೆಂದು ನನಗೆ ರಿಪೋರ್ಟು ಬಂದಿದೆ. ಈಗ ಯಾವುದೇ ಜಾತಿಯ ಹೆಸರು ಹೇಳುವುದು ಬೇಡ. ಇದರಿಂದ ಕೆಟ್ಟ ಪರಿಣಾಮವಾಗಬಾರದು.

Sri A. R. BADARINARAYANA.—I perfectly agree with the Hon. Leader of the Opposition that we should take a very objective view of the whole matter. Government is very deeply interested in seeing that no innocent person is put into inconvenience or trouble. In the first instance, it is the University that has to take the action and the University has referred it to the Syndicate. The Syndicate has referred it to a Sub-Committee. We cannot pre-judge what action we should take. And, if it is found that the Syndicate Members of the University have taken a personal attitude, I think the Government will interfere and see that justice is done.

Providing a debate on the Draft State fifth five year Plan

ಶ್ರೀ ಎಚ್. ಡಿ. ದೇವೇಗೌಡ.—ಫೈನಾನ್ಸ್ ಮಿನಿಷ್ಟರು ಈ ಸಭೆಯಲ್ಲಿ ಇರುವುದರಿಂದ 5ನೇ ಪ್ಲಾನ್‌ನ ಏನು ಡ್ರಾಫ್ಟ್ ರಿಪೋರ್ಟು ಇದೆ ಅದನ್ನು ಚರ್ಚೆ ಮಾಡುವುದಕ್ಕೆ ಸಭೆಯಲ್ಲಿ ಅವಕಾಶ ಮಾಡಿಕೊಡಬೇಕು ಎಂದು ಕೇಳುತ್ತೇನೆ. ಬಹುಶಃ ಅವರು ಒಪ್ಪಿಕೊಳ್ಳುತ್ತಾರೆಂದು ನನ್ನ ಭಾವನೆ.

Sri M. Y. GHORPADE.—The suggestion has come all of a sudden. The position regarding the 5th Plan is that the detailed plan is under preparation. So far as the resources are concerned, this will be known only towards the end of the year. As the Hon. Leader of the Opposition knows, the Finance Commission is expected to give its award some time in October and then we expect to have discussion at the Planning Commission level in the last quarter of this year. And, the 5th Plan will be really finalised and synchronised from the next year. Is it not so? So, I think the right time to consider this suggestion would be after the Finance Commission gives its award because the time-table for the actual finalisation of the 5th Plan depends not only on the 6th finance Commission's award but the finalisation of the All-India plan. Let us wait for a few more months when the picture becomes clear and at that time we will consider the suggestion. I think the Hon. Leader of the Opposition would not expect me to make a commitment at this stage.

Sri M. S. KRISHNAN.—The only point is that it is not only a question of finding resources for the 5th Plan and finalisation of the details which you are already trying to do. but, I think the approach to the 5th Plan. Wha exactly is the approch to the 5th Plan that the Mysore Government has got ? This is a matter which has already been discussed by the various State Governments. Here also last time when I asked a question something was given. The entire House was in the knowledge of it. A discussion on that might be useful now, so that on the basis of that discussion, a proper approach could be taken regarding the plan and the position could be worked out.

Sri M. Y. GHORPADE.—As the hon. Member knows, in plan documents, there is no attempt to shut out discussion. As a matter of fact, Governments benefit by such public discussion of plan documents. That is the whole idea with which the draft paper plan has been issued by the Planning Commission. Now of course, broad indications have been given. In the absence of detailed knowledge regarding resources we can at this stage, only go on a broad basis. For instance, one indication - that is a very rough indication—would be to have a double sized plan. It is on this basis that sometime earlier, I had indicated what the magnitude of the Mysore Plan is likely to be from the point of view of our needs. I said that it may even be of the order of about a thousand crores. If we draw up a plan based opon our needs and the tempo of development that we would like to achieve, once we make such a projection, it will have to be tempered taking nto account the actuality regarding resources. Therefore, as soon as this exercise is over,—we have already some sort of exercise being done—; a detailed exorcise is being done there; after a few months, we can consider whether discussion in this House could be held regarding the broad plan objectives, so for as Mysore is concerned. Subject to this very important rider that the final Plan will have to be fitted into the resources frame-work that will emerge after the VIth Finance Commission gives its award subject to that rider we can discuss the broad objectives and directions and the aproach. There is no difficulty about it.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಾಜೆಕ್ಟ್ ಟುವರ್ಡ್ಸ್ ದಿ ಪೀಪಲ್ ಪ್ಲಾನ್ ಎನ್ನುವ ತತ್ವವನ್ನು ಒಪ್ಪಿಕೊಂಡು ಹೇಳುತ್ತಿದ್ದಾರೆ, ಆ ದೃಷ್ಟಿಯಿಂದ 5ನೇ ಪಂಚವಾರ್ಷಿಕ ಯೋಜನೆ ಸಿದ್ಧಪಡಿಸುವ ಮುನ್ನ ನಾವು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಏನು ಸಲಹೆಗಳನ್ನು ನಾವು ಕೊಡಬೇಕು ಎನ್ನುವುದನ್ನು ಸ್ವಲ್ಪ ಚರ್ಚೆಮಾಡಿ ವಿಚಾರಮಾಡಿ ಸಂಗ್ರಹಣೆ ಆದಂಥ ವಿಚಾರದ ಆಧಾರದ ಮೇಲೆ ಯೋಜನೆ ಸಿದ್ಧಪಡಿಸಿದರೆ ಪೀಪಲ್ ಪ್ಲಾನ್ ಮಾಡುವುದಕ್ಕೆ ಅಂತಿಮವಾಗಿ ಸಾಧ್ಯವಾಗಬಹುದು. ಇಂತಹ ಒಂದು ಅಂತಿಮವಾದ ಯೋಜನೆ ಸಿದ್ಧಪಡಿಸುವುದಕ್ಕೆ ಮುಂಚೆ ಇಲ್ಲಿ ಚರ್ಚೆಗೆ ಸಾಕಷ್ಟು ಅವಕಾಶ ಮಾಡಿಕೊಡಬೇಕು, ಮತ್ತು ಇಲ್ಲಿ ಬಂದ ಎಲ್ಲಾ ಸಲಹೆಗಳನ್ನು ಕ್ರೋಢೀಕರಿಸಿ ಈ ಯೋಜನೆ ಸಿದ್ಧಪಡಿಸುವುದಕ್ಕೆ ಅವಕಾಶಮಾಡಿಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ನಮ್ಮ ಉದ್ದಿಶ್ಯ ಕೂಡ ಹಾಗೆ ಇದೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಸ್ವಲ್ಪ ಇದರ ಬಗ್ಗೆ ಚರ್ಚೆಮಾಡಬೇಕು, ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕು ಈ ಕಾರ್ಯಗಳನ್ನು ರೂಢಿಸಿ ಪೀಪಲ್ ಪ್ಲಾನ್ ಎಂದು ಏನು ಹೇಳುತ್ತಾ ಬಂದಿದ್ದೇವೆ ಆ ರೀತಿ ಮಾಡಲು ಅವಕಾಶ ಕಡಿಮೆ ಇದ್ದರೂ ಕೂಡ ನಾವು ಪ್ರಯತ್ನ

ಮಾಡುತ್ತಿದ್ದೇವೆ. ಉದಾಹರಣೆಗೆ ಬೇಸಿಕ್ ಅಮೆನಿಟೀಸ್ ಏನು ಇವೆ ಆ ಬೇಸಿಕ್ ಅಮೆನಿಟೀಸ್ ತಾಲ್ಲೂಕು ಮಟ್ಟದಲ್ಲಿ ಇಂತಿಷ್ಟು ಎಂದು ಮಾಡಬೇಕಾಗುತ್ತದೆ. ಯಾವ ತಾಲ್ಲೂಕು ಮಟ್ಟದಲ್ಲಿ ಬೇಸಿಕ್ ಅಮೇನಿಟೀಸ್ ಎಷ್ಟರಮಟ್ಟಿಗೆ ಇದೆ ಅದನ್ನು ನೋಡಿಕೊಂಡು ಅದನ್ನು ಉತ್ತಮಪಡಿಸುವ ದೃಷ್ಟಿಯಿಂದ ನಾವು ಹೆಜ್ಜೆ ಇಡಬೇಕಾಗುತ್ತದೆ. ಈಗಾಗಲೇ ಒಂದು ಪ್ರೀಫಾರ್ಮ್ ರೀತಿಯಲ್ಲಿ ಮಾಡುತ್ತಾ ಇದ್ದೇವೆ. ತಾಲ್ಲೂಕು ಮಟ್ಟಕ್ಕೆ ಕೆಲವು ಬೇಸಿಕ್ ಅಮೆನಿಟೀಸ್ ಎಂದರೆ ಎಂಪ್ಲಾಯ್ಮೆಂಟ್ ದೃಷ್ಟಿಯಿಂದ ಅಲ್ಲಿ ಕಷ್ಟದ ಪರಿಸ್ಥಿತಿ ಏನು ಇದೆ ಅದನ್ನು ತಿಳಿದುಕೊಂಡು ಸರಿಪಡಿಸಬೇಕು. ಅದೇ ರೀತಿ ಬೇಸಿಕ್ ಅಮೆನಿಟೀಸ್ ಇರಿಗೇಷನ್ ಬಗ್ಗೆ ಎಷ್ಟಿದೆ. ಅದನ್ನು ಎಷ್ಟರಮಟ್ಟಿಗೆ ಜಾಸ್ತಿಮಾಡಬೇಕು ಮತ್ತು ಪವರ್ ಎಷ್ಟಿದೆ ಅದನ್ನು ಎಷ್ಟರಮಟ್ಟಿಗೆ ಹೆಚ್ಚಿನ ರೀತಿಯಲ್ಲಿ ಒದಗಿಸಬೇಕು ಎಂಬ ವಿಷಯಗಳು ಇವೆ. ಇದೆಲ್ಲಾ ಹಣಕಾಸಿನ ಮೇಲೆ ಅವಲಂಬನೆ ಆಗುತ್ತದೆ.

ಎಂಪ್ಲಾಯ್‌ಮೆಂಟ್ ಎಂದರೆ ಸುಲಭವಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಕಡೆ ನೋಡುತ್ತಾರೆ. ಅದು ಒಂದು ಕಡೆ. ಇಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಎಂದರೆ ಬೇರೆ ಬೇರೆ ತರಹ ಅನ್ ಎಂಪ್ಲಾಯ್‌ಮೆಂಟ್ ಇರುತ್ತದೆ, ಅನ್‌ಎಂಪ್ಲಾಯ್‌ಮೆಂಟ್ ಎಂದರೆ ಒಂದೇ ರೀತಿ ಇಲ್ಲ. ಈಗ ಕ್ಷಾಮ ಪರಿಸ್ಥಿತಿ ಇರುವ ಕಡೆ ಜನಗಳಿಗೆ ಕೆಲಸ ಇಲ್ಲ. ಅದೂ ಒಂದು ರೀತಿ ಅನ್ ಎಂಪ್ಲಾಯ್‌ಮೆಂಟ್. ಕ್ಷಾಮ ಇರುವ ಕಡೆ ಅದನ್ನು ತಡೆಗಟ್ಟಲಿಕ್ಕೆ, ಅದನ್ನು ಸರಿಪಡಿಸುವ ದೃಷ್ಟಿಯಿಂದ ಸಾಕಷ್ಟು ಕೆಲಸವನ್ನು ಎಷ್ಟು ಕೊಡಬೇಕಾಗುತ್ತದೆ ಎಂದು ನೋಡಬೇಕಾಗುತ್ತದೆ. ಇದು ಒಂದು ತರಹ. ಚೆಕ್ಕಿಕರ್ ಅನ್‌ಎಂಪ್ಲಾಯ್‌ಮೆಂಟ್ ಒಂದು ತರಹ. ಸಾಯಿಲ್ ಕನ್‌ಸರ್ವೇಷನ್‌ಗೋಸ್ಕರ ಎಷ್ಟೋ ಜನ ಡಿಪ್ಲೊಮಾ ಹೋಲ್ಡರ್ಸ್ ಬೇಕು, 200—250 ರೂಪಾಯಿ ಕೊಡುತ್ತೇವೆಂದರೂ ಕೂಡ ಸಾಕಷ್ಟು ಜನ ಸಕಾಲಕ್ಕೆ ಸಿಕ್ಕಲಿಲ್ಲ. ಅದರ ಜೊತೆಗೆ ಎಜ್ಯುಕೇಟೆಡ್ ಅನ್ ಎಂಪ್ಲಾಯ್ಡ್ ಇದ್ದಾರೆ. ಇದನ್ನು ಕೂಡ ತಿಳಿದುಕೊಳ್ಳಬೇಕಾಗುತ್ತದೆ. ಈ ದಿಕ್ಕಿನಲ್ಲಿ ನಾನು ಯೋಚನೆ ಮಾಡುತ್ತಿದ್ದೇನೆ. ಅನ್ ಎಂಪ್ಲಾಯ್‌ಮೆಂಟ್ ಎಂದರೆ ಅದು ಯಾವ ಯಾವ ತರಹ ಅನ್ ಎಂಪ್ಲಾಯ್‌ಮೆಂಟ್ ? ತಾಲ್ಲೂಕು ಮಟ್ಟದಲ್ಲಿದೆ, ಏನೊಂದು ಚಿತ್ರವಿದೆ, ಅದಕ್ಕಿಂತ ಸ್ಪಷ್ಟವಾದ ಚಿತ್ರವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಆ ನಂತರ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂಥ ಅನ್‌ಎಂಪ್ಲಾಯ್‌ಮೆಂಟಿನ ನಿವಾರಣೆಗೆ, ಮಾಡುವ ಪ್ರಯತ್ನಗಳ ಬಗ್ಗೆ ವಿವರಗಳನ್ನು ಕೊಡಬೇಕಾಗುತ್ತದೆ. ಅದೇ ರೀತಿ ಬೇಸಿಕ್ ಅಮೆನಿಟೀಸ್ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸ್ವಲ್ಪ ಚರ್ಚೆಮಾಡಿ ತಿಳಿದುಕೊಂಡು ಐದನೆಯ ಯೋಜನೆಯಲ್ಲಿ ಅದಕ್ಕೂ ಅವಕಾಶವನ್ನು ಕಲ್ಪಿಸಿ ಗ್ರಾಮಾಂತರ ಪ್ರದೇಶಗಳನ್ನು ರಿಯಲಿಸ್ಟಿಕ್ ಆಗಿ ಮಾಡಲಿಕ್ಕೆ ಸಾಧ್ಯ. ಇದೂ ಸರ್ಕಾರಕ್ಕೆ ಗೊತ್ತಿದೆ. ನಮಗೆ ಬಹಳ ಕಾಲಾವಕಾಶವಿದೆ. ಈ ಅವಧಿಯಲ್ಲಿ ಆ ದಿಕ್ಕಿನಲ್ಲಿ ಏನು ಮಾಡಲಿಕ್ಕೆ ಸಾಧ್ಯ ಎಂದು ಯೋಚನೆಮಾಡಿ ಆ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತದೆ.

Disturbances at the H. M. T. Bangalore

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—11-12-1972ರಲ್ಲಿ ರೂಲ್ 48ರ ಪ್ರಕಾರ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿದ್ದೆ. ಅದಕ್ಕೆ ಅವಕಾಶ ಸಿಕ್ಕಲಿಲ್ಲ ಹಾಗೆಯೇ ಮೊನ್ನೆ 15ನೇ ತಾರೀಖು ಎಚ್. ಎಂ. ಟಿ. ಯಲ್ಲಿ ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಸುಟ್ಟು ಹಾಕಿ ಗಲಭೆ ನಡೆದಿದೆ, ಆ ವಿಚಾರ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಅದರ ಬಗ್ಗೆ ಕೂಡ ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.— ಅದನ್ನು ನಾನು ನೋಡುತ್ತೇನೆ.

Reported Scuffle in the Meeting of the BCC on 16-3-1973

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಅಧ್ಯಕ್ಷರೇ, ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ನಗರಪಿತೃಗಳ ನಡುವೆ ಹೊಡೆದಾಟ, ಪರಸ್ಪರ ಹಲ್ಲೆ, ಮೈಕ್ ನಾಶ— ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಈ ರೀತಿಯ ಅವ್ಯವಸ್ಥೆಗಳು ಆಗುತ್ತಿವೆ. ಕಾಂಗ್ರೆಸ್ ಪಕ್ಷದವರೇ ಅಲ್ಲಿ ಆಡಳಿತ ನಡೆಸುವ ಪಕ್ಷವಾಗಿದ್ದುಕೊಂಡು ಕಾಂಗ್ರೆಸ್ ಸದಸ್ಯರು ಬಾಕಿಯವರ ಮೇಲೆ ಬಿದ್ದು ಹಲ್ಲೆ ಮಾಡುತ್ತಿರುತ್ತಾರೆ. ನನ್ನ ಅನುಭವದಲ್ಲಿ ಹಿಂದೆ...

ಅಧ್ಯಕ್ಷರು.—ಮಾನ್ಯ ಸದಸ್ಯರ ನೋಟೀಸ್ ಈಗ ಬಂದಿದೆ, ಸಭೆಯಲ್ಲಿ ಮಂತ್ರಿಗಳಿಲ್ಲ. ಅವರು ಬರಲಿ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಗಲಾಟೆ ನಡೆದಿದೆ, ಹೊಡೆದಿದ್ದಾರೆ, ಬಡಿದಿದ್ದಾರೆ ಎಂದು ದಪ್ಪ ಅಕ್ಷರಗಳಲ್ಲಿ ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮೇಯರ್ ಅವರ ಮುಂದೆಯೇ ಈ ರೀತಿ ಆಗುತ್ತಿದೆ. ವಿರೋಧಪಕ್ಷದವರು ಇದ್ದರೂ ಯಾರೂ ಹೇಳುವುದಿಲ್ಲ, ಕೇಳುವುದಿಲ್ಲ. ಸರ್ಕಾರ ಅವರ ಪಕ್ಷದ ಕೈಯಲ್ಲಿಯೇ ಇದೆ, ಏನು ತಪ್ಪು ಮಾಡಿದರೂ ನಡೆದುಹೋಗುತ್ತದೆ ಎಂದು ವಿರೋಧ ಪಕ್ಷದವರು ಹೇಳುವುದನ್ನು ಕೇಳುವುದೇ ಇಲ್ಲ. ಹಾಗೆ ಮಾಡುವುದು ಸರಿಯಿಲ್ಲ ಎಂದು ಹೇಳುವುದಕ್ಕೆ ಹೋದರೆ ತಕ್ಷಣ ಕಾಂಗ್ರೆಸ್ ಸದಸ್ಯರು ಬಂದು ಕತ್ತಿನ ಮೇಲೆ ಏಟು ಹೊಡೆದು ಹಲ್ಲೆ ಮಾಡಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಕಾರ್ಪೊರೇಷನ್ ಒಂದು ಸ್ವತಂತ್ರವಾದ ಸಂಸ್ಥೆ, ಅಲ್ಲಿ ಕಾರ್ಪೊರೇಟರುಗಳಾಗಿರುವವರು ಕೆಲವರು ಇಲ್ಲಿಯೂ ಸದಸ್ಯರಾಗಿದ್ದಾರೆ. ನಡೆದ ವಿಚಾರಗಳ ಬಗ್ಗೆ ಇಲ್ಲಿ ಮಾತನಾಡುವುದು, ಇಲ್ಲಿ ನಡೆದುದರ ಬಗ್ಗೆ ಅಲ್ಲಿ ಹೋಗಿ ಮಾತನಾಡುವುದು ಹೀಗೆ ಇರುವುದರಿಂದ ಎಷ್ಟರಮಟ್ಟಿಗೆ ಈ ಬಗ್ಗೆ ಪ್ರೊಟೆಕ್ಷನ್ ಇರಬೇಕು ಎನ್ನುವುದರ ಬಗ್ಗೆ ವಿವರವಾದ ರೂಲಿಂಗ್ ಕೊಡಬೇಕು ಎಂದು ಉಪನಾಯಕರು ನನ್ನನ್ನು ಕೇಳಿದ್ದಾರೆ. ಈ ಅಧಿವೇಶನದಲ್ಲಿಯೇ ನಾನು ಅದರ ಬಗ್ಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಾಗಲೀ, ಮುನಿಸಿಪಾಲಿಟಿಗಳಲ್ಲಾಗಲೀ, ತಾಲ್ಲೂಕು ಬೋರ್ಡುಗಳಲ್ಲಾಗಲೀ, ವಿರೋಧ ಪಕ್ಷದ ಸದಸ್ಯರು ಉಳಿಯುವುದಕ್ಕೆ ಆಗುತ್ತಿಲ್ಲ. ಅಷ್ಟು ಹದ್ದುಮೀರಿ ವರ್ತಿಸುತ್ತಿದ್ದಾರೆ.

ಅಧ್ಯಕ್ಷರು.—ಒಂದಕ್ಕೊಂದಕ್ಕೆ ಸಂಬಂಧ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ನಗರ ಕಾರ್ಪೊರೇಷನ್ ವಿರೋಧ ಪಕ್ಷದ ಸದಸ್ಯರಿಗೆ ರಕ್ಷಣೆ ಇಲ್ಲ. ಸರ್ಕಾರ ರಕ್ಷಣೆ ಕೊಡದೆ ಇದ್ದರೆ ನಾವು ಯಾರೂ ಉಳಿಯುವುದಕ್ಕಾಗುವುದಿಲ್ಲ. ನಾವು ಸಭೆಗಳಿಗೆ ಹೋಗಬೇಕೇ ಬೇಡವೇ ಎನ್ನುವ ಪರಿಸ್ಥಿತಿ ಬಂದಿದೆ. ಮಾನ್ಯ ಮಂತ್ರಿಗಳಿಲ್ಲದೇ ಇದ್ದರೂ ಉಪಸಭಾ ನಾಯಕರು ಸಭೆಯಲ್ಲಿದ್ದಾರೆ, ಅವರು ಒಂದು ಹೇಳಿಕೆ ಕೊಡಬಹುದು,

ಅಧ್ಯಕ್ಷರು.—ಮಂತ್ರಿಗಳು ಈಗ ಇಲ್ಲ, ಅವರು ಬಂದ ನಂತರ ವಿವರಗಳನ್ನು ತಿಳಿದುಕೊಂಡು ಹೇಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸಂಬಂಧಪಟ್ಟ ಮಂತ್ರಿಗಳು ವಿವರಗಳನ್ನು ಕೊಡಬೇಕು, ಕೊಟ್ಟರೆ ಸಂತೋಷ. ನಮಗೆ ತಿಳಿದಮಟ್ಟಿಗೆ ಬೆಂಗಳೂರು ನಗರ ಪ್ರದೇಶದಲ್ಲಿ ಯಾವುದೋ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಹಾಕಬೇಕು ಎನ್ನುವ ವಿಷಯ ಚರ್ಚೆ ನಡೆದಾಗ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಯಾವುದೇ ವಿಷಯದಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷಗಳು ಚರ್ಚೆ ಮಾಡಿ ಒಂದು ಇತ್ಯರ್ಥ ಮಾಡಬೇಕು. ಚರ್ಚೆ ಮಾಡಿ ಇತ್ಯರ್ಥ ಮಾಡುವುದಕ್ಕೆ ಬದಲು ಚರ್ಚೆ ಮಾಡುವುದಕ್ಕೆ ಎದ್ದು ನಿಂತವರನ್ನೇ ಹೊಡೆದರು.

ಅಧ್ಯಕ್ಷರು.—ನೋಟಿಸ್ ನನ್ನ ಹತ್ತಿರ ಬಂದಿದೆ, ಅದನ್ನು ಇನ್ನೂ ಸರ್ಕಾರಕ್ಕೆ ಕಳುಹಿಸಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀ ವಾಟಾಳ್ ನಾಗರಾಜ್ ಅವರು ಮತ್ತು ಟಿ.ಆರ್. ಶಾಮಣ್ಣನವರು ಆ ದಿನ ಸಭೆಯಲ್ಲಿ ಇರಲಿಲ್ಲ. ಇದ್ದಿದ್ದರೆ ಅವರ ತಲೆಬುರುಡೆ ಒಡೆದು ಅಲ್ಲಿ ಏನು ಪರಿಸ್ಥಿತಿಯಾಗುತ್ತಿತ್ತೋ ಗೊತ್ತಿಲ್ಲ. ಕಾರ್ಪೊರೇಷನ್ ನಡವಳಿಕೆಗಳು ನಗೆಪಾಟಲಾಗಿದೆ. ಗುರುತರವಾದ ಆಪಾದನೆಗಳು ಇವೆ. ಆದಕಾರಣ ಮಾನ್ಯ ಮಂತ್ರಿಗಳು ಸರಿಯಾದ ಹೇಳಿಕೆ ಕೊಡಬೇಕು.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).–ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಬೆಳಿಗ್ಗೆ ನೋಡಿದೆ. ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಹೇಳುವುದನ್ನೆಲ್ಲ ನಾನು ಪೂರ್ತಿಯಾಗಿ ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಒಬ್ಬರ ಮೇಲೆ ಮತ್ತೊಬ್ಬರು ಉತ್ಪ್ರೇಕ್ಷೆ ಮಾಡಿ ಹೇಳತಕ್ಕ ವಿಷಯಗಳು ಇರುವುದರಿಂದ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಡುವುದಕ್ಕೆ ಮೊದಲು

10-30 A. M.

ಮೇಯರ್ ಅವರನ್ನೂ ಕರೆಸಿ, ಪಾರ್ಟಿ ಅಧ್ಯಕ್ಷರನ್ನೂ ಕರೆಸಿ ಪೂರ್ಣ ವಿವರಗಳನ್ನು ಪಡೆದು ನಂತರ ಸರ್ಕಾರ ಹೇಳಿಕೆ ನೀಡುವುದು ಸೂಕ್ತ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಹಾಗೆಯೇ ಕಾರ್ಪೋರೇಷನ್ ಅಧ್ಯಕ್ಷರನ್ನೂ ಕರೆಸಿ, ಅವರ ಹೇಳಿಕೆಯನ್ನು ತೆಗೆಸುಕೊಳ್ಳಿ. ಟೇಪ್ ರಿಕಾರ್ಡನ್ನೂ ತರಿಸಿ, ಸಂಪೂರ್ಣವಾದ ವಿವರಗಳನ್ನು ತರಿಸಿಕೊಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗೆಯೇ ವಿರೋಧ ಪಕ್ಷದವರನ್ನೂ ಕೂಡ ಕರೆಸಬೇಕು ಅವರ ಹೇಳಿಕೆಯನ್ನೂ ಕೂಡ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ, ನಿನ್ನೆ ನಡೆದಿರತಕ್ಕಂಥ ಘಟನೆ ಈ ಪ್ರಜಾ ಪ್ರಭುತ್ವದಲ್ಲಿ ವಿಶ್ವಾಸ ಹೊಂದಿರತಕ್ಕಂಥ ಜನಕ್ಕೆ ಒಂದು ರೀತಿ ಅಸಮಾಧಾನ ತಂದಿರತಕ್ಕಂಥ ಘಟನೆ ಯಾಗಿದೆ. ಲೋಕಸಭೆಯಲ್ಲೂ ಕೂಡ ಸದಸ್ಯರಿಬ್ಬರು ಕೈಕೈ ಮಿಲಾಯಿಸಿದ ಅಪೂರ್ವ ಘಟನೆ ನಡೆದಿದೆ. ಈ ವಿಷಯದಲ್ಲಿ ನಿನ್ನೆ ದಿವಸ ಹೇಳಬೇಕು ಎಂದು ಎದ್ದಾಗ ನೀವು ಸ್ವಲ್ಪ ಹಾಲ್ಅಪ್ ಮಾಡುವುದಕ್ಕೆ ಪ್ರಯತ್ನ ಮಾಡಿದಿರಿ. ಇದು ಯಾವುದೇ ಒಂದು ಪಕ್ಷಕ್ಕಾಗಲಿ ಸೀಮಿತವಾದುದು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಪ್ರಜಾ ತಂತ್ರದಲ್ಲಿ ವಿಶ್ವಾಸ ಉಳ್ಳತಕ್ಕಂಥಾವರು ಇಂಥಾ ಘಟನೆ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಅಸೆಂಬ್ಲಿಯಲ್ಲಾಗಲಿ, ಪಾರ್ಲಿಮೆಂಟ್‌ನಲ್ಲೇ ಆಗಲಿ, ಕಾರ್ಪೋರೇಷನ್‌ನಲ್ಲೇ ಆಗಲಿ, ಅದು ಎಲ್ಲೇ ನಡೆಯಲಿ ಇಂಥಾ ಘಟನೆ ನಡೆಯುವುದು ಚೆಂದವಲ್ಲ. ಇವೊತ್ತಿನ ಪರಿಸ್ಥಿತಿ ಎಲ್ಲಿಗೆ ಹೋಗಿ ಮುಟ್ಟಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಹಿಂದೆ ಗೌರ್ನರ್ ಭಾಷಣದಲ್ಲಿ ನಮ್ಮ ಅರ್ಥ ಸಚಿವರು ಹೇಳಿದರು ಡೆಮಾ-ಕ್ರಟಿಕ್ ವೇನಲ್ಲಿ ಆಗತಕ್ಕಂಥ ಕೆಲಸಕ್ಕೆ ಈ ಪ್ರಜಾತಂತ್ರದಲ್ಲಿ ತಿಲಾಂಜಲಿ ಕೊಟ್ಟಿದ್ದೇವೆ ಎಂದು. ಮೊನ್ನೆ ಕಾರ್ಪೋರೇಷನ್‌ನಲ್ಲಿ ಆಗತಕ್ಕಂಥ ಗಲಾಟೆ ಜೊತೆಗೆ ಕೆಲವು ರಿಕಾರ್ಡ್‌ಗಳೇ ಇಲ್ಲ ಎನ್ನುವುದು ಪತ್ರಿಕೆಯಲ್ಲಿ ವರದಿಯಾಗಿದೆ ಮತ್ತು ನಗರಸಭೆ ಮಾಡಿಕೊಂಡಿರುವ ಲಕ್ಷಾಂತರ ರೂಪಾಯಿನ ಲೀಸ್ ಫೈಲುಗಳು ಕಣ್ಮರೆಯಾಗಿದೆ ಎಂದು ಕೂಡ ಪತ್ರಿಕೆಯಲ್ಲಿ ವರದಿಯಾಗಿದೆ. ಆದುದರಿಂದ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕು. ಅಲ್ಲದೆ ಈ ಸಭೆಯು ತನ್ನ ತೀವ್ರತೆಯನು ವ್ಯಕ್ತಪಡಿಸಬೇಕು.

ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಹೇಳುವುದಾದರೆ ಈ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಉಳ್ಳತಕ್ಕಂಥಾವರು ಯೋಚನೆ ಮಾಡುತ್ತಾರೆ. ಇದು ಒಂದು ಕೋಯಿನ್‌ಸಿಡೆನ್ಸ್ ಎಂದು ಹೇಳ ಬಹುದು. ಇನ್ನೂ ಒಂದು ವಿಷಯ ಪತ್ರಿಕೆಯಲ್ಲಿ ವರದಿಯಾಗಿದೆ. ಹಳಿಯಾಳ್‌ನಲ್ಲಿ ಅದೇ ದಿನ ಒಂದು ಕಡೆ ಪೌರಾಡಳಿತ ಸಚಿವರಾದ ಶ್ರೀ ಬಸವಲಿಂಗಪ್ಪನವರು ಭಾಷಣ ಮಾಡಿದಾಗ ಒಂದು ಗುಂಪಿನವರು ಘೋಷಣೆಗಳನ್ನು ಕೂಗುತ್ತಾ ಕಲ್ಲು ಬೀರಿದರೆಂದು ವರದಿಯಾಗಿದೆ. ಮತ್ತು ದೇಶ ದಲ್ಲಿನ ಶಿಸ್ತು, ಶಾಂತಿ ರಕ್ಷಣೆಗಾಗಿ ಧಾರವಾಡದಿಂದ ಹೆಚ್ಚಿನ ಪೋಲೀಸರನ್ನೂ ಕರೆಸಿಕೊಳ್ಳ ಲಾಯಿತು ಎಂದು ವರದಿಯಾಗಿದೆ ಮತ್ತು ಶ್ರೀ ಬಸವಲಿಂಗಪ್ಪನವರ ಕಾರಿಗೂ ಜಖಂ ಆಗಿದೆ ಎನ್ನಲಾಗಿದೆ. ಮತ್ತು ಗಲಭೆಯ ನಂತರ ಪೋಲೀಸ್ ರಕ್ಷಣೆಯಲ್ಲಿ ಹೋದರೆಂದೂ ಕೂಡ ವರದಿ ಯಾಗಿದೆ. ಮಂತ್ರಿಗಳಿಗೇ ಆಗಲಿ ಈರೀತಿ ಪ್ರಾಣಾಪಾಯವಾಗಬಾರದು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಮುಖ್ಯ ಮಂತ್ರಿಗಳಿಗೆ ಅವರ ರಕ್ಷಣೆಗಾಗಿ ಒಂದು ಪೋಲೀಸ್ ಕಾರ್ ಹೋಗು ತ್ತಿದೆ. ನೀವು ಅಧಿಕಾರಕ್ಕೆ ಬಂದ ಮೇಲೆ ಒಂದು ಸಂತೋಷದ ಸುದ್ದಿ ಏನೆಂದರೆ ಡೆಪ್ಯೂಟಿ ಮಿನಿಸ್ಟರ್‌ಗೆ, ಸ್ಟೇಟ್ ಮಿನಿಸ್ಟರ್‌ಗೆ ಟಿ. ಬಿ ಯಲ್ಲಿ ಪೋಲೀಸ್‌ನವರು ಗಾರ್ಡ್ ಆಫ್ ಆನರ್ ಕೊಡುತ್ತಿದ್ದಾರೆ.

ಒಬ್ಬ ಸದಸ್ಯರು.—ಸ್ವಾಮಿ, ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿ ದ್ದಾಗ ಈ ರೀತಿ ಇರಲಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೊಸಬರು. ನಮಗೆ ಗೊತ್ತಿಲ್ಲ. ಶ್ರೀಮಾನ್ ಚನ್ನ ಬಸಪ್ಪನವರೂ ಕೂಡ ಹಿಂದೆ ಹೋಂ ಮಿನಿಸ್ಟರ್ ಆಗಿದ್ದರು. ಹಿಂದೆ ಹೋಂ ಮಿನಿಸ್ಟರ್ ಮತ್ತು ಮುಖ್ಯ ಮಂತ್ರಿಗಳಿಗೆ ಮಾತ್ರ ಪೋಲೀಸ್‌ನವರು ಗಾರ್ಡ್ ಆಫ್ ಆನರ್ ಕೊಡುತ್ತಿದ್ದರು. ಆದರೆ ಈ ಸರ್ಕಾರ ಬಂದ ಮೇಲೆ ಎಲ್ಲರಿಗೂ ಗಾರ್ಡ್ ಆಫ್ ಆನರ್ ಕೊಡುತ್ತಿದ್ದಾರೆ. ಹಿಂದೆ ಆ ರೀತಿ ಕೊಡುತ್ತಿರಲಿಲ್ಲ. ನೀವು ಮಾಡತಕ್ಕ ಕೆಲಸಗಳನ್ನು ಮೆಚ್ಚಿ ಜನರು ಕಲ್ಲು ಹೊಡೆಯಲು

(ಶ್ರೀ ಎಚ್. ಡಿ. ದೇವೇಗೌಡ)

ಆರಂಭಿಸಿದ್ದಾರೆ. ಆದುದರಿಂದ ಪ್ರತಿಯೊಬ್ಬ ಮಂತ್ರಿಗೂ ರಕ್ಷಣೆ ಬೇಕಾಗಿರುವುದರಿಂದ ಅವರಿಗೂ ಒಂದು ಪೋಲೀಸ್ ಸೆಕ್ಯೂರಿಟಿಯನ್ನು ಕೊಡುವ ಒಂದು ಹೊಸ ಪದ್ಧತಿಯನ್ನು ಜಾರಿಗೆ ತನ್ನಿ. ದಯಮಾಡಿ ಈ ಘಟನೆಯ ಹಿನ್ನಲೆ ಏನು ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಖೂನಿ ಮಾಡುವ ಜನಕ್ಕೆ ಗಲ್ಲಿಗೆ ಏರಿಸುವಂಥ ಶಿಕ್ಷೆ ಕೊಡುವ ಜಡ್ಜ್‌ಗೆ ರಕ್ಷಣೆ ಇಲ್ಲ ಇವರಿಗೆ ರಕ್ಷಣೆ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಜವಾಬ್ದಾರಿ ಹೊತ್ತಿರತಕ್ಕಂಥಾವರು ಯಾರು ಇದ್ದಾರೆ ಅವರೆಲ್ಲರಿಗೂ ರಕ್ಷಣೆ ಕೊಡಬೇಕು. ಈವೊತ್ತಿನ ದಿವಸ ಕಾರ್ಪೋರೇಷನ್‌ನಲ್ಲಿ ಏನು ಘಟನೆ ನಡೆದಿದೆ ಅದರ ಹಿನ್ನಲೆಯನ್ನು ಯೋಚನೆ ಮಾಡಬೇಕು. ಲಕ್ಷಾಂತರರೂಪಾಯಿನ ಲೀಸ್ ಫೈಲುಗಳು ಕಣ್ಮರೆಯಾಗಿವೆ, ಅದರ ಬಗ್ಗೆ ತೀವ್ರ ಗಮನ ತೆಗೆದುಕೊಳ್ಳಬೇಕು. ಇದರ ಬಗ್ಗೆ ಪೌರಾಡಳಿತ ಸಚಿವರು ಹೇಳಿಕೆ ಕೊಡುತ್ತಾರೋ, ಅಥವಾ ಶ್ರೀಮಾನ್ ಚನ್ನಬಸಪ್ಪನವರು ಹೇಳಿಕೆ ಕೊಡುತ್ತಾರೋ ಅಥವಾ ಮುಖ್ಯ ಮಂತ್ರಿಗಳು ಕೊಡುತ್ತಾರೋ ತಿಳಿಸಿ. ಇಲ್ಲದೇ ಹೋದರೆ ನಾವು ಏನು ತಿಳಿದುಕೊಳ್ಳಬೇಕಾಗುತ್ತದೆ ಎಂದರೆ ಈ ಪ್ರಜಾ ಪ್ರಭುತ್ವದಲ್ಲಿ ಅಪಾಯ ಸನ್ನಿಹಿತ ವಾಗಿದೆ ಎಂದು. ಈ ಬಗ್ಗೆ ನಿನ್ನೆ ದಿವಸ ಯಾರೋ ಒಬ್ಬರು ಹೇಳಿದರು, ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಬಹುಶಃ ನಿಮ್ಮಗಳದೇ ಒಂದು ಕೊನೇ ಅಸೆಂಬ್ಲಿ ಆಗಬಹುದು, ಈ ಪ್ರಜಾಪ್ರಭುತ್ವದಲ್ಲಿ ಇದೇ ಕೊನೆ ಎನ್ನುವ ದಿಶೆಯಲ್ಲಿ ಅರ್ಥ ಬರುವ ಹಾಗೆ ಹೇಳಿದರು. ಆದುದರಿಂದ ದಯಮಾಡಿ ನನಗೆ ನಿನ್ನೆ ನಡೆದ ಘಟನೆ ಬಗ್ಗೆ ಕೊಡಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಅಧ್ಯಕ್ಷರೇ, ನಾನು ಈ ನಗರ ಸಭೆಗೆ ಹಳೆಯ ಸದಸ್ಯ. ಇದರಲ್ಲಿ ಒಂದು ವಿಷಾದದ ವಿಚಾರ ಏನೆಂದರೆ ಡೆಮಾಕ್ರೆಟಿಕ್ ಸೆಟ್‌ಅಪ್‌ನಲ್ಲಿ ಯಾವ ವಿಧದಲ್ಲಿ ಕೇಳಬೇಕೋ ಆ ವಿಧದಲ್ಲಿ ಕೇಳುವುದಕ್ಕೆ ಆಗದಿದ್ದರೆ ಕೈಕೈ ಮಿಲಾಯಿಸಿ ಕೇಳುವುದು ಶೋಚನೀಯವಾದ ವಿಚಾರ. ಹಿಂದೆ ಒಂದು ಸಾರಿ ವಿರೋಧ ಪಕ್ಷದಲ್ಲಿ ಇದ್ದಂಥ ಒಬ್ಬ ಸದಸ್ಯರಾದ ಡಾಕ್ಟರನ್ನು ಆಡಳಿತ ಪಕ್ಷದವರೊಬ್ಬರು ಹೊಡೆದು, ಅದು ಕೋರ್ಟಿಗೆ ಹೋಗಿ ಕೊನೇ ಒಳಗೆ ಶ್ರೀಮಾನ್ ಕೆ. ಎಂ. ನಾಗಣ್ಣನವರು ಕೇಳಿಕೊಂಡು ಅದು ಪರ್ಯವ್ಯಸನವಾಯಿತು. ಈ ವೊತ್ತಿನ ದಿವಸ ಕ್ಷಮೆ ಮಾಡಿರುವ ವ್ಯಕ್ತಿ ಮಾತೆತ್ತಿದರೆ ಹೊಡೆಯುವುದಕ್ಕೆ ಬರುತ್ತಾನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಮುಂದಿನ ಮೀಟಿಂಗ್‌ಗೆ ಹೋಗುವಾಗ ಒಂದು ವಜ್ರ ಕವಚ ಹಾಕಿಕೊಳ್ಳಿ.

ಶ್ರೀ ಟಿ. ಆರ್. ಶಾಮಣ್ಣ.—ಇದನ್ನು ತಡೆಗಟ್ಟದೇ ಹೋದ ಪಕ್ಷದಲ್ಲಿ ಕಾರ್ಪೋರೇಷನ್ ಸರಿಯಾಗಿ ನಡೆಯುವುದಕ್ಕಾಗುವುದಿಲ್ಲ. ಮೊನ್ನೆ ದಿವಸ ಒಂದು ತೀರ್ಮಾನ ತೆಗೆದುಕೊಂಡರು. ಕಾರ್ಪೋರೇಷನ್ನಿನ ಎಲ್ಲಾ ಕಾಮಗಾರಿ ಕೆಲಸಗಳನ್ನು ಅವರೇ ನಡೆಸಬೇಕು ಕಾಂಟ್ರಾಕ್ಟ್ ಕೊಡಬಾರದು ಎಂದು. ಈರೀತಿ ತೀರ್ಮಾನ ತೆಗೆದುಕೊಂಡು ಪುನಃ ಕೊಟ್ಟರೆ ಇದು ಯಾವ ರೀತಿಯಾದ ಪ್ರಪೋಸಲ್ ಆಗುತ್ತದೆ? ಇದು ಒಂದು ಹದ್‌ಬಸ್ತಿನಲ್ಲಿ ನಡೆಯಬೇಕು. ಇಲ್ಲದೇ ಹೋದರೆ ಯಾರು ತಪ್ಪು ಮಾಡಿದರು ಅಂಥವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳದೇ ಹೋದರೆ ಈ ನಗರಾಡಳಿತವನ್ನು ಸರಿಯಾಗಿ ನಡೆಸುವುದಕ್ಕಾಗುವದಿಲ್ಲ. ಈವಾಗ ಕಾರ್ಪೋರೇಷನ್ ಫೈಲುಗಳು ಒಂದು ಸಾವಿರ ಫೈಲುಗಳು ಮಾಯವಾಗಿವೆ. ಈ ರೀತಿ ಆದರೆ ಇದು ದಕ್ಷತೆಯಿಂದ ಕೆಲಸ ಮಾಡುತ್ತದೆಯೇ? ನಾನು ಕಳೆದ 16 ವರ್ಷಗಳಿಂದಲೂ ನೋಡುತ್ತಿದ್ದೇನೆ. ಇಷ್ಟು ಹದಗೆಟ್ಟಿರುವುದು ಯಾವಾಗಲೂ ಹದಗೆಟ್ಟಿಲ್ಲ ಎಂದು ಹೇಳುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ನೋಟೀಸು ತಮಗೆ ಕೊಟ್ಟಿದ್ದಾರೆ ಅದು ಇನ್ನೂ ನನ್ನ ಹಸ್ತಗತವಾಗಿಲ್ಲ ಮತ್ತು ಇಂದಿನ ಪತ್ರಿಕೆಗಳಲ್ಲಿ ಬಂದಿರುವ ವರದಿಗಳಲ್ಲಿ ಏನೇನು ಘಟನೆಗಳು, ಯಾವ ಯಾವ ವಿಷಯಗಳು ಬಂದಿವೆ ಅವನ್ನೆಲ್ಲಾ ನಾನೂ ಓದಿದ್ದೇನೆ. ಪ್ರತಿ ದಿವಸವೂ ದಿನ ಚರಿಯ ಆಡಳಿತ ವ್ಯವಹಾರ ಮಾಡುವ ಮುನ್ನ ದೇಶದ ಸಮಸ್ಯೆಗಳ ಬಗ್ಗೆ ವರದಿಗಳೇನು ಬರುತ್ತವೆ ಅವುಗಳನ್ನು ಓದತಕ್ಕದ್ದು ನಮ್ಮ ಪ್ರಥಮ ಕರ್ತವ್ಯ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಪಾರ್ಟಿಯವರೇ ಹೇಳಿರುವುದೆಲ್ಲ ಬಂದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ನಮ್ಮ ಪಾರ್ಟಿ, ನಿಮ್ಮ ಪಾರ್ಟಿಯ ಪ್ರಶ್ನೆಯಲ್ಲ ಅಥವಾ ನಿಮ್ಮ ಹಾಗೂ ನಮ್ಮ ಪ್ರಶ್ನೆಯಲ್ಲ. ಪ್ರಜಾಪ್ರಭುತ್ವದಲ್ಲಿ ಯಾವ ಯಾವ ರೀತಿಯಾಗಿ ನಾವು ನಡೆದುಕೊಳ್ಳಬೇಕು, ಯಾವ ರೀತಿ ನಡೆದುಕೊಂಡರೆ ಸರಿಯಾಗಿರುತ್ತೆ ಎನ್ನತಕ್ಕದ್ದು ನಾವು ಗಮನಿಸಬೇಕಾಗಿರುತ್ತೆ, ಗೌರವಿಸಬೇಕಾಗುತ್ತದೆ ಮತ್ತು ಬಹಳ ಅವಶ್ಯಕವೂ ಆಗಿದೆ. ಈಗ ಈ ಸಭೆಯಲ್ಲಿ ಕೂಡ ನಿಯಮಗಳಿಗನುಸಾರವಾಗಿ ನಡೆಯುತ್ತ ಬಂದಿದೆ, ಅದೇ ರೀತಿ ಮುನಿಸಿಪಾಲಟಿಗಳಲ್ಲಿ ಹಾಗೂ ಕಾರ್ಪೋರೇಷನ್‌ಗಳಲ್ಲಿ ನಡೆಯುತ್ತ ಬಂದಿದೆ ಪ್ರಜಾಪ್ರಭುತ್ವದಲ್ಲಿ ಇರುವ ತತ್ವಗಳಿಗನುಸರವಾಗಿ ನಡೆದುಕೊಂಡರೆ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ ಇಲ್ಲದೇ ಇದ್ದರೆ ಅದು ಯಶಸ್ವಿಯಾಗುವುದಿಲ್ಲ, ಈಗ ಇಲ್ಲಿ ಅನೇಕ ವಿಷಯಗಳು ವರದಿಯಾಗಿವೆ ಮತ್ತು ಇಲ್ಲಿ ಕೆಲವು ವಿಷಯಗಳನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ಈ ಸಭೆಯಲ್ಲಿ ಹೇಳಿರುವುದಕ್ಕಿಂತ ಮಾನ್ಯ ಮಂತ್ರಿಗಳ ಕಾರ್ಪೋರೇಷನ್ನಿನಿಂದ ಟೇಪ್ ರಿಕಾರ್ಡುಗಳನ್ನು ಪೂರ್ತಿಯಾಗಿ ತರಿಸಿಕೊಳ್ಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಬಗ್ಗೆ ಸರಕಾರ ಇನ್ನೂ ಮಾಹಿತಿಗಳನ್ನು ತರಿಸಿಲ್ಲ. ಇದರ ಜೊತೆಗೆ ಸಾವಿರಾರು ವಿಚಾರಗಳನ್ನು ಪತ್ರಿಕೆಗಳಲ್ಲಿ ಬಂದಿರುವ ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ಪತ್ರಿಕೆಗಳಲ್ಲಿ ಬಂದಿರುವ ವರದಿ ಎಷ್ಟುಮಟ್ಟಿಗೆ ಸತ್ಯ ಎಷ್ಟುಮಟ್ಟಿಗೆ ಅಸತ್ಯ ಎನ್ನುವುದನ್ನು ಪರಿಶೀಲನೆ ಮಾಡಬೇಕು. ವಾಸ್ತವಾಂಶಗಳು ಏನಿವೆ ಅವುಗಳನ್ನು ನೋಡಬೇಕಾಗುತ್ತದೆ ಮತ್ತು ಕೆಲವರು ಇದರ ಬಗ್ಗೆ ದೂರುಗಳನ್ನು ಪೋಲೀಸ್ ಸ್ಟೇಷನ್ನಿಗೆ ಕೊಟ್ಟಿದ್ದಾರೆಂದು ಹೇಳಿದರು ಮತ್ತು ಇನ್ನೂ ಕೆಲವು ವಿವರಗಳನ್ನು ಹೇಳಿದರು ಇವನ್ನೆಲ್ಲಾ ವಿಚಾರಿಸಬೇಕಾಗುತ್ತದೆ, ಒಟ್ಟಿನಲ್ಲಿ ನಾನು ಸ್ಪಷ್ಟಪಡಿಸುವುದು ಇದರಲ್ಲಿ ಈ ಪಕ್ಷ ಆ ಪಕ್ಷ ಎನ್ನುವ ವಿಚಾರವಲ್ಲ ಮತ್ತು ಇದು ಪಕ್ಷಕ್ಕೆ ಸಂಬಂಧಪಟ್ಟ ಪ್ರಶ್ನೆಯೂ ಅಲ್ಲ, ಈ ಸಭೆಯ ಘನತೆಗೆ ಸರಿಯಾಗಿ ನಡೆದುಕೊಳ್ಳದೇ ಹೋದರೆ ಅದು ಯಾವ ಪಕ್ಷದವರೇ ಆಗಲಿ ಅದು ತಪ್ಪು, ಇದನ್ನು ನೀವು ಹಾಗೂ ನಾವು ಎಲ್ಲರೂ ಒಪ್ಪಿಕೊಳ್ಳಬೇಕಾದದ್ದು. ಮಿತಿ ಮೀರಿ ಹದ್ದುಬಸ್ತು ಇಲ್ಲದೆ ಹೋದಾಗ ಅಂತಹ ಸಂದರ್ಭಗಳಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇ ಬೇಕು. ಇದರಲ್ಲಿ ನಿಮಗೆ ಹಾಗೂ ನಮಗೆ ಯಾವ ವ್ಯತ್ಯಾಸವೂ ಇಲ್ಲ. ಈ ಸಭೆಯಲ್ಲಿರುವ ನಿಯಮಗಳಂತೆ ಅಲ್ಲಿರುವ ಸಭೆಗಳಲ್ಲೂ ನಿಯಮಗಳಿವೆ. ಅಲ್ಲಿನ ಸಭೆಯ ನಿಯಮಗಳೇನು ಅವು ನನ್ನ ಮುಂದೆ ಇಲ್ಲ, ಯಾವ ರೀತಿ ದುರ್ವರ್ತನೆಗಳಾಗಿವೆ ಎನ್ನುವುದು ನನಗೆ ಗೊತ್ತಿಲ್ಲ, ಇದರ ಸಮಗ್ರವಾದ ವಿಷಯಗಳನ್ನು ಪರಿಶೀಲನೆ ಮಾಡಬೇಕಾಗಿದೆ ಮತ್ತು ಸಭೆಯಲ್ಲಿ ಕಳುಹಿಸಿರುವ ಮೋಷನ್ ಕೂಡ ಇನ್ನೂ ಹಸ್ತಗತವಾಗಿಲ್ಲ. ಇವನ್ನೆಲ್ಲಾ ತಿಳಿದು ಅನಂತರ ಒಂದು ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಇದರ ಟೇಪ್ ರಿಕಾರ್ಡನ್ನು ತರಿಸಿಕೊಳ್ಳಿ.

ಶ್ರೀ ಎಚ್, ಎಂ. ಚನ್ನಬಸಪ್ಪ.—ಸರಕಾರ ಇದಕ್ಕೆ ಬೇಕಾಗುವ ಎಲ್ಲ ವಿವರಗಳನ್ನು ತರಿಸಿಕೊಂಡು ಅವನ್ನೆಲ್ಲಾ ಪರಿಶೀಲಿಸಿ ಇಲ್ಲಿ ತಮಗೆ ತಿಳಿಸುತ್ತೇನೆ. ನಿಮಗೆ ಎಷ್ಟು ಕಳವಳವಿದೆಯೋ ಅಷ್ಟೇ ಕಳವಳ ನಮಗೂ ಇದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಸರಕಾರದ ಪರವಾಗಿ ಹೇಳಬೇಕಾದ ವಿಚಾರಗಳನ್ನು ಒಂದು ಸ್ಟೇಟ್‌ಮೆಂಟ್ ಮೂಲಕ ಹೇಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಇಪ್ಪತ್ತು ಮಂದಿ ಪಾರ್ಲಿಮೆಂಟು ಸದಸ್ಯರು ಲಂಚ ಹಾಗೂ ಇತರ ದುರ್ವ್ಯವಹಾರಗಳ ಅಪಾದನೆಯನ್ನು ಅದರಲ್ಲೂ ಬಹಳ ಗುರುತರವಾದ ಅಪಾದನೆಗಳನ್ನು ಮಾಡಿರುವುದರ ಬಗ್ಗೆ ಇಂದು ಪತ್ರಿಕೆಗಳಲ್ಲಿ ಬಂದಿದೆ, ಇದರ ಹಿನ್ನೆಲೆಯಲ್ಲಿ ಅವಿಶ್ವಾಸವನ್ನು ಕೆಲವು ಸದಸ್ಯರುಗಳು ಸೂಚಿಸಿದ್ದಾರೆಂದು ತಿಳಿದು ಬರುತ್ತದೆ. ಇದರ ಜೊತೆಗೆ ನಮ್ಮ ಸರಕಾರ ಉಳಿಯುತ್ತೋ ಇಲ್ಲವೋ ಎನ್ನುವ ಅನುಮಾನ ನಮಗೆ ಬರುತ್ತಿದೆ. ನಮ್ಮ ರಾಜ್ಯದಲ್ಲಿರುವ ಮಂತ್ರಿಗಳು ಲಂಚ ಹಾಗೂ ಇನ್ನಿತರ ಅವ್ಯವಹಾರಗಳಲ್ಲಿ ತೊಡಗಿರುವುದು ಎಂದು ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ನಮಗೆ ಸರಕಾರದ ಕಡೆಯಿಂದ ಸ್ಪಷ್ಟೀಕರಣ ಕೊಡಲೇ ಬೇಕು.

Presence of C.B.I. C.I.D. and Police staff in the Lounges

ಶ್ರೀ ವಾಟಾಳ್ ನಾಗರಾಜ್.—ಇದರ ಜೊತೆಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಮೂರು ನಾಲ್ಕು ದಿವಸಗಳಿಂದಲೂ ನಮ್ಮ ಸಭೆಯ ಸುತ್ತ ಮುತ್ತ ಸ್ಪೆಷಲ್ ಬ್ರಾಂಚಿಗೆ ಸೇರಿದ 15-20 ಜನರು ಬಂದು ಒಂದು ರೀತಿಯ ದಾಂಧಲೇ ನಡೆಸುತ್ತಿದ್ದಾರೆ, ಇವರಲ್ಲಿ

(ಶ್ರೀ ವಾಟಾಳ್ ನಾಗರಾಜ್)

ನಾನು ಏಳೆಂಟು ಜನರನ್ನು ನೋಡಿದ್ದೇನೆ, ಅವರು ನನಗೆ ಗೊತ್ತು. ಇಂತಹ ಪೋಲೀಸಿನವರು ನಮ್ಮ ವಿಧಾನಪರಿಷತ್ತಿನಲ್ಲಿ ಹಾಗೂ ಇಲ್ಲಿ ಬರುತ್ತಿರುವ ಕಾರಣ ತಿಳಿಯಲಿಲ್ಲ. ಇದರ ಬಗ್ಗೆ ತಾವು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಇವರುಗಳು ಸಭೆಗೆ ಬರಲು ತಮ್ಮ ಅಪ್ಪಣೆ ಇಲ್ಲದೆ ಬರಲು ಅವಕಾಶವೇ ಇಲ್ಲ. ಏತಕ್ಕಾಗಿ ಇವರು ಬರುತ್ತಾರೆ? ನಮ್ಮ ಹಿಂದೆ ಬಂದು ಏನೇನು ನಡೆಯುತ್ತಿದೆ ಎಂದು ಇವರುಗಳು ವರದಿ ಮಾಡಬೇಕೇನು ? ನಾನು ಕೆಲವು ಸಿ.ಐ.ಡಿ, ಗಳನ್ನು ಕೇಳಿದಾಗ ಅವರು ಸರಿಯಾಗಿ ಉತ್ತರ ಕೊಡಲಿಲ್ಲ. ಇದರ ಬಗ್ಗೆ ತಾವು ಗಮನಿಸಬೇಕು.

ಇನ್ನು ಮುಖ್ಯ ಮಂತ್ರಿಗಳು ಎಲ್ಲಿರುತ್ತಾರೋ ಇಲ್ಲವೋ ಒಂದು ರೀತಿಯಾದ ಅನುಮಾನ ನಮಗೆ ಇಂದು ಪೇಪರುಗಳನ್ನು ನೋಡಿದ ಮೇಲೆ ಬರುತ್ತಿದೆ. ಲೋಕ ಸಭೆಯ ಸದಸ್ಯರುಗಳು ಅದರಲ್ಲೂ ನಿಮ್ಮ ಪಕ್ಷದವರೇ ಇಷ್ಟು ಉಗ್ರವಾಗಿ ಟೀಕೆ ಮಾಡುತಿದ್ದಾರೆ, ಇದರಲ್ಲಿ ಭ್ರಷ್ಟಾಚಾರದ ಹಾಗೂ ಇನ್ನಿತರ ಅಪಾದನೆಗಳು ಬಂದಿವೆ. ಇದರಿಂದ ಸರಕಾರ ಇಲ್ಲಿ ಉಳಿಯುತ್ತೋ ಇಲ್ಲವೋ ಎನ್ನುವ ಸಂದೇಹ ಬರುತ್ತಿದೆ, ಆದರಲ್ಲೂ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ಅರಸಿನವರು ಉಳಿಯುತ್ತಾರೋ ಇಲ್ಲವೋ ಗೊತ್ತಿಲ್ಲ. ಮುಂದೆ ಯಾರು ಮುಖ್ಯಮಂತ್ರಿಗಳಾಗುತ್ತಾರೆ? ಶ್ರೀ ಘೋರ್ಪಡೆಯವರಾಗುತ್ತಾರೆಯೇ! ಹಾಗಾದರೆ ಇಂದು ಮಂಡಿಸಿರುವ ಬಡ್ಜೆಟ್ಟು ಏನಾಗುತ್ತದೆ? ಬೇರೆ ರೀತಿಯ ಬಡ್ಜೆಟ್ಟು ಬರುತ್ತದೆಯೇ! ಇದರ ಬಗ್ಗೆ ಸಹಿಗಳನ್ನು ಸಂಗ್ರಹಿಸುತ್ತಾರೆಂದೂ ಕೇಳುತ್ತಿದ್ದೇವೆ. ಅಲ್ಲದೆ ನಮ್ಮ ಸಭೆಗೆ ಪೋಲೀಸಿನವರು ಏಕೆ ಬರಬೇಕಾಗುತ್ತದೆ? ಇದರ ಬಗ್ಗೆ ತಾವು ವಿಚಾರ ಮಾಡಬೇಕು.

ಅಧ್ಯಕ್ಷರು.—ತಾವು ಹೇಳಿರುವುದನ್ನು ವಿಚಾರಿಸಿ ನೋಡುತ್ತೇನೆ. ಆದರೆ ತಾವು ಹೀಗೆ ಜನರಲ್ ಆಗಿ ಹೇಳುವುದು ಸರಿಯಾಗುವುದಿಲ್ಲ ಎಂದು ಇಷ್ಟುಮಾತ್ರ ವಿನಂತಿ ಮಾಡುತ್ತೇನೆ.

SRI C. M, ARUMUGHAM.—The hon. Member Sri Vatal Nagaraj mentioned about the presence of the CBI staff in the precincts of the Assembly. In that connection, of course, Members have a right to represent to the Chair. Further, the watch and ward staff drawn to work during the session are persons from the regular police force. You have to consider whether it is proper to draw watch and ward staff from regular police force; secondly if any police officer or CBI or CID were to be seen in the lobbies, or in the precincts of the Assembly without the permission of the Speaker it would amount to breach of privilege and it also amounts to coercion on Members. I request you to look into the matter and take immediate action.

MADAM SPEAKER.—I will get it examined.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸನ್ಮಾನ್ಯ ಅಧ್ಯಕ್ಷರೇ. ಈ ದೇಶದಲ್ಲಿ ಎಲ್ಲ ಪಾಲಿನ ಬೆಲೆಗಳು ಏರುತ್ತಿದ್ದರೂ ಅಡಿಕೆ ಬೆಲೆ ಮಾತ್ರ ಇಳಿಯುತ್ತಿದೆ.

ಅಧ್ಯಕ್ಷರು.—ಈ ವಿಷಯ ಮುಗಿದು ಹೋಗಲಿ, ನಂತರ ತಾವು ಅದನ್ನು ಹೇಳಿ.

ಶ್ರೀ ಎಂ. ಎಸ್ ಕೃಷ್ಣನ್.—ಮಾನ್ಯ ವಾಟಾಳ್‌ನಾಗರಾಜ್ ಅವರು ಹೇಳಿದ ಸಿ.ಐ.ಡಿ. ವಿಚಾರದಲ್ಲಿ ನಮಗೂ ಅನುಭವವಾಗಿದೆ. ಆಬಗ್ಗೆ ತಾವು ತನಿಖೆ ಮಾಡಿಸುವುದಾಗಿ ಹೇಳಿದ್ದೀರಿ, ನನಗೆ ಗೊತ್ತಿರುವ ಕೆಲವು ಸಿ.ಐ.ಡಿ. ಗಳು ಕೆಲವರು ಬಂದಿದ್ದರು.

ಅಧ್ಯಕ್ಷರು — ನಿಮಗೆ ಗೊತ್ತಾಗುವಂತೆ ಬರುವ ಸಿ.ಐ.ಡಿ. ಗಳು ಯಾರು!

ಶ್ರೀ ಎಚ್. ಡಿ. ದೇವೇಗೌಡ.— ಪದೇ ಪದೇ ನಮ್ಮ ಹಿಂದೆ ಬಂದಿರುವುದರಿಂದ ಅವರ ಪರಿಚಯವಾಗಿರುತ್ತದೆ.

Comments Of The State Members of Parliament on The State Administration

ಶ್ರೀ ಎಂ. ಎಸ್. ಕೃಷ್ಣನ್.—ಈ ಮಂತ್ರಿಮಂಡಲದ ಬಗ್ಗೆ ಪಾರ್ಲಿಮೆಂಟ್ ಸದಸ್ಯರು ಏನು ಮಾತನಾಡಿದ್ದಾರೆ ಅದರ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ಕುಪಿತರಾಗಿದ್ದಾರೆಂದು ಗೊತ್ತಾಗಿದೆ ಈ ವಿಚಾರದಲ್ಲಿ ಒಬ್ಬರು ಮಂತ್ರಿಗಳು ನಿಮಗೇಕೆ, ನಮ್ಮ ಪಾರ್ಟಿಯ ಸಮಾಚಾರ ಎಂದು ಹೇಳುತ್ತಾರೆ. ಇದು ಕೇವಲ ಪಾರ್ಟಿಯ ಸಮಾಚಾರ ಎಂದು ಹೇಳುವುದು ಅಷ್ಟು ಸಮಂಜಸವಾದದು ಅಲ್ಲ. ಇದು ದೇಶಕ್ಕೆ ಮತ್ತು ರಾಜ್ಯಕ್ಕೆ ಸಂಬಂಧಪಟ್ಟ ವಿಷಯ.

ಅಧ್ಯಕ್ಷರು.—ತಾವು ಹೇಳುವುದನ್ನೆಲ್ಲಾ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ —ಈ ವಿಷಯವನ್ನು ಪಾರ್ಟಿ ವಿಷಯ ಎಂದು ಹೇಳುವುದು ಸರಿಯಲ್ಲ. ಈ ಮಂತ್ರಿಮಂಡಲ ಬದಲಾವಣೆಯಾದರೆ ಈ ಬಡ್ಜೆಟ್‌ನ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ನೋಡಬೇಕಾಗಿದೆ. ಇದು ಎಲ್ಲರಿಗೂ ಸಂಬಂಧಪಟ್ಟ ವಿಷಯವಾಗಿದೆ. ಪಾರ್ಲಿಮೆಂಟ್ ಸದಸ್ಯರು ಮಂತ್ರಿಮಂಡಲದ ಮೇಲೆ ಮತ್ತು ಕೆಲವು ಮಂತ್ರಿಗಳ ಮೇಲೆ ಏನು ಗುರುತರವಾದ ಅಪಾದನೆಗಳನ್ನು ಹೊರಿಸಿದ್ದಾರೆ ಅದರ ಬಗ್ಗೆ ಮಾನ್ಯ ಚನ್ನಬಸಪ್ಪನವರಾದರೂ ಸಹ ಒಂದು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗಾಗಲೇ ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

Sri C. M. ARUMUGHAM.—Madam Speaker, this House is entitled to know the functions of the Government. When the Members of Parliament are makihg certain allegations against the Government it means that Members of the Assembly are not discharging thier duties properly. This being the budget session, the House is entitled to know whether there is going to be any change in the Ministry.

Sri H. M. CHANNABASAPPA.—I rise to a point of order. The proceedings in this House have to take place in accordance with the rules of procedure to which all of us are bound to. Now there is no issue before the House and no motion has been sent and the Speaker has not permitted any motion to be discussed. Further Governmental action must be there to admit any discussion. There may be hundred and odd things appearing in the press. But there are no reports issued from Government either from Delhi or from Mysore. When there is no omission or commission on the part of the Government where is the fun in discussing such a matter It would not be therefore proper to allow matteis to be discussed in the House in which thers is no governmental action.

ಶ್ರೀ ವಾಟಾಳ್ ನಾಗರಾಜ್.—ಪಾರ್ಲಿಮೆಂಟ್ ಸದಸ್ಯರು ಈ ರೀತಿ ಮಾಡಿದ್ದು ಸರಿಯಲ್ಲ, ಅದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಸರ್ಕಾರದ ಆಜ್ಞೆಗಳು, ನಡವಳಿಕೆಗಳು ಕೆಲಸಗಳ ಬಗ್ಗೆ ಏನು ಬೇಕಾದರೂ ವ್ಯಾಖ್ಯಾನ ಮಾಡಲಿ ; ಅದಕ್ಕೆ ಅಡ್ಡಿ ಇಲ್ಲ. ಆದರೆ ಪತ್ರಿಕೆಗಳಲ್ಲಿ ಡೆಲ್ಲಿಯಲ್ಲಿ ನಡೆದಂಥ ವಿಚಾರಗಳ ಬಗ್ಗೆ ಪ್ರೆಸ್ ನೋಟ್ ಬಂತು, ಇನ್ನೊಂದು ಕಡೆ ಇನ್ನೊಂದು ಪ್ರೆಸ್ ನೋಟ್ ಬಂತು ಎಂದರೆ ಅದರಲ್ಲಿ ಸರ್ಕಾರದ ಪಾತ್ರವಾದರೂ ಏನಿದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಡೆಲ್ಲಿಯಲ್ಲಿ ನಡೆದ ಘಟನೆಗೂ ಸರ್ಕಾರಕ್ಕೂ ಸಂಬಂಧವಿಲ್ಲ, ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಅನಾವಶ್ಯಕವೆಂದು ಮಾನ್ಯಮಂತ್ರಿಗಳು ಹೇಳಿದರು. ಆದರೆ ಆ ವಿಷಯದ ಬಗ್ಗೆ ಈಗಾಗಲೇ ಮಂತ್ರಿಮಂಡಲದ ಸಭೆ ಸೇರಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಕೊಂಡಿದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆಲೋಚನೆ ಮಾಡುತ್ತಿರಬೇಕಾದರೆ, ಅದನ್ನು ಇಲ್ಲಿ ಚರ್ಚೆ ಮಾಡುವುದು ಅನರ್ಹವಾದ ವಿಷಯವೆಂದು ಹೇಳುವುದು ಒಪ್ಪತಕ್ಕ ಮಾತಲ್ಲ.

ಅಧ್ಯಕ್ಷರು.— ಚರ್ಚೆ ಮಾಡುವುದಕ್ಕೆ ಅನರ್ಹವಾದ ವಿಷಯವೆಂದು ಅವರು ಹೇಳಲಿಲ್ಲ. ಆದರೆ ಆ ವಿಚಾರ ಯಾವ ಮೂಲಕ, ಯಾವಾಗ, ಯಾವ ರೀತಿ ಬರಬೇಕೆಂದು ಹೇಳುವುದು ನನ್ನ ಕರ್ತವ್ಯ, ಆ ರೀತಿ ಅದು ಬರಲಿ ಎಂದು ಅವರು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಆದರೆ ನಾನು ತಿಳಿದುಕೊಂಡಿದ್ದು ಬೇರೆ ತರಹ.

ಅಧ್ಯಕ್ಷರು.—ನೀವು ಸಾವಿರ ತರಹ ತಿಳಿದುಕೊಳ್ಳಬಹುದು; ಆದರೆ ನಾನು ತಿಳಿದುಕೊಂಡಿದ್ದನ್ನು ಹೇಳಬೇಡವೇ?

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಚರ್ಚೆ ಮಾಡುವುದಕ್ಕೆ ಒಂದು ಸೂಚನಾ ಪತ್ರ ಕೊಡಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ದೆಹಲಿಯಲ್ಲಾಗಲಿ, ಮತ್ತೊಂದು ಕಡೆಯಲ್ಲಾಗಲೀ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಪತ್ರಿಕೆಗಳನ್ನು ಬಿಟ್ಟರೆ ಬೇರೆ ವ್ಯವಸ್ಥೆ ಇಲ್ಲ. ಅದರಂತೆ ಇಂದು ಬೆಳಿಗ್ಗೆ ಪತ್ರಿಕೆಗಳನ್ನು ನೋಡಿದಾಗ ಈ ಮಂತ್ರಿಮಂಡಲದ ಮೇಲೆ ಬಲವಾದ ಪರಿಣಾಮ ಉಂಟಾಗಿದೆ, ಈ ಮಂತ್ರಿಮಂಡಲ ಉಳಿಯುವ ಅಥವಾ ಹೋಗುವ ಪರಿಸ್ಥಿತಿ ಉದ್ಭವವಾಗಿರುವುದು ಗೊತ್ತಾಗಿದೆ. ಆದಕಾರಣ ಅದರ ಬಗ್ಗೆ ನಾವು ಹೇಳಬೇಕಾಗಿದೆ. ಮತ್ತು ಚರ್ಚೆ ಮಾಡಬೇಕಾಗಿದೆ. ಈ ಸರ್ಕಾರದಲ್ಲಿ ಏನು ನಡೆಯುತ್ತಿರುತ್ತದೆಂಬುದನ್ನು ತಿಳಿದುಕೊಳ್ಳುವ ಕುತೂಹಲ ಸರ್ವೇಸಾಧಾರಣವಾಗಿ ಎಲ್ಲರಲ್ಲಿಯೂ ಇರುತ್ತದೆ. ಆದಕಾರಣ ಪತ್ರಿಕೆಗಳಲ್ಲಿ ಬಂದಿರುವ ಅಂಶವನ್ನು ಇಲ್ಲಿ ಎತ್ತಬೇಕಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಷಯವಾದ್ದರಿಂದ, ಕೂಡಲೇ ಚರ್ಚೆಯಾಗಬೇಕು. ಆದರೆ ಇದನ್ನು ಚರ್ಚೆ ಮಾಡಲು ನೋಟಿಸ್ ಬೇಕು, ಮೋಷನ್ ಬೇಕು ಎಂದು ಕಟ್ಟುನಿಟ್ಟಾಗಿ ಹೇಳುವುದು ಸರಿಯಲ್ಲ, ಕೆಲವು ಸಂದರ್ಭಗಳಲ್ಲಿ ನಿಯಮಗಳನ್ನು ಬದಲಾವಣೆ ಮಾಡಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಇದನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

11.00 A.M.

Sri C. M. ARUMUGHAM.—We are not interfering with the party affair. There was some party matter–cleansing campaign. We thougt it is a party matter and so we did not interfere. Allegations against Ministers by Members of Parliament is not a party affair.

MADAM SPEAKER.—The Government has understood what you have got to say further.

Sri C. M. ARUMUGHAM.—We want a reply from the Government.

MADAM SPEAKER.—Let the Chief Minister come.

Sri C. M. ARUMUGHAM.—Is the Chief Minister is not there, the Deputy Leader is here who can reply.

Sri H. M. CHANDRABASAPPA (Minister for Public Works and Electricity).—I rise to Point of Order. Is the motion before the House? I seek a Ruling in the matter. Before the Point of Order is disposed of, I don't think discussion can take place.

Sri H D. DEVE GOWDA.—Please hear us before the Ruling given.

ಶ್ರೀ ವಾಟಾಳ್ ನಾಗರಾಜ್.— ಮಂತ್ರಿಮಂಡಲದ ಮೇಲೆ ಆಪಾದನೆ ಮಾಡಿ ಪಾರ್ಲಿಮೆಂಟ್ ಸದಸ್ಯರು ಪ್ರಧಾನಿಯವರಿಗೆ ಆಪಾದನೆಯ ಪಟ್ಟಿಯನ್ನು ಸಲ್ಲಿಸಿದ್ದಾರೆ. ಆದ್ದರಿಂದ ಇದು ಬಹಳ ಮುಖ್ಯವಾದ ವಿಷಯ.

MADAM SPEAKER.—I know the importance. But, rules have to be followed.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗಾಗಲೇ ಕೆಲವು ಮಂತ್ರಿಗಳನ್ನು ಮಂತ್ರಿಮಂಡಲದಿಂದ ತೆಗೆಯುತ್ತಾರೆ ಎಂದೂ, ಒಂದುವೇಳೆ ಅವರನ್ನು ತೆಗೆದರೆ ಅವರು ಕುರ್ಚಿ ಬೆಂಚನ್ನು ಹೊತ್ತುಕೊಂಡು ಹೋಗುತ್ತಾರೆ ಎಂದೂ ಅವರ ಮನೆಯ ಮುಂದೆ ಬಲವಾದ ಪೋಲೀಸ್ ಕಾವಲು ಹಾಕಿದ್ದಾರೆ. ಆದ್ದರಿಂದ ಈ ಬಗ್ಗೆ ಖಚಿತವಾದ ಅಭಿಪ್ರಾಯವನ್ನು ಹೇಳಬೇಕು. ಯಾರು ಮಂತ್ರಿಮಂಡಲದಿಂದ ಹೋಗುತ್ತಾರೆ ಎಂಬುದನ್ನು ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.—ಇದು ಸಕಾಲವಲ್ಲ. ಮುಖ್ಯಮಂತ್ರಿಗಳು ಬರಲಿ ಆಮೇಲೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಪ್ರಾಮುಖ್ಯವಾದ ವಿಷಯ.

ಅಧ್ಯಕ್ಷರು.— ನನಗೆ ಗೊತ್ತಿದೆ.

Sri C.M. ARUMUGHAM.—The Ministers of Mysore are responsible to this House. The members of this House are entitled to know what is going on on the other Side. The Members of Parliament at Dehli have raised ceratian issues against our Ministers. We are entitled to know what it is.

Sri H.M. CHANNABASAPPA.—Let the hon. member move a motion and if the motion is admitted I should have absolutely no objection.

MADAM SPEAKER.—That is exactly the case. Let the hon. member send a notice, I will send it to Government and they will reply.

Sri H. D. DEVE GOWDA.—Hon. member Sri Konandur Lingappa has already sent a notice.

MADAM SPEAKER.—I have sent it to Government. Let the reply come.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಅನೇಕ ಪ್ರಮುಖರು ಯಾವ ಕಡೆ ಇರಬೇಕು, ಯಾವ ಕಡೆ ಹೋಗಬೇಕು ಎಂದು ಕ್ಯಾನ್‌ವಾಸ್ ಮಾಡುತ್ತಿದ್ದಾರೆ. ಹೀಗಿರುವಾಗ ಸುಮ್ಮನೆ ಗೊತ್ತಿಲ್ಲದವರ ಹಾಗೆ ಕುಳಿತುಕೊಂಡರೆ ಹೇಗೆ ?

ಅಧ್ಯಕ್ಷರು.—ನೀವು ಆ ರೀತಿ ಉತ್ತರ ಹೇಳಬೇಕು ಎಂದು ಇನ್‌ಸಿಸ್ಟ್ ಮಾಡುವುದು ಸರಿಯಲ್ಲ. He cannot insist for a statement now. The notice has been sent to the Chief Minister's office. May be he may make a statement. Let the reply come. I will see whether I should admit it or not. Afterwards the members can discuss.

ಶ್ರೀ ವಾಟಾಳ್ ನಾಗಾರಾಜ್. —ಶ್ರೀಮಾನ್ ಚನ್ನಬಸಪ್ಪನವರಿಗೆ ವಿಷಯ ಗೊತ್ತಿದೆ. ಆದರೆ ಅವರು ಎಲ್ಲಿ ಏನಾಗುತ್ತದೆಯೋ ಎಂದು ಹೇಳಿಕೆ ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಮುಖ್ಯಮಂತ್ರಿಗಳು ಎಲ್ಲಿದ್ದಾರೆ? ಅವರನ್ನು ಈ ಸಭೆಗೆ ಕರೆಸಿ.

ಅಧ್ಯಕ್ಷರು.— ತಾವು ಈ ರೀತಿ ಮಾಡಿದರೆ ಹೇಗೆ!

Sri C. M. ARUMUGAM.—The Government of Mysore is not directly responsible to the Members of Parliament.

Sri S. M. SHEERNALY CHANDRASEKHAR.—I rise to a point of Order. Without a motion how can the subjeet be raised ?

Sri M. S. KRISHNAN.—There must be no anxiety for a motion because already there are lot of motions on the other side.

Sri C. M. ARUMUGHAM.—The Hon'ble Minister Sri H.M. Channabasappa stated that there cannot be any aetion without cause. Members of Parliament have made several charges against our Ministery and they want to present a Memorandum to the Prime Minister. Immediately it was taken note of and they have authorised the Chief Mieister to take action, and the Chief Minister has written a letter to the Prime Minister. We want to know what are the allegations and what the Chief Minister has written to the Prime Minister.

MADAM SPEAKER.—Let the Chief Minister Come. But the Hon. Members cannot insist for a statement now.

ಶ್ರೀ ವಾಟಾಳ್ ನಾಗರಾಜ್.—ಇದು ರಾಜ್ಯದ ಪ್ರಶ್ನೆ, ಬಹಳ ಮುಖ್ಯವಾದುದು.

ಅಧ್ಯಕ್ಷರು.—ನನಗೆ ಗೊತ್ತಿದೆ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಸರ್ಕಾರದ ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ.

ಅಧ್ಯಕ್ಷರು.—ನಾನು ಸೀನಿಯರ್ ಮೆಂಬರು ಎಂದು ಒಂದು ಸಾರಿ ಹೇಳುತ್ತೀರಿ, ಈ ರೀತಿ ಮಾತನಾಡಿದರೆ ಹೇಗೆ ?

Sri C. M. ARUMUGAM.—Shall we take up this matter on Monday ?

MADAM SPEAKER.—I cannot assure the Hon. member. Let the reply come and I will examine it

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ಮಾನ್ಯ ಕೋಣಂದೂರು ಲಿಂಗಪ್ಪನವರು ಒಂದು ನೋಟಿಸನ್ನು ಕಳಿಸಿದ್ದಾರೆ. ಇದು ಬಹಳ ಗಹನವಾದ ವಿಷಯ. ಇವತ್ತು ಈ ಮಂತ್ರಿ ಮಂಡಲದ ಮೇಲೆ ಪಾರ್ಲಿಮೆಂಟ್ ಸದಸ್ಯರು ಭ್ರಷ್ಟಾಚಾರದ ಆಪಾದನೆಯನ್ನು ಮಾಡಿದ್ದಾರೆ. ಇಂತಹ ನಿಷ್ಠಾವಂತ ಮಂತ್ರಿಮಂಡಲದ ಮೇಲೆ ಆ ರೀತಿ ಮಾಡಿರುವುದು ಬಹಳ ಮುಖ್ಯವಾದ ವಿಷಯ, ಆದ್ದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಸೋಮವಾರ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ದೇಶದಲ್ಲಿ ಎಲ್ಲಾ ಬೆಲೆಯು ಏರುತ್ತಿರುವಾಗ ಈ ಅಡಿಕೆ ಬೆಲೆಯು ಇಳಿಯುತ್ತಾ ಇದೆ. ಅದರ ಬಗ್ಗೆ ನಾನು ಒಂದು ನೋಟೀಸ್ ಕಳುಹಿಸಿದ್ದೆ. ಅವರ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಈಗ ಇಲ್ಲ. ಆ ಮೇಲೆ ನೋಡೋಣ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಇವತ್ತೇ ಕೊಡಬೇಕು.

Sri C. M. ARUMUGAM.—We have also observed Sri Gundu Rao canvassing the members both inside and outside the House, He has become very active.

ಅಧ್ಯಕ್ಷರು.—ಮುಂದಿನ ಸಬ್‌ಜೆಕ್ಟ್ ಶ್ರೀ ಶಾಮಣ್ಣನವರ ನಾನ್ ಅಫಿಷಿಯಲ್ ರೆಸಲ್ಯೂಷನ್.

NON-OFFICIAL RESOLUTIONS

(i) *re* : Eradication of mesquito nuisance in Bangalore City

MADAM SPEAKER.—Now, Sri T R. Shamanua will continue his speech.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ನಗರದ ನಾಗರೀಕರನ್ನು ಕಾಡುತ್ತ ಇರತಕ್ಕಂತಹ ಮುಖ್ಯವಾದ ಸಮಸ್ಯೆಗಳಲ್ಲಿ ಸೊಳ್ಳೆಗಳ ಕಾಟ ಒಂದು ಎಂಬುದು ಕಡಿಸಿಕೊಂಡಿರತಕ್ಕಂತಹ ಅನೇಕ ವ್ಯಕ್ತಿಗಳಿಗೆ ಗೊತ್ತು. ಬೆಂಗಳೂರು ನಗರದಲ್ಲಿ ಕಾರ್ಪೊರೇಶನ್ನಿನವರು ಪ್ರತೀ ವರ್ಷ 12 ಲಕ್ಷ ರೂಪಾಯಿಗಳನ್ನು ಇದಕ್ಕೋಸ್ಕರ ಖರ್ಚು ಮಾಡುತ್ತಿದ್ದಾರೆ. ಆ ಮೇಲೆ ನಗರ ನೈರ್ಮಲ್ಯಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಹಾಗೂ ಒಳ ಚರಂಡಿ ವ್ಯವಸ್ಥೆಗೆ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಬೆಂಗಳೂರು ವಾಟರ್ ಅಂಡ್ ಸಿವರೇಜ್ ಬೋರ್ಡಿನವರು 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ವರ್ಷ ವರ್ಷಕ್ಕೆ ಇಷ್ಟು ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೂ ಕೂಡ ನಾಗರೀಕರಿಗೆ ಈ ಸೊಳ್ಳೆ ಕಾಟದಿಂದ ಪರಿಹಾರ ಸಿಗದಿರತಕ್ಕದ್ದು ಬಹಳ ಶೋಚನೀಯವಾದ ಸಂಗತಿ. ಅದರಲ್ಲೂ ಬೆಂಗಳೂರು ನಗರದ ಮಾಗಡಿ ರೋಡ್. ಚಾಮರಾಜಪೇಟೆ, ಕೆಂಪೇಗೌಡ ನಗರ, ಜಯನಗರ, ವಿಲ್ಸನ್ ಗಾರ್ಡನ್, ಆಡುಗೋಡಿ, ಸೊಣ್ಣೇನಹಳ್ಳಿ—ಮುಂತಾದ ಕಡೆಗಳಲ್ಲಿ ಸೊಳ್ಳೆಗಳ ಹಾವಳಿ ಬಹಳ ವಿಪರೀತವಾಗಿದೆ. ಅದರ ಬಗ್ಗೆ ನಾನು ಕಳಿಸಿರುವ ನಿರ್ಣಯ ಬ್ಯಾಲೆಟಿನಲ್ಲಿ ಆದ್ಯತೆಯನ್ನು ಪಡೆದು ಇಲ್ಲಿ ಚರ್ಚೆಗೆ ಬಂದಿದೆ. ಇವೊತ್ತಿನ ದಿವಸ ಜನರಿಗೆ ಆಹಾರದ ಅಭಾವ ಇರತಕ್ಕ ಸಮಯದಲ್ಲಿ ಈ ರೀತಿ ಜನರ ರಕ್ತವನ್ನು ಸೊಳ್ಳೆಗಳು ಹೀರುತ್ತಾ ಇದ್ದು ರಾತ್ರಿ ಹೊತ್ತಿನಲ್ಲಿ ನಾಗರೀಕರಿಗೆ ವಿಪರೀತ ತೊಂದರೆಯಾಗುತ್ತಿದೆ. ಅದರಲ್ಲಿಯೂ ವಿದ್ಯಾರ್ಥಿಗಳಿಗೆ ರಾತ್ರಿ ಹೊತ್ತು ಓದಿಕೊಳ್ಳಲು ಬಹಳ ಕಷ್ಟವಾಗುತ್ತದೆ. ಈ ಸೊಳ್ಳೆಗಳು ಕಿವಿಯ ಹತ್ತಿರ ಬಂದು ಉಪದ್ರವ ಕೊಡುವುದರ ಜೊತೆಗೆ ಬಾಯಿಯ ಒಳಗೆ ಸಹ ಹೋಗಿ ಬಿಡುತ್ತದೆ. ಅದರಲ್ಲೂ ಸೊಳ್ಳೆ ಪರದೆ ಇಲ್ಲದಿರುವ ಮತ್ತು ಡಿ ಡಿ ಟಿ ಇತ್ಯಾದಿ ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದಿರತಕ್ಕಂತಹ ಜನರಿಗೆ ವಿಪರೀತವಾದ ಕಷ್ಟವಾಗುತ್ತದೆ. ಇದನ್ನು ಅರಿಯಬೇಕಾದರೆ, ಮಂತ್ರಿಯವರು ಆಡುಗೋಡಿಯಲ್ಲಿ ಮನೆ ಮಾಡಿ ಸೊಳ್ಳೆ ಪರದೆ ಇಲ್ಲದೆ ವಾಸ ಮಾಡಿದರೆ ಇವುಗಳ ಕಾಟ ಎಷ್ಟು ಎಂದು ಗೊತ್ತಾಗುತ್ತದೆ. ಸೆಕೆ ಗಾಲದಲ್ಲಿ ಅಂತೂ ಬಹಳ ಕಷ್ಟ. ಹೊದ್ದಿಕೊಳ್ಳುವುದಕ್ಕೂ ಆಗುವುದಿಲ್ಲ, ಹೊದ್ದುಕೊಳ್ಳದಿದ್ದರೆ ಇವುಗಳ ಕಾಟ ತಪ್ಪಿದ್ದಲ್ಲ. ಒಂದೊಂದು ಸಮಯದಲ್ಲಿ ಈ ಸೊಳ್ಳೆಗಳು ವಿಪರೀತ ಜಾಸ್ತಿಯಾಗುತ್ತವೆ; ಕೆಲವು ಸಮಯದಲ್ಲಿ ಕಡಿಮೆಯಾಗಿರುತ್ತವೆ. ಆದರೆ ಸರ್ಕಾರ ಇಷ್ಟು ಹಣ ಖರ್ಚು ಮಾಡಿದ್ದರೂ ಕೂಡ ಈ ಸಮಸ್ಯೆ ಪರಿಹಾರವಾಗದಿದ್ದುದು ಬಹಳ ಶೋಚನೀಯ. ಸರ್ಕಾರ 1952ನೇ ಇಸವಿಯಲ್ಲಿ ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದರು. ಪುನಃ 1967ರಲ್ಲಿ ಒಂದು ಕಮಿಟಿಯನ್ನು ಮಾಡಿದರು. ಈಗ ಎಂಎಲ್ಎ ಅಸೆಂಬ್ಲಿ ಸದಸ್ಯರನ್ನು ಮತ್ತು ಕೌನ್ಸಿಲ್ ಸದಸ್ಯರನ್ನು ಸೇರಿಸಿ ಒಂದು ದೊಡ್ಡ ಕಮಿಟಿ ಮಾಡಿದ್ದಾರೆ. ಆದರೂ ಸಹ ಯಾವ ಒಂದು ಪರಿಣಾಮಕಾರಿಯಾದಂತಹ ತೀರ್ಮಾನ ಆಗದಿರುವುದು ವಿಷಾದಕರವಾದ ವಿಚಾರ. ಬೆಂಗಳೂರಿನಲ್ಲಿ ಕ್ಯುಲೆಕ್ಸ್ ಎನ್ನತಕ್ಕಂತಹ ಸೊಳ್ಳೆಯ ಕಾಟ ಹೆಚ್ಚಾಗಿದೆ. ಇದು ಹೆಚ್ಚಾಗಿ ಕೊಳಚೆ ಪ್ರದೇಶಗಳಲ್ಲಿ ಬರುತ್ತವೆ. ಕೋರಮಂಗಲ ವ್ಯಾಲಿ, ಕೆಂಪಾಂಬುಧಿ ವ್ಯಾಲಿ, ಹೊಸಹಳ್ಳಿ ವ್ಯಾಲಿ—ಮುಂತಾದ ಕೊಳಚೆ ನೀರಿನ ಜಾಗಗಳಲ್ಲಿ ಈ ಸೊಳ್ಳೆಗಳು ಹೆಚ್ಚಾಗಿ ಬೆಳೆಯುತ್ತವೆ. ಅಲ್ಲದೆ ಬೆಂಗಳೂರಿನ ಕೊಳಚೆ ನೀರು ನಗರದಲ್ಲಿರತಕ್ಕಂತಹ ಕೆರೆಗಳಿಗೆ ಹೋಗಿ ಸೇರತಕ್ಕದ್ದನ್ನು ತಪ್ಪಿಸಬೇಕು ಏಕೆಂದರೆ ಅಲ್ಲಿ ಸೊಳ್ಳೆಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇವತ್ತು ಚಾಮರಾಜಪೇಟೆ ಮತ್ತು ಶಂಕರಪುರದ ನೀರು ಕೆಂಪಾಂಬುಧಿ ಕೆರೆಗೆ, ಬಸವನಗುಡಿಯ ನೀರು ಚನ್ನಮ್ಮ ಕೆರೆಗೆ ಮತ್ತು ಜಯನಗರದ ನೀರು ಸಿದ್ದಾಪುರದ ಕೆರೆಗೆ ಹೋಗಿ ಸೇರುತ್ತದೆ. ಇದನ್ನು ತಪ್ಪಿಸಬೇಕು. ಹೀಗೆ ಕೊಳಚೆ ನೀರು ಹೋಗಿ ಕೆರೆಗಳಲ್ಲಿ ಸೇರಿ ಆ ಕೆರೆಯೊಳಗೆ ಒಂದು ದೊಡ್ಡ ಆಶ್ರಯ ಕೊಡತಕ್ಕ ನಿವೇಶನ ಆಗಿರುವುದನ್ನು ತಡೆಗಟ್ಟದೇ ಇರುವುದು ಬಹಳ ವಿಷಾದಕರವಾದ ವಿಚಾರ. ಕಾರ್ಪೊರೇಷನ್ನಿನವರೂ. ವಾಟರ್ ಸಪ್ಲೈ ಬೋರ್ಡಿನವರು ಇದರ ಬಗ್ಗೆ ಕೈಕಟ್ಟಿಕೊಂಡು ಕೂತಿದ್ದಾರೆನ್ನುವುದನ್ನು ನೋಡಿದರೆ ದುಡ್ಡು ಏನೋ ಖರ್ಚಾಗುತ್ತದೆ, ಜನಗಳಿಗೆ ಯಾವ ವಿಧವಾದ ಸೌಕರ್ಯವನ್ನು ಕೊಡುತ್ತಾ ಇಲ್ಲ. ಇದಕ್ಕೆ ಮುಖ್ಯಕಾರಣ, ಬೆಂಗಳೂರು ನಗರದ ಸುತ್ತಲೂ 700 ಎಕರೆಯಲ್ಲಿ ಹುಲ್ಲು ಬೆಳೆಯುತ್ತಿದೆ. ಕೊಳಚೆ ನೀರಿನಿಂದ ಹುಲ್ಲುಬೆಳೆಸುತ್ತಾರೆ. ಬೆಂಗಳೂರು ನಗರದಲ್ಲಿ ಕೊಳಚೆ ನೀರು ಇಲ್ಲದಿದ್ದರೆ ಹುಲ್ಲಿನ ಅಭಾವ ಬರುತ್ತದೆ. ಆದರೆ ಕೆಲವು ಕಡೆಗಳಲ್ಲಿ ಕೊಳಚೆಯ ನೀರು ಸರಿಯಾಗಿ ಹರಿದು ಹೋಗುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುತ್ತಾ ಇಲ್ಲ. ಅದು ಓಪನ್ ಆಗಿ ಹರಿದುಹೋಗುತ್ತಿದೆ. ಕಾರ್ಪೊರೇಷನ್ನಿನವರು ಅನೇಕ ಸಂದರ್ಭಗಳಲ್ಲಿ ಸೊಳ್ಳೆಗಳನ್ನು ನಿವಾರಣೆಮಾಡುವ ಉದ್ದೇಶದಿಂದ ಒಂದು ದೊಡ್ಡ ಎಸ್ಟಾಬ್ಲಿಷ್‌ಮೆಂಟನ್ನು ಇಟ್ಟುಕೊಂಡಿದ್ದಾರೆ. ಅನೇಕ ಜನ ಅಲ್ಲಿ ಹೋಗಿ ಆಯಿಲ್ ಮಾಡುತ್ತಿದ್ದರೂ ಏನೂ ಪ್ರಯೋಜನವಾಗುತ್ತಾ ಇಲ್ಲ. ಇದಕ್ಕೆ ಷಾರ್ಟ್‌ರೇಂಜ್ ಪ್ರಾಬ್ಲಂ, ಲಾಂಗ್ ರೇಂಜ್ ಪ್ರಾಬ್ಲಂ ಹಾಕಿಕೊಂಡು ಕೆಲಸ ಮಾಡಬೇಕು. ಇದರ ಬಗ್ಗೆ ನಾನು ಕೆಲವಾರು ಸಲಹೆಗಳನ್ನು ಗುರ್ತು ಮಾಡಿಕೊಂಡು ಬಂದಿದ್ದೇನೆ. ಅದನ್ನು ಸರ್ಕಾರ

(ಶ್ರೀ ಟಿ. ಆರ್. ಶಾಮಣ್ಣ)

ದವರಿಗೆ ಕಳುಹಿಸಿಕೊಡುತ್ತೇನೆ. ಮೊಟ್ಟ ಮೊದಲನೆಯದಾಗಿ ಬೆಂಗಳೂರು ನಗರದ ಕೊಳಚೆ ನೀರನ್ನು ಬೆಂಗಳೂರು ನಗರದ ಗಡಿಯನ್ನು ಬಿಟ್ಟು ಒಂದು ಮೈಲಿ ದೂರ ತೆಗೆದುಕೊಂಡು ಹೋಗಬೇಕು. ಏಕೆಂದರೆ ಒಂದು, ಒಂದೂವರೆ ಮೈಲಿ ದೂರ ಸೊಳ್ಳೆಗಳು ಹಾರಿ ಹೋಗುವುದಕ್ಕಾಗುವುದಿಲ್ಲ. ಎರಡನೆಯದಾಗಿ ಬೆಂಗಳೂರು ನಗರದಲ್ಲಿ ಸೊಳ್ಳೆ ಕಾಟ ಹೆಚ್ಚುವುದಕ್ಕೆ ಅತಿ ಮುಖ್ಯವಾದ ಕಾರಣವೇನೆಂದರೆ, ಕೊಳಚೆಯ ನೀರನ್ನು ಹೆಚ್ಚಿಗೆ ತರಕಾರಿ, ಹುಲ್ಲು, ಬೆಳೆಯುವುದಕ್ಕೆ ಉಪಯೋಗಿಸುತ್ತಾರೆ. ಕೊಳಚೆ ನೀರು ಹೋಗುವ ದಾರಿಯಲ್ಲಿ ತೋಟದ ಬಾವಿಗಳಿಗೆ ನೀರನ್ನು ದೊರಕಿಸಿಕೊಂಡಿದ್ದೇವೆ. ಅದನ್ನು ಸರ್ಕಾರದವರು, ಕಾರ್ಪೊರೇಷನ್ನಿನವರು ನೋಡಿಕೊಂಡು ಹೋಗುತ್ತಿದ್ದಾರೆ. ಕೊಳಚೆ ನೀರನ್ನು ಉಪಯೋಗಿಸುವುದನ್ನು ನೋಡಿಕೊಂಡು ಹಾಗೆಯೇ ಬಿಟ್ಟುಕೊಂಡು ಹೋಗುತ್ತಿದ್ದಾರೆ. ಈ ಕೊಳಚೆ ನೀರಿನಿಂದ ತೋಟಗಾರಿಕೆಯಾಗುವುದನ್ನು ತಪ್ಪಿಸಬೇಕು. ಮೂರನೆಯದಾಗಿ ಕೊಳಚೆಯ ನೀರಿನಿಂದ ಉತ್ಪನ್ನವಾಗತಕ್ಕದ್ದನ್ನು ತಪ್ಪಿಸಬೇಕು. ಆದರಿಂದಾಗಿ ಅನೇಕ ಕೆರೆಗಳನ್ನು ಬ್ರೀಚ್ ಮಾಡಬೇಕು. ಬೆಂಗಳೂರಿನ ಸುತ್ತಲ್ಲೂ ಕೊಳಚೆ ನೀರು ಸೇರುವ ಕೆರೆಗಳು ಅನೇಕ ಇವೆ. ಆದರೆ ಒಂದು ಅದರ ಪಕ್ಕದಲ್ಲಿಯೇ ಒಂದು ವಿಶಾಲವಾದ ಜಮೀನು ಇದೆ. ಅದು ಡ್ರೈಅಪ್ ಆದವೇಳೆ ಹರಾಜಿನಲ್ಲಿ ಅದನ್ನು ಮಾರಿದರೆ ಬೇಕಾದಷ್ಟು ದುಡ್ಡು ಬರುತ್ತದೆ ಹೀಗೆ ನಮ್ಮ ಕೆಲವು ಏರಿಯಾಗಳಲ್ಲಿ ಸೊಳ್ಳೆಯನ್ನು ನಿರ್ಮೂಲ ಮಾಡಬಹುದು. ಬೆಂಗಳೂರಿನ ಸುತ್ತಮುತ್ತಲೂ ಒಂದು ವಿಸ್ತಾರವಾದ ಪ್ರದೇಶವನ್ನು ನಾವು ಪಡೆಯಬಹುದು. ದುಡ್ಡು ಸಾಲದೇ ಹೋದರೆ ಅಲ್ಲಿರತಕ್ಕ ಜಮೀನನ್ನು ಹರಾಜುಮಾಡಿ ಇದಕ್ಕೆ ಉಪಯೋಗಿಸಬಹುದು. ಬೆಂಗಳೂರು ನಗರದಲ್ಲಿ ಸ್ಯುಯರೇಜ್ ಡಿಸ್‌ಪೋಜಲ್ ಪ್ಲಾಂಟನ್ನು ಹಾಕಬೇಕೆಂದು ತೀರ್ಮಾನವಾಗಿದೆ. ವಾಟರ್ ಸಪ್ಲೈ ಅಂಡ್ ಸ್ಯುಯರೇಜ್ ಬೋರ್ಡಿನವರು ಇದನ್ನು ಕಾರ್ಯಗತಮಾಡಬೇಕು. ಸೊಳ್ಳೆಯ ಕಾಟ ಮಲೆನಾಡಿನ ಪ್ರದೇಶಗಳಲ್ಲಿ ಬಹಳ ಜಾಸ್ತಿ ಇದೆ. ಆದರೂ ನನಗೆ ಗೊತ್ತಿರುವ ಪ್ರಕಾರ ಮಂಡ್ಯ ಪ್ರದೇಶದಲ್ಲಿ ಈಗ ಅದರ ಕಾಟವನ್ನು ಕಡಿಮೆಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ಹತ್ತಾರು ಲಕ್ಷ ರೂಪಾಯಿಗಳು ಖರ್ಚಾದರೂ ಇವುಗಳ ಕಾಟ ಇನ್ನೂ ಕಡಿಮೆಯಾಗದೇ ಇರುವುದು ಬಹಳ ವಿಷಾದಕರವಾಗಿದೆ. ಬೆಂಗಳೂರು ನಗರದಲ್ಲಿ ವರ್ಷೇ ವರ್ಷೇ 50 ಲಕ್ಷ ರೂಪಾಯಿಗಳವರೆಗೆ ಖರ್ಚುಮಾಡಿದರೂ ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೆ ಡ್ರೈನೇಜ್ ಸಿಸ್ಟಂ ಏನೂ ಪ್ರಯೋಜನವಾಗಿಲ್ಲ. ಆ ಕೆಲಸಗಳು ಸಮರ್ಪಕವಾಗಿ ಆಗಿಲ್ಲ. ಇದರಲ್ಲಿ ನೀರು ವಿಶೇಷವಾಗಿ ನಿಂತು ಸೊಳ್ಳೆಗಳು ಹೆಚ್ಚಿಗೆ ಉದ್ಭವವಾಗುವುದಕ್ಕೆ ಅನುಕೂಲವಾಗುತ್ತಿದೆ. ಬೆಂಗಳೂರು ನಗರದಲ್ಲಿ ಹೆಚ್ಚಿಗೆ ಸ್ಲಮ್ಸ್ ಇರುವ ಕಡೆ ಅದರಲ್ಲಿಯೂ ಬಡವರು ವಾಸಿಸುತ್ತಿರುವ ಕಡೆಗಳಲ್ಲಿ ಸ್ಯುಯರೇಜ್ ಸಿಸ್ಟಂ ಇಲ್ಲದೇ ಇರುವುದು ಬಹಳ ವಿಷಾದಕರ. ಒಟ್ಟಿನಲ್ಲಿ ಬೆಂಗಳೂರಿನ ಸುತ್ತಲೂ ಸ್ಯುಯರೇಜ್ ಸಿಸ್ಟಂ ಇನ್ನೂ ಜಾರಿಗೆ ಬರಲಿಲ್ಲ. ಇದರಿಂದ ಕೊಳಚೆಯ ನೀರು ಹಾಗೆಯೇ ನಿಂತು ವಿಶೇಷವಾಗಿ ಸೊಳ್ಳೆಗಳು ಉದ್ಭವವಾಗುವುದಕ್ಕೆ ಅನುಕೂಲವಾಗುತ್ತಿದೆ. ಬೆಂಗಳೂರಿನ ಸುತ್ತಮುತ್ತಲೂ ಅನೇಕ ಕಾಲುವೆಗಳನ್ನು ಒಡೆದುಹಾಕಿ ಕೆರೆಗಳನ್ನಾಗಿ ಮಾಡುತ್ತಿದ್ದಾರೆ. ಅಲ್ಲಿ ನೀರು ನಿಲ್ಲುವ ಹಾಗೆ ಏನಾದರೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಬೆಂಗಳೂರು ನಗರದಲ್ಲಿ ಟ್ರಸ್ಟ್ ಬೋರ್ಡ್ ಇದೆ, ಕಾರ್ಪೊರೇಷನ್ ಇದೆ, ವಾಟರ್ ಸಪ್ಲೈ ಅಂಡ್ ಸ್ಯುಯರೇಜ್ ಬೋರ್ಡ್ ಇದೆ. ಹೀಗೆ ಈ ಮೂರು ಸಂಸ್ಥೆಗಳೂ ಒಟ್ಟುಗೂಡಿ ಒಂದು ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಒಂದು ಕೋಆರ್ಡಿನೇಟ್ ಅರೇಂಜ್‌ಮೆಂಟ್ ಇರಬೇಕು. ಅದೂ ಅಲ್ಲದೆ ಈಗ ಮೂರು ಮುಖ್ಯವಾದಂಥ ಮೇಜರ್ ವ್ಯಾಲಿಗಳಿವೆ. ಅವು ಯಾವುದೆಂದರೆ ಚಳ್ಳಘಟ್ಟ ಕೋರಮಂಗಲ ಮತ್ತು ವೃಷಭಾವತಿ ಈ ಮೂರು ಜಾಗಗಳಲ್ಲಿ ಸ್ಯುಯರೇಜ್ ಡಿಸ್‌ಪೋಜಲ್ ಪ್ಲಾಂಟ್ ಹಾಕಬೇಕು. ಆದರೆ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳಬೇಕಾದರೆ ಕೋಟ್ಯಾಂತರ ರೂಪಾಯಿಗಳು ಈಗ ಖರ್ಚಾಗುತ್ತದೆ. ಅದರೂ ಇದಕ್ಕೆ ತಗಲುವ ಖರ್ಚನ್ನೆಲ್ಲಾ ಕಾರ್ಪೊರೇಷನ್ ವಹಿಸಿಕೊಳ್ಳುವುದಕ್ಕಾಗುವುದಿಲ್ಲ. ನನಗೆ ತಿಳಿದು ಬಂದಿರುವ ಪ್ರಕಾರ ಬೆಂಗಳೂರು ನಗರದಲ್ಲಿ ಹೆಚ್ಚು ಭಾಗದ ಜನರು ಹುಲ್ಲನ್ನು ಸ್ಯುಯರೇಜ್ ನೀರಿನಿಂದಲೇ ಬೆಳೆಯುತ್ತಾರೆ. ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಹಾಗೂ ಕಾರ್ಪೊರೇಷನ್ನಿನವರು ಈ ಒಂದು ಬಾಬಿಗೆ ಬೇಕಾದಷ್ಟು ಹಣವನ್ನು ಒದಗಿಸಬೇಕಾಗಿದೆ. ಒಂದು ವೇಳೆ ಆ ಹಣ ಸಾಲದೇ ಇದ್ದರೆ ಪಬ್ಲಿಕ್ ಬಾರೋಯಿಂಗ್ ತೆಗೆದುಕೊಂಡು ಈ ಒಂದು ಸಮಸ್ಯೆಯನ್ನು ಬೇಗ ಬಗೆಹರಿಸಬೇಕಾಗಿದೆ. ಇದು ಬಹಳ ದೊಡ್ಡ ಪ್ರಾಬ್ಲಂ. ಈ ಬಾಬಿಗೆ ಹಣವನ್ನು ಹೆಚ್ಚಿಗೆ ಖರ್ಚುಮಾಡುವುದು ವೃಥಾ ವ್ಯರ್ಥವಾಗುತ್ತದೆ. ಜೊತೆಗೆ ಜನಗಳಿಗೆ ಕೆಟ್ಟಿನ ಸೌಲಭ್ಯ ದೊರಕುವುದೂ ಸಹ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈಗ ಯುದ್ಧದ ಪರಿಸ್ಥಿತಿ ಎಂಬುದಾಗಿ ತಿಳಿದುಕೊಂಡು ಸೊಳ್ಳೆಯ ಮೇಲೆ ಯುದ್ಧ

ಮಾಡುವ ಹಾಗೆ ಮಾಡದಿದ್ದರೆ, ಮುಂದೆ ಜನತೆಗೆ ಬಹಳವಾಗಿ ತೊಂದರೆಯಾಗುತ್ತದೆ. ಅನೇಕ ಕಡೆಗಳಲ್ಲಿ ಸರ್ಕಾರದವರು ಇದರ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿರುವುದನ್ನು ಬೇಕಾದರೆ ನಾನು ಸ್ಪಷ್ಟಪಡಿಸುತ್ತೇನೆ. ಸರ್ಕಾರದವರು ಹಾಗೂ ಮುನಿಸಿಪಾಲಿಟಿಯವರು ಇದರ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಅದನ್ನು ಬೇಕಾದರೆ ಟ್ರಸ್ಟ್ ಬೋರ್ಡಿನವರು ಮಾಡಲಿ ಎಂದು ಅವರಿಗೆ ಬಿಟ್ಟುಕೊಟ್ಟು ಎಲ್ಲಾ ತರಹ ಡಿಸೀಜ್‌ಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇದರ ಬಗ್ಗೆ ಈಗಲೇ ಸಾಕಾದಷ್ಟು ವ್ಯವಸ್ಥೆಯನ್ನು ಮಾಡದೇ ಹೋದರೆ ಜನರು ಮುಂದೆ ಬಹಳ ಪಶ್ಚಾತ್ತಾಪ ಪಡಬೇಕಾಗಿ ಬರುತ್ತದೆ. ಬೆಂಗಳೂರು ನಗರ ಬಹಳ ಸುಂದರವಾದ ನಗರ. ಜನಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದು, ಕ್ಷೋಭೆ ಇದ್ದಾಗ ಜನಗಳಿಗೆ ತೊಂದರೆಯಾಗುತ್ತಿರುವುದನ್ನು ಬಗೆಹರಿಸುವುದು ಸರ್ಕಾರದ ಕರ್ತವ್ಯ. ಹಾಗೆ ಮಾಡದೆ ಬೇಜವಾಬ್ದಾರಿಯಿಂದ ಮತ್ತು ಏನೋ ಸಬೂಬಿನಿಂದ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಇದಕ್ಕೆ ಸೂಕ್ತ ಕ್ರಮ ಬಹಳ ಮುಖ್ಯವಾದುದು. ಏಕೆಂದರೆ ಈ ಸಮಸ್ಯೆಯ ಬಗ್ಗೆ ಸರ್ಕಾರಕ್ಕೆ ಬೇಕಾದಷ್ಟು ವರದಿಗಳು ಬಂದಿವೆ. ನಮಗೂ ಕೂಡ ಬೇಕಾದಷ್ಟು ಕಾಗದಗಳನ್ನು ಕಳುಹಿಸುತ್ತಿದ್ದಾರೆ. ಆದರೆ ಇದಕ್ಕೆ ಸರಿಯಾದ ಪರಿಹಾರ ಸಿಗದೇ ಇರುವುದನ್ನು ನಾನು ಈ ಸಂದರ್ಭದಲ್ಲಿ ನೋಡುತ್ತಿದ್ದೇನೆ. ಒಟ್ಟಿನಲ್ಲಿ ಎಲ್ಲೆಲ್ಲಿ ಸೊಳ್ಳೆಗಳ ಕಾಟವನ್ನು ಪರಿಹಾರಮಾಡಬಹುದೋ ಅಲ್ಲಲ್ಲಿ ಕೂಡಲೇ ಪರಿಹಾರ ಮಾಡಿ ಅದರಿಂದ ಜನಗಳಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕು. ಅದನ್ನು ಸರ್ಕಾರದವರು ಇನ್ನೂ ಮಾಡದೇ ಇರುವುದು ಬಹಳ ವಿಷಾದಕರ. ಆಹಾರಸಮಸ್ಯೆ, ನೀರಿನ ಸಮಸ್ಯೆ ಹಾಗೂ ಇತರ ಸಮಸ್ಯೆಗಳನ್ನು ಸರ್ಕಾರದವರು ಬಗೆಹರಿಸುತ್ತಿರುವಂತೆ ಅತಿಮುಖ್ಯವಾದಂಥ ಈ ಸೊಳ್ಳೆ ಕಾಟದ ಸಮಸ್ಯೆಯನ್ನು ಸರ್ಕಾರಕ್ಕೆ ತಗ್ಗಿಸುವುದಕ್ಕೆ ಆಗುವುದಿಲ್ಲವೇ ಎಂದು ನಾನು ಪ್ರಶ್ನೆ ಮಾಡುತ್ತೇನೆ.

11—30 A. M.

ರಾತ್ರಿ ವೇಳೆಯಲ್ಲಿ ನಿದ್ರೆಮಾಡುವುದಕ್ಕೆ ಎಷ್ಟು ಕಷ್ಟಪಟ್ಟರೂ ಸಾಧ್ಯವಾಗುತ್ತಿಲ್ಲ. ಈ ಸೊಳ್ಳೆಗಳ ಕಾಟದಿಂದ ಅದಕ್ಕೆ ಅಸ್ಪದವಿಲ್ಲದಂತಾಗಿದೆ. ಒಟ್ಟಿನಲ್ಲಿ ಈ ಸೊಳ್ಳೆಗಳ ಕಿರುಕುಳವನ್ನು ಇಷ್ಟೇ ಎಂದು ವರ್ಣಿಸುವುದಕ್ಕಾಗುವುದಿಲ್ಲ. ಆದಕಾರಣ ಸರ್ಕಾರದವರು ಇದನ್ನು ಅಷ್ಟು ಲಘುವಾಗಿ ಭಾವಿಸದೆ ಕೂಡಲೇ ತೀವ್ರ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಮಾಡುತ್ತಿದ್ದೇನೆ. ಸರ್ಕಾರದವರು ಉತ್ತರ ಕೊಡತಕ್ಕ ಕಾಲದಲ್ಲಿ ಇದನ್ನು ಇನ್ನು ಒಂದೆರಡು ವರ್ಷಗಳಲ್ಲಿ ಬಗೆಹರಿಸುತ್ತೇವೆಂದು ಹೇಳಬಾರದು. ಏನೋ ಶ್ಯಾಮಣ್ಣನವರು ಮಾತನಾಡಿದ್ದಾರೆ, ಆಯಿತು ಇರಲಿ, ನೋಡೋಣ ಅನ್ನತಕ್ಕ ಮನೋಭಾವನೆಯನ್ನು ದೂರ ಮಾಡಿ ಶಾಶ್ವತವಾಗಿ ನಗರದಲ್ಲಿ ಸೊಳ್ಳೆ ಕಾಟವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇದರಲ್ಲಿ ಮೂಲಭೂತವಾಗಿ ಸೊಳ್ಳೆಗಳು ಹೇಗೆ ಎಲ್ಲಿ ಉತ್ಪತ್ತಿಯಾಗುತ್ತವೆ, ಅವುಗಳನ್ನು ಮೂಲದಲ್ಲೇ ನಿರ್ಮೂಲಮಾಡುವುದಕ್ಕೇನು ಮಾಡಬೇಕು ಎಂಬುದನ್ನೆಲ್ಲಾ ಕಂಡುಕೊಂಡು ಇದರ ಬಗ್ಗೆ ಒಂದು ಷಾರ್ಟ್‌ರೇಂಜ್ ಮತ್ತು ಲಾಂಗ್ ರೇಂಜ್ ಪ್ಲಾನನ್ನು ಹಾಕಿಕೊಂಡು ಕ್ರಮವಾಗಿ ಶಾಸ್ತ್ರೋಕ್ತವಾಗಿ ಈ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ನಾನು ಸ್ವಂತವಾಗಿ ಒಂದು ಕಾರ್ಯಕ್ರಮಗಳ ಪಟ್ಟಿಯನ್ನು ಹಾಕಿದ್ದೇನೆ. ಅದನ್ನು ಮಾನ್ಯ ಸಚಿವರಕಡೆಗೆ ಕೊಡುತ್ತೇನೆ, ಅವರು ಇದನ್ನು ಗಮನಕ್ಕೆ ತೆಗೆದುಕೊಂಡು ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತಿದ್ದೇನೆ. ಇದರಲ್ಲಿ 13—14 ಐಟಂ ವಿಷಯಗಳನ್ನು ಸೇರಿಸಿದ್ದೇನೆ. ಅವುಗಳು ಏನೆಂದರೆ :—

Tackling is most urgent for the first instance and latarly giving attention to the minor aspects. The three major valleys viz.; Challagahatta, Koramangala and Viswa Bharathi are the ones which are to be tackled immediately. Channammakere area is also bad and should be included in the priority list and so also Marenhalli Tank. All this means a very heavy expenditure of a few crores. This finance is to be got—a substantial portion as grants from the State and Central Governments and the balance should be raised as loans. The loans raised may be easily paid back from the savings of the heavy expenditure the Corporation is incurring year after year to tackle the mosquito menace.

(ಶ್ರೀ ಟಿ. ಆರ್. ಶಾಮಣ್ಣ)

This mosquito nuisance is to be tackled on a war footing. After careful planning, the work should be executed speedily and effectively. If concerted measures are not taken and if work is done in a half-hearted manner as is being done so far, large sums of Corporation Funds will be wasted annually and the poor citizens will continue to have the mosquito nuisance.

ಈ ದಿವಸ ಕಾರ್ಪೊರೇಷನ್ನಿನವರು ಈ ಡ್ರೈನೇಜ್ ಕ್ಲೀನಿಂಗ್ ಬಗ್ಗೆ 13 ಲಕ್ಷ ರೂಪಾಯಿಗಳನ್ನು ಪ್ರತಿವರ್ಷ ಖರ್ಚು ಮಾಡುತ್ತಿದ್ದಾರೆ. ಅದು ಮಾಡಿದರೂ ಪ್ರಯೋಜನವಿಲ್ಲದೆ ಅವರು ಮಾಡತಕ್ಕ ಖರ್ಚು ನಿರರ್ಥಕವಾಗುತ್ತಿದೆ. ಆದರೆ ಸಂಪೂರ್ಣವಾಗಿ ಈ ಸೊಳ್ಳೆಗಳ ಕಾಟವನ್ನು ತಪ್ಪಿಸುವುದಕ್ಕೆ ಅವರಲ್ಲಿ ಸಾಕಷ್ಟು ಹಣವಿಲ್ಲ. ಆದ್ದರಿಂದ ಸರ್ಕಾರದವರೇ ಇವಕ್ಕೆ ಹಣವನ್ನು ಒದಗಿಸಿಕೊಳ್ಳಬೇಕೆಂದೂ ಒತ್ತಾಯ ಮಾಡುತ್ತೇನೆ. ಆದರೆ ಸಂಬಂಧಪಟ್ಟ ಸಚಿವರು ಸಭೆಯಲ್ಲಿಲ್ಲದಿರುವುದು ಶೋಚನೀಯ. ಯಾವ ರೀತಿಯಲ್ಲಾದರೂ ಸರ್ಕಾರ ಕ್ರಮವನ್ನು ಕೈಗೊಳ್ಳಲೇಬೇಕೆಂದು ಒತ್ತಾಯ ಮಾಡಿ ಈ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ಸಭೆಯ ಮುಂದೆ ಮಂಡಿಸಿ ಇವಕ್ಕೆ ಸರ್ವರೂ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧೀನಗರ).—ಮಾನ್ಯ ಸಭಾಧ್ಯಕ್ಷರೇ; ಶ್ರೀ ಟಿ. ಆರ್. ಶಾಮಣ್ಣನವರು ತಂದಿರತಕ್ಕ ನಿರ್ಣಯದಲ್ಲಿ ಅವರೇನು ಹೇಳಿದ್ದಾರೆ ಆ ವಿಷಯ ಅನೇಕಾವರ್ತಿ ಇದೇ ಸಭೆಯ ಮುಂದೆ ಚರ್ಚೆಯಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ಪ್ರತಿಸಲವೂ ಉತ್ತರ ಕೊಡತಕ್ಕ ಕಾಲದಲ್ಲಿ ಇದರ ಜವಾಬ್ದಾರಿ ಕಾರ್ಪೊರೇಷನ್ನಿಗೆ ಸೇರಿದ್ದು ಎಂದು ಹೇಳಿ ಇದನ್ನು ಪರಿಸಮಾಪ್ತಿ ಮಾಡುವುದು ಒಂದು ವಾಡಿಕೆಯಾಗಿ ಬಂದಿದೆ. ನಾನು ಹಾಗೆ ಭಾವಿಸುವುದಿಲ್ಲ. ಈ ಸೊಳ್ಳೆ ಕಾಟವನ್ನು ತಪ್ಪಿಸುವುದಕ್ಕೆ ಹೌಸಿಂಗ್ ಬೋರ್ಡಿನವರಿಂದಲಾಗಲೀ, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರಿಂದಾಗಲಿ ಅಥವಾ ಕಾರ್ಪೊರೇಷನ್ನಿನವರಿಂದಲಾಗಲಿ ಖಂಡಿತಾ ಸಾಧ್ಯವಿಲ್ಲ. ಇವುಗಳಿಗೆ ಬರತಕ್ಕ ಉತ್ಪತ್ತಿ ಏನಿದೆ ಅದು ಅವುಗಳ ಮೈಂಟೆನೆನ್ಸಿಗೇ ಸಾಲದು ಆದುದರಿಂದ ಇದನ್ನು ಪರಿಣಾಮಕಾರಿಯಾದ ರೀತಿಯಲ್ಲಿ ತಡೆಗಟ್ಟಬೇಕಾಗಿದ್ದರೆ ತಜ್ಞರ ಮೂಲಕ ಇದು ಯಾವ ಪ್ರಮಾಣದಲ್ಲಿ ಉತ್ಪನ್ನವಾಗುತ್ತದೆ ಎಂಬುದನ್ನು ಅರಿತು ಅದಕ್ಕೆ ತಕ್ಕ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಈ ದಿವಸ ಕಾರ್ಪೊರೇಷನ್ನಿಗೆ ಬರತಕ್ಕ 8 ಕೋಟಿ ರೂಪಾಯಿ ವರಮಾನದಲ್ಲಿ 4 ಕೋಟಿ ರೂಪಾಯಿ ಸಂಬಳ ಸಾರಿಗೆಗೆ ಹೋಗುತ್ತಿದೆ. ಇನ್ನುಳಿದ ಹಣದಲ್ಲಿ ಅದರ ಅಗತ್ಯವಾದ ಇತರೇ ಅನೇಕ ಬಾಬುಗಳಿಗೆ ಸಾಲದಾಗಿದೆ. ಈ ಹಿಂದೆ 1960 ರಲ್ಲಿ ಈ ನಗರದಲ್ಲಿದ್ದ ಸೊಳ್ಳೆಗಳ ಕಾಟಕ್ಕೂ ಈಗಿರತಕ್ಕ ಸೊಳ್ಳೆಗಳ ಕಾಟಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈಗ ಬಹಳ ಜಾಸ್ತಿಯಾಗಿದೆ. ಇದರಿಂದ ಜನರ ಆರೋಗ್ಯ ಹಾಳಾಗುತ್ತಿದೆ. ಇದು ಖಾಯಿಲೆ ಇರತಕ್ಕವರಿಗೂ ಇಲ್ಲದವರಿಗೂ ಒಂದೇ ಸಮನಾಗಿ ಕಿರುಕುಳವನ್ನು ಕೊಡುತ್ತಿವೆ. ಇದರಿಂದ ನಗರದ ಜನರ ಆರೋಗ್ಯ ಕೆಡುತ್ತಿದೆ. ಆದುದರಿಂದ ನಾನು ಇದರ ಬಗ್ಗೆ ಸಲಹೆಮಾಡುವುದೇನೆಂದರೆ ಇಡೀ ಸಂಸ್ಥಾನಾವಾಳೆ ಐದು ಲಕ್ಷ ಜನ ಸಂಖ್ಯೆಯುಳ್ಳ ಎಲ್ಲಾ ಸಣ್ಣ ದೊಡ್ಡ ಪಟ್ಟಣಗಳಿಗೂ ಇದರ ಪಿಡುಗು ಬಹಳವಾಗಿರುವುದರಿಂದ ಇದರ ಬಗ್ಗೆ ಒಂದು ಬೋರ್ಡನ್ನೇ ನೇಮಕ ಮಾಡಿ ಇದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ಹುಟ್ಟತಕ್ಕ ಎಳೆಯ ಮಕ್ಕಳು ಅಮ್ಮಮ್ಮ ಎಂದರೆ 4—5 ಪೌಂಡುಗಳು ಇದ್ದರೆ ಹೆಚ್ಚಾಯಿತು. ಆ ಮಕ್ಕಳ ರಕ್ತವನ್ನೆಲ್ಲಾ ಈ ಸೊಳ್ಳೆಗಳು ಹೀರುತ್ತಿವೆ. ಆ ಮಕ್ಕಳ ಗತಿಯನ್ನು ನೋಡುವುದಕಾಗುತ್ತಿಲ್ಲ. ಆದರೆ ಇದೇ ವಿಷಯ ಹೋದ ವರ್ಷ ಕೂಡ ಇಲ್ಲಿಗೆ ಬಂದು ಚರ್ಚೆ ಆಯಿತು. ಆ ತೀರ್ಮಾನದ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಇದರ ಬಗ್ಗೆ ಸರ್ಕಾರದವರು ಬಡ್ಜೆಟ್ಟಿನಲ್ಲಿ ಹಣವನ್ನೇನಾದರೂ ಒದಗಿಸಬಹುದೆಂದು ನಾನು ಆಸೆಯನ್ನು ಇಟ್ಟುಕೊಂಡಿದ್ದೆ. ಅದು ನಮ್ಮ ದುರಾದೃಷ್ಟ ಹಣವನ್ನೇನೂ ಸರ್ಕಾರ ಒದಗಿಸಿಲ್ಲ. ಆದರೆ ತಜ್ಞರ ಅಭಿಪ್ರಾಯದ ಪ್ರಕಾರ ಈ ಸೊಳ್ಳೆಗಳ ಕಾಟವನ್ನು ತಪ್ಪಿಸುವುದಕ್ಕೆ ಕನಿಷ್ಟಪಕ್ಷ 5 ಕೋಟಿ ರೂಪಾಯಿಗಳಾದರೂ ಬೇಕೇ ಬೇಕೆಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ಇದು ಕಾರ್ಪೊರೇಷನ್ನಿನವರಿಂದ ಆಗದ ಮಾತು. ಈ ನಗರದಿಂದ ಕಳೆದ 25 ವರ್ಷಗಳಿಂದ ಎಷ್ಟೋ ಜನರು ಈ ಶಾಸನ ಸಭೆಗೆ ಚುನಾಯಿತರಾಗಿ ಇಲ್ಲಿಗೂ ಮತ್ತು ಮೇಲ್ಮನೆಗೂ ಬರುತ್ತಿದ್ದೇವೆ. ಹಾಗೆ ಚುನಾಯಿತರಾಗಿ ಇಲ್ಲಿಗೆ ಬಂದ ಮೇಲೆ ನಾವು ಸಾರ್ವಜನಿಕರ ಬಗ್ಗೆ ಏನೊಂದು ಉಪಕಾರದ ಕೆಲಸವನ್ನು ಮಾಡಿದ್ದೇವೆಯೋ ಎಂದರೆ ಅದು ಎಲ್ಲಿಯೂ

ಕಾಣುತ್ತಿಲ್ಲ. ನಾವು ಒಂದು ಪಾಠಶಾಲೆಯನ್ನು ಕೇಳಲಿ, ಆಸ್ಪತ್ರೆಯನ್ನು ಕೇಳಲಿ ಎಲ್ಲದಕ್ಕೂ ಕಾರ್ಪೊರೇಷನ್ನನ್ನು ಕೇಳಿ ಎಂದು ಹೇಳುತ್ತಿದ್ದಾರೆ. ಹಾಗಾದರೆ ಇಲ್ಲಿ ಎಲ್ಲವೂ ಕಾರ್ಪೊರೇಷನ್ನಿನ ಜವಾಬ್ದಾರಿಯಾದರೆ ಸರ್ಕಾರ ಏನೂ ಮಾಡಬೇಕಾದ್ದೇ ಇಲ್ಲವೋ ? ಹಾಗಾದರೆ ಈ ನಗರದವರು ಸರ್ಕಾರಕ್ಕೆ ಏಕೆ ಕೋಟಿಗಟ್ಟಲೆ ಟ್ಯಾಕ್ಸ್‌ನ್ನು ಕೊಡಬೇಕು ? ಈ ಒಂದು ಕಾರಣದಿಂದಲೇ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತಿದ್ದೇನೆ, ಸಂಸ್ಥಾನಾ ಮಾಳೆ ಎಲ್ಲೆಲ್ಲಿ 5 ಲಕ್ಷ ಪ್ರಜಾ ಸಂಖ್ಯೆ ಇರತಕ್ಕ ದೊಡ್ಡದೊಡ್ಡ ಊರುಗಳಿವೆಯೋ ಅಲ್ಲೆಲ್ಲಾ ಇವುಗಳ ಕಾಟ ಹೆಚ್ಚಾಗಿದೆ. ಅದಕ್ಕಾಗಿ ರಾಜ್ಯಾದ್ಯಂತ ಒಂದು ಸಮಗ್ರ ಯೋಜನೆಯನ್ನು ನಾವು ಇದಕ್ಕಾಗಿ ರೂಪಿಸಬೇಕಾಗಿದೆ. ಈ ವಿಚಾರದಲ್ಲಿ ತಾಲ್ಲೂಕ್ ಬೋರ್ಡುಗಳಿಗಾಗಲಿ, ಮುನಿಸಿಪಾಲಿಟಿಗಳಿಗಾಗಲೀ ಇಲ್ಲವೇ ಕಾರ್ಪೊರೇಷನ್ನಿಗಾಗಲೀ ಇದರ ಜವಾಬ್ದಾರಿಯನ್ನು ಹೊರಿಸುವುದು ಖಂಡಿತ ಸರಿಯಾದ್ದಲ್ಲ. ಈ ಕಾರ್ಯವನ್ನು ಸರ್ಕಾರದವರು ಕೈಗೊಂಡರೆ ಅವರಿಗೆ ಯಾವ ರೀತಿಯಲ್ಲೂ ಲುಕ್ಸಾನೇನೂ ಆಗುವುದಿಲ್ಲ. ಬೆಂಗಳೂರು ಸುತ್ತುಮುತ್ತಲು ಸುಮಾರು 15—16 ಮೈಲಿ ಫಾಸಲೆಯವರೆಗೆ ಜನರು ಅನೇಕ ರೀತಿಯಲ್ಲಿ ಬೇಸಾಯ ಮಾಡುತ್ತಾ ಹಣ್ಣಿನ ತೋಟಗಳನ್ನು ಮತ್ತು ಹುಲ್ಲುಗಾವಲುಗಳನ್ನೂ ಬೆಳೆಸುತ್ತಿದ್ದಾರೆ. ಇದರಿಂದ ಸೊಳ್ಳೆಗಳ ಕಾಟ ಜಾಸ್ತಿ ಆಗಿದೆ. ಇದನ್ನು ತಡೆಯುವುದಕ್ಕಾಗಿ ಅಷ್ಟೂ ಜಮೀನನ್ನು ಸರ್ಕಾರ ಅಕ್ವಯಿರ್ ಮಾಡಿಕೊಂಡರೆ, ಅದನ್ನು ಮತ್ತೆ ಲೇಔಟ್ ಮಾಡಿ ನಿವೇಶನಗಳಾಗಿ ಮಾರಾಟ ಮಾಡಿದರೆ ಅದರಿಂದ ಸರ್ಕಾರಕ್ಕೆ ಬಹಳ ಹಣ ಬರುತ್ತದೆ.

ಆದರೆ ಇನ್ನೊಂದು ವಿಚಾರ—ನಾನು ಅದನ್ನು ಹೇಳಬಾರದು. ಇತ್ತೀಚೆಗೆ ನಗರದ ಆಸ್ತಿಕ ಮಹನೀಯರಲ್ಲಿ ದೈವಭಕ್ತಿ, ವೆಂಕಟೇಶ್ವರನ ಬಗ್ಗೆ ಇದ್ದ ಭಕ್ತಿ ಮಾಯವಾಗಿ ಅದಕ್ಕೆ ಪ್ರತಿಯಾಗಿ ಜನರು ಕೋಡೇಶ್ವರನ ಭಕ್ತರಾಗುತ್ತಿದ್ದಾರೆ. ಈ ಕೋಡೇಶ್ವರನ ಪ್ರಾರ್ಥನೆ ಮಾಡತಕ್ಕ ಜನರೇ ಎಲ್ಲೆಲ್ಲೂ ಜಾಸ್ತಿಯಾಗುತ್ತಿದ್ದಾರೆ. ಮನೆ ಮನೆಗಳಲ್ಲೆಲ್ಲಾ ಹೆಂಡದಂಗಡಿಗಳೂ—ಚಾಕ್ನಾ ಅಂಗಡಿಗಳು ಚಲಾವಣೆಗೆ ಬರುತ್ತಿವೆ. ಸೊಳ್ಳೆಗಳ ನಿವಾರಣೆ ಮಾಡಬೇಕಾದ್ದು ಏನಿದೆ ಇದು ನಮ್ಮ ಮುಂದಿರುವ ಮುಖ್ಯವಾದ ಪ್ರಶ್ನೆ, ಸರಿಯಾದ ಜವಾಬ್ದಾರಿ ವಹಿಸಬೇಕು, ಸರಕಾರ ಒಂದು ಬೋರ್ಡನ್ನು ರಚಿಸಬೇಕು. ಇಂದು ಸ್ವಲ್ಪ ಹಣ ಒದಗಿಸಿ ಪರಿಸ್ಥಿತಿ ನಿವಾರಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಸರಕಾರದವರು ಮಾಡುವರು. ಕಾರ್ಪೊರೇಷನ್ನಿಗೆ ಹೆಚ್ಚು ವರಮಾನವಿಲ್ಲದಿರುವುದರಿಂದ ಅದಕ್ಕೆ ಸಾಧ್ಯವಾಗುವುದಿಲ್ಲ. ಹಾಗಿರುವಾಗ ಕಾರ್ಪೊರೇಷನ್ ಮಾಡಬೇಕೆಂದು ಹೇಳುವುದು ಸೂಕ್ತವಲ್ಲ. ಹೆಚ್ಚು ತೆರಿಗೆ ಹಾಕಿದರೆ ಬಡವರು ಜಾಸ್ತಿ ಕೊಡಲಾರರು. ನನ್ನ ಕ್ಷೇತ್ರದಲ್ಲಿ ಗುಡಿಸಲುಗಳು ಹೆಚ್ಚಾಗಿವೆ, ಅಲ್ಲಿ ಬಡವರು, ಕೂಲಿಗಾರರು ಹೆಚ್ಚಾಗಿದ್ದಾರೆ. ಆದುದರಿಂದ ಸರಕಾರ ಜವಾಬ್ದಾರಿಯನ್ನು ತಾನು ಬಹಳವಾಗಿ ವಹಿಸಿಕೊಂಡು ಕೆಲಸಮಾಡಬೇಕು. 5 ಲಕ್ಷ ಜನಸಂಖ್ಯೆ ಇರುವ ಪ್ರತಿಯೊಂದು ಪಟ್ಟಣಕ್ಕೂ ಅನ್ವಯಿಸುವಂತೆ ಒಂದು ಬೋರ್ಡ್ ಮಾಡಬೇಕು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷಣಿಯವರೇ, ಬೆಂಗಳೂರು ನಗರದಲ್ಲಿರುವ ಸೊಳ್ಳೆ ಕಾಟ ಬಹಳವಾಗಿದೆ, ಮುಖ್ಯವಾಗಿ ವಿಲ್ಸನ್ ಗಾರ್ಡನ್, ಶಾಂತಿನಗರ, ಬೆಂಗಳೂರು ಮಧ್ಯಭಾಗ, ಬಸವನಗುಡಿ ಮುಂತಾದ ಅನೇಕ ಕಡೆಗಳಲ್ಲಿ ಸೊಳ್ಳೆ ಕಾಟ ಅಸಾಧ್ಯವಾಗಿದೆ. ಹೋದ ಸಲ ನೀರಿನ ದರ ಏರಿಕೆಯಾದಾಗ ಅದನ್ನು ಕಡಮೆಮಾಡಬೇಕೆಂದು ಚಳವಳಿ ಮಾಡಿದೆವು. ಆಗ ಶ್ರೀ ಎಚ್. ಎನ್. ನಂಜೇಗೌಡರು ವಿರೋಧಪಕ್ಷದಲ್ಲಿ ನಮ್ಮ ಜೊತೆಯಲ್ಲಿದ್ದರು. ನಮ್ಮನ್ನು ದಸ್ತಗಿರಿ ಮಾಡಿದ್ದರು ವಿಲ್ಸನ್‌ಗಾರ್ಡನ್ ಪೋಲೀಸ್ ಸ್ಟೇಷನ್ನಿನಲ್ಲಿ ಒಂದು ದಿವಸ ಇರುವುದಕ್ಕೆ ಸಾಧ್ಯವಾಗಲಿಲ್ಲ, ಆಗ ಶ್ರೀ ಟಿ. ಸುಬ್ರಹ್ಮಣ್ಯರವರ ಸ್ಥಿತಿ ನೋಡಿ ಸಹಿಸಲಾರದೆ ಯಾರೋ ಒಂದು ಬುರುಕ ತಂದು ಹಾಕಿದರು. ಅಲ್ಲಿನ ಕಾನ್‌ಸ್ಟೇಬಲ್ಲುಗಳನ್ನು, ಹೇಗೆ ಇರುತ್ತೀರಿ ಎಂದು ಕೇಳಿದರೆ ಸ್ವಲ್ಪ ಹೊತ್ತಾದ ನಂತರ ಬುರುಕ ತರಹ ಏನಾದರೂ ಉಪಯೋಗ ಮಾಡುವುದಾಗಿ ತಿಳಿಸಿದರು. ಬೆಂಗಳೂರು ನಗರದಲ್ಲಿ ಸೊಳ್ಳೆಗಳದು ಕಠಿಣ ಸಮಸ್ಯೆಯಾಗಿದೆ. ಇದರಿಂದ ಜನರಿಗೆ ಅನಾರೋಗ್ಯ ಮಾತ್ರವಲ್ಲದೆ ರಾಜ್ಯಕ್ಕೆ ವರಮಾನವೂ ಕಡಮೆಯಾಗುವುದು. ವಿದೇಶದಿಂದ ಇಲ್ಲಿಗೆ ಬಹಳ ಮಂದಿ ಬರುತ್ತಿದ್ದಾರೆ. ಸೊಳ್ಳೆ ಕಾಟ ಕಂಡು ಅವರು ಬರುವುದೂ ಕಡಮೆಯಾಗುವುದು. ಹೋಟೇಲುಗಳಲ್ಲೂ ಸೊಳ್ಳೆಕಾಟ ಜಾಸ್ತಿಯಾಗಿದೆ ಎಂದು ಹೇಳುವರು. ಈ ಕಾಟವನ್ನು ಜಾಗ್ರತೆ ತಪ್ಪಿಸಬೇಕಾಗಿದೆ. ಶ್ರೀ ಶಾಮಣ್ಣನವರು ಚೆನ್ನಾಗಿ ವಿವರಿಸಿದ್ದಾರೆ. ಎರಡುಮೂರು ಅಂಶ ಮಾತ್ರ ತಿಳಿಸುತ್ತೇನೆ.

ಬೆಂಗಳೂರಿನ ಸುತ್ತಲೂ ಕೆರೆಗಳಿವೆ, ಅಲ್ಲಿಗೆ ಸ್ಯೂಅರೇಜ್ ವಾಟರನ್ನು ಬಿಡುವರು, ಚಳ್ಳಗಟ್ಟ ಕೆರೆ, ಕೋರಮಂಗಲ ಕೆರೆ, ಅವನ್ನು ಬ್ರೀಚ್ ಮಾಡಬೇಕು, ಅಲ್ಲಿಗೆ ಸ್ಯೂಅರೇಜ್ ವಾಟರನ್ನು ಬಿಡಬಾರದು. ಜೊತೆಗೆ ಕೆಲವು ಪಟ್ಟಭದ್ರ ಹಿತಗಳಿಂದ ತೊಂದರೆಯಾಗಿದೆ. ಎರಡು ತರಹ

(ಶ್ರೀ ಎಂ.ಎಸ್. ಕೃಷ್ಣನ್)

ಪಟ್ಟಭದ್ರಹಿತಗಳಿವೆ, ಒಂದು ಮಿಲಿಟರಿಯವರು, ಇನ್ನೊಂದು ಎಸ್ಟೇಟ್ ಓನರ್ಸ್. ಅವರು ಸ್ಯೂಅರೇಜ್ ನೀರನ್ನು ಉಪಯೋಗಮಾಡಿಕೊಂಡು ತರಕಾರಿ ಮತ್ತು ಹುಲ್ಲನ್ನು ಬೆಳೆಯುವರು. ಇದರಿಂದ ಲಾಭ ಸಂಪಾದಿಸುವರು. ಕಾನೂನು ಪ್ರಕಾರ ಅವಕಾಶವಿಲ್ಲದೆ ಇರುವಾಗ ಅಕ್ರಮವಾಗಿ ಕೊಳಚೆ ನೀರನ್ನು ಉಪಯೋಗ ಮಾಡುತ್ತಿದ್ದಾರೆ. ಕಾರ್ಪೊರೇಷನ್ನಿನವರು ಸುಮ್ಮನಿರಾಗಿದ್ದಾರೆ, ಅವರು ಅವಕಾಶ ಮಾಡಿಕೊಡುತ್ತಿದ್ದಾರೆ, ಇದರಿಂದ ಸೊಳ್ಳೆ ಜಾಸ್ತಿಯಾಗಲು ಕಾರಣವಾಗಿದೆ. ಆದುದರಿಂದ ಈ ಪಟ್ಟಭದ್ರ ಹಿತಗಳನ್ನು ರಕ್ಷಿಸುವ ನೀತಿಯೇನಿದೆ ಇದನ್ನು ತೊಡೆದುಹಾಕಬೇಕು. ಇದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಅಲ್ಲದೆ ಮಿಲಿಟರಿಯವರು ಕೋರಮಂಗಲದ ಹತ್ತಿರ ಸ್ಯೂಅರೇಜ್ ನೀರನ್ನು ತೆಗೆದುಕೊಂಡು ಹುಲ್ಲು ಬೆಳೆಸುತ್ತಿದ್ದಾರೆ. ಇದಲ್ಲದೆ ನಾಲ್ಕನೆಯದಾಗಿ ನಮ್ಮ ಮನೆಯ ಹತ್ತಿರ ಒಂದು ದೊಡ್ಡ ಡ್ರೈನ್ ಇದೆ, ಅದಕ್ಕೆ ಸ್ಯೂಅರೇಜ್ ನೀರನ್ನು ಬಿಡುತ್ತಿದ್ದಾರೆ. ಇದರಿಂದಲೂ ಸೊಳ್ಳೆಗೆ ಅವಕಾಶವಾಗಿದೆ. ನನ್ನ ಕ್ಷೇತ್ರದವರು ಇದರ ಬಗ್ಗೆ ದೂರು ಕೊಟ್ಟಿದ್ದಾರೆ. ಅಲ್ಲಿರುವ ಡ್ರೈನ್ ಮುಚ್ಚಬೇಕು, ಮಕ್ಕಳಿಗೆ ಅದಿರುವುದು ಅಪಾಯಕರ, ಅದರಲ್ಲಿ ಮಕ್ಕಳು ಬಿದ್ದು ಮುಳುಗಿಹೋಗಲು ಅವಕಾಶವಾಗಿದೆ ಎಂದು ತಿಳಿಸಿದ್ದಾರೆ. ಅಡ್ಮಿನಿಸ್ಟ್ರೇಟರ್ ಇದ್ದಾಗ ಚುನಾವಣೆಯಾದಮೇಲೆ ಹೇಳಿದರೂ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ. ಕೆಂಗೇರಿ ಹತ್ತಿರ ವಾಸನೆ ಬರುವುದು, ವೃಷಭಾವತಿಯ ಬಳಿ ವಾಸನೆ ಬರುವುದು. ಸ್ಯೂಅರೇಜ್ ನೀರನ್ನು ಅಲ್ಲಿ ಬಿಡುವುದರಿಂದ ಮೈಸೂರಿಗೆ ಹೋಗುವವರಿಗೆ ದುರ್ವಾಸನೆ ಗೊತ್ತಾಗುವುದು. ಕೇಳಿದರೆ ಯೋಜನೆ ಇದೆ, ಕ್ರಮ ತೆಗೆದುಕೊಳ್ಳುವುದಾಗಿ ಹೇಳುವರು. ಆದರೆ ಇದುವರೆಗೂ ಸರಿಯಾದ ಕ್ರಮ ತೆಗೆದುಕೊಂಡು ಸೊಳ್ಳೆಕಾಟ ನಿವಾರಣೆಮಾಡಿಲ್ಲ. ಇದರ ಬಗ್ಗೆ 1935 ರಲ್ಲಿ ಬ್ರಿಟಿಷರ ಕಾಲದಲ್ಲಿ ಮಾಡಿದ ಸ್ಕೀಂ ಇನ್ನೂ ಜಾರಿಗೆ ಬಂದಿಲ್ಲ ಎಂದರೆ, ಇದು ಹಾಸ್ಯಾಸ್ಪದ ಎಂದು ಹೇಳಬೇಕಾಗುತ್ತದೆ. ಪಟ್ಟಭದ್ರಹಿತಗಳನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದನ್ನು ಅಕ್ವೈರ್ ಮಾಡಬೇಕು ಎಂದು ಮಾನ್ಯ ಶ್ರೀರಾಮುಲು ಅವರು ಹೇಳಿರುವುದು ಸರಿಯಾದುದು. ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಘಟನಾವಳಿಗಳ ಪ್ರಕಾರ ಅಕ್ವೈರ್ ಮಾಡುವುದಕ್ಕೆ ಅವಕಾಶ ಇದೆ. ಇದಕ್ಕೆ ಪರಿಹಾರ ಕೊಡಬೇಕಾಗಿಲ್ಲ. ಮೊತ್ತ ಕೊಡಬೇಕು ಎಂದು ದೇಶದ ಅನುಕೂಲಕ್ಕೋಸ್ಕರ ಮಾಡಿದೆ. ತಾವು ಇದರ ಬಗ್ಗೆ ಒಂದು ತಿದ್ದುಪಡಿಯನ್ನು ಮಾಡಿದ್ದೀರಿ, ಅದನ್ನು ಉಪಯೋಗ ಮಾಡಿಕೊಂಡು ರಾಜಧಾನಿಯಾದ ಬೆಂಗಳೂರಿಗೆ ಅನುಕೂಲ ಮಾಡಬೇಕು. ಇದರ ಕೆಲಸವನ್ನು ತಕ್ಷಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದು, ಟ್ರಸ್ಟ್ ಬೋರ್ಡು, ವಾಟರ್‌ಸಪ್ಲೈ ಬೋರ್ಡು, ಮತ್ತು ಕಾರ್ಪೊರೇಷನ್ ಇವೆ. ವಾಟರ್‌ಸಪ್ಲೈ ಬೋರ್ಡಿನವರು ಕಾವೇರಿ ನೀರನ್ನು ಬೆಂಗಳೂರಿಗೆ ತೆಗೆದುಕೊಂಡು ಬರುವುದಕ್ಕೆ ಆಸಕ್ತಿ ತೋರಿಸುತ್ತಾರೆ, ಸೂಯರೇಜ್ ವಿಷಯದಲ್ಲಿ ಅದಕ್ಷತೆ ತೋರಿಸುತ್ತಾರೆ. ಅನೇಕ ಕಡೆ ಬೆಂಗಳೂರು ನಗರದಲ್ಲಿ ಪೈಪುಗಳನ್ನು ಹಾಕಿಲ್ಲ. ಸೂಯರೇಜ್ ಬೋರ್ಡಿನವರ ಗಮನಕ್ಕೆ ಇದನ್ನು ತಂದರೆ, ಅವರು ಆ ಕಾರ್ಯಕ್ರಮವನ್ನು ಜಾರಿಗೆ ತಂದಿಲ್ಲ ಎಂದು ಹೇಳುತ್ತಾರೆ. ಸೂಯರೇಜ್ ಸರಿಯಾಗಿ ಹೊರಗಡೆ ಬಿಡಬೇಕು, ಇಲ್ಲದಿದ್ದರೆ ಸೊಳ್ಳೆಗಳ ಬೆಳವಣಿಗೆಯನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಇದು ವಾಟರ್ ಸಪ್ಲೈ ಮತ್ತು ಸೂಯರೇಜ್ ಬೋರ್ಡಿನವರ ಜವಾಬ್ದಾರಿ. ಅದನ್ನು ಅವರು ನಿರ್ವಹಿಸುತ್ತಾ ಇಲ್ಲ. ಇದರ ಮೇಲೆ ಅವರು ಸರಿಯಾದ ನಿಗ ಇಡಬೇಕು. ಅದು ಒಬ್ಬ ಅಧಿಕಾರಿಯಿಂದ ಸಾಧ್ಯವಿಲ್ಲ. ಕಾವೇರಿ ನೀರನ್ನು ತರುವುದಕ್ಕೆ ಹೇಗೆ ದಕ್ಷತೆ ವಹಿಸಿದ್ದಾರೋ ಹಾಗೆ ಸೂಯರೇಜ್ ಅನ್ನು ಹೊರಗಡೆಗೆ ಬಿಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ದಿಟ್ಟ ಕಾರ್ಯಕ್ರಮ ತೆಗೆದುಕೊಳ್ಳಬೇಕು, ದಿಟ್ಟ ಕಾರ್ಯಕ್ರಮ ತೆಗೆದುಕೊಳ್ಳಬೇಕು ಪಟ್ಟಭದ್ರ ಶಕ್ತಿಗಳನ್ನು ತೊಡೆದು ಹಾಕಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಈಗ ತಾನೆ ಮಿತ್ರರು ಬೆಂಗಳೂರಿನಲ್ಲಿ ಸೊಳ್ಳೆ ಕಾಟದ ಬಗ್ಗೆ ಹೇಳಿದರು. ಮಾನ್ಯ ಕೃಷ್ಣನ್ ಅವರು ಹೇಳಿದ ಹಾಗೆ, ನನ್ನ ಕ್ಷೇತ್ರದಲ್ಲಿ ಕಾರ್ಪೊರೇಷನ್ನಿನವರು ಕೊಟ್ಟಿರತಕ್ಕ ಮ್ಯಾಪಿನ ಪ್ರಕಾರ 100ಕ್ಕೆ 80ರಷ್ಟು ಶಾಂತಿನಗರ ಕ್ಷೇತ್ರದಲ್ಲಿವೆ. ಇದನ್ನು ಸೊಳ್ಳೆಪುರ ಎಕ್ಸ್‌ಟೆನ್‌ಷನ್ ಎಂದರೆ ತಪ್ಪಾಗಲಾರದು. ಸೊಳ್ಳೆ ಕಾಟವನ್ನು ತಪ್ಪಿಸಲಿಕ್ಕೆ ಬೇಕಾದಷ್ಟು ಕಮಿಟಿಗಳು ಆಗಿವೆ, ಆದರೆ ಯಾವ ಕಾರ್ಯಕ್ರಮವೂ ಕಾರ್ಯರೂಪಕ್ಕೆ ಬಂದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಮಿತ್ರರು ಹೇಳಿದ ಹಾಗೆ ಸಾಂಕ್ರಾಮಿಕ ರೋಗಗಳು ಸೊಳ್ಳೆಯಿಂದ ಬರುತ್ತವೆ. ಇಡೀ

ಬೆಂಗಳೂರು ಮತ್ತು ಮೈಸೂರು ಸಂಸ್ಥಾನಕ್ಕೆ ಒಂದು ಸೊಳ್ಳೆ ಕಂಟ್ರೋಲ್ ಬೋರ್ಡ್ ಅನ್ನು ಮಾಡಬೇಕು ಎಂದು ನನ್ನ ಮಿತ್ರರು ಹೇಳಿದ್ದನ್ನು ನಾನು ಅನುಮೋದಿಸುತ್ತೇನೆ. ಸೊಳ್ಳೆಗಳು ಬೆಳೆಯುವುದಕ್ಕೆ ಕಾರಣವನ್ನು ಮಿತ್ರರು ವಿವರವಾಗಿ ತಿಳಿಸಿದ್ದಾರೆ. ಸಾಧಾರಣವಾಗಿ ಎಲ್ಲಿ ನೀರು ಜಾಸ್ತಿ ನಿಲ್ಲುತ್ತದೆಯೋ, ಎಲ್ಲಿ ಕ್ಲಿಯರ್ ಪಿಟ್ಸ್ ಇವೆಯೋ ಅಲ್ಲಿ ಸೊಳ್ಳೆಗಳ ಬೆಳವಣಿಗೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮನೆಯ ಒಳಚರಂಡಿಗಳು ಇಲ್ಲದೆ, ಡ್ರೈನೇಜ್ ಸಿಸ್ಟಮ್ ಸರಿಯಾಗಿಲ್ಲದೆ ಸೊಳ್ಳೆಗಳು ಬೆಳೆಯುತ್ತವೆ. ಸ್ಲಮ್ಸ್ ಎಲ್ಲಿ ಇವೆ, ನೀರು ಸರಿಯಾಗಿ ಹೋಗಲಿಕ್ಕೆ ಅನುಕೂಲ ಇಲ್ಲದೆ ಸೊಳ್ಳೆಗಳು ಬ್ರೀಡ್ ಆಗುತ್ತಿವೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಮೊದಲು ವಾಟರ್ ಸಪ್ಲೈ ಸೂಯರೇಜ್ ಬೋರ್ಡಿನವರು ಎಲ್ಲಿ ಸೂಯರ್ ಪೈಪುಗಳ ಕನೆಕ್ಷನ್ ಕೊಟ್ಟಿಲ್ಲವೋ ಅಂಥ ಕಡೆ ಕಂಪಲ್ಸರಿಯಾಗಿ ಸೂಯರೇಜ್ ಬೋರ್ಡಿನವರು ಪೈಪ್ಸ್ ಹಾಕಿ ಸೂಯರ್‌ಲೈನ್‌ಗೆ ಕನೆಕ್ಷನ್ ಕೊಡಬೇಕು. ಅಂಡರ್‌ಗ್ರೌಂಡ್ ಡ್ರೈನೇಜ್ ಸ್ಕೀಂ ಅನ್ನು ಮಾಡಬೇಕೆಂದು ನೋಟೀಸ್ ಮೂಲಕ ಒತ್ತಾಯಪಡಿಸಬೇಕೆಂದು ಹೇಳುತ್ತೇನೆ. ಚಳ್ಳಘಟ್ಟ, ವೃಷಭಾವತಿ ಕೆರೆಗಳು ಡಿ ವೀಡಿಂಗ್ ಆಗಬೇಕು. ಆ ಕೆರೆಗಳಲ್ಲಿ ಹಸಿರು ಬೆಳೆದುಕೊಂಡಿರುತ್ತದೆ; ಸುತ್ತ ಲಾವ ಬೆಳೆದುಕೊಂಡಿರುತ್ತದೆ. ಆ ಕೆರೆಗಳ ಮೇಲೆ ಔಷಧಿಯನ್ನು ಸ್ಪ್ರಿಂಕಲ್ ಮಾಡಿದರೆ ಸೊಳ್ಳೆಗಳು ಸರಿಯಾಗಿ ಸಾಯುವುದಿಲ್ಲ. ಡಿ ವೀಡಿಂಗ್ ಮಾಡುವುದನ್ನು ಕಾರ್ಪೊರೇಷನ್ ಅವರಾಗಲೀ, ಅಥವಾ ಯಾರಾದರೂ ಪ್ರೈವೇಟ್ ಏಜನ್ಸಿಯವರಾಗಲೀ ಮಾಡಬೇಕು. ಕೆಂಪಾಂಬುಧಿ ಕೆರೆ, ಕೋರಮಂಗಲ ಕೆರೆ, ವೃಷಭಾವತಿ ವ್ಯಾಲಿಗಳಲ್ಲಿ ಹುಲ್ಲು ಬೆಳೆದುಕೊಂಡಿದೆ. ಡೀ ವೀಡಿಂಗ್‌ಗೆ ಪ್ರೈವೇಟ್ ಏಜನ್ಸಿಯನ್ನು ನೇಮಕ ಮಾಡಿ ಅಚ್ಚುಕಟ್ಟಾಗಿ ತೆಗೆಯಬೇಕು.

ಇನ್ನೊಂದು ಸಲಹೆ ಏನೆಂದರೆ, ಪಟ್ಟಣಗಳಲ್ಲಿ ಲೇಕ್ಸ್ ಇರುತ್ತವೆ, ಇವು ಇರುವುದು ಚೆಂದ, ಇವುಗಳನ್ನು ಸರಿಯಾಗಿ ಮೇಂಟೇನ್ ಮಾಡುವುದು ಕಾರ್ಪೊರೇಷನ್‌ಗೆ ಸಂಬಂಧ ಪಟ್ಟಿದ್ದು. ಕೆರೆ ಕಟ್ಟೆಗಳನ್ನು ಒಡೆದು ಹಾಕುವುದು ಸರಿಯಲ್ಲ. ನ್ಯಾಷನಲ್ ಎಮರ್ಜನ್ಸಿ ಬಂದಾಗ ನಮಗೆ ನೀರು ಸಿಕ್ಕದ ಹಾಗಾಗುತ್ತದೆ. ಲೇಕ್ಸ್ ಇದ್ದರೆ ನಗರದ ಸೌಂದರ್ಯಕ್ಕೆ ಹೆಚ್ಚಿನ ಮೆರಗನ್ನು ನೀಡುತ್ತದೆ ಮತ್ತು ನೀರು ಸಿಕ್ಕುತ್ತದೆ. ಇಂಥ ಲೇಕ್‌ಗಳನ್ನು ಡೀವೀಡಿಂಗ್ ಮಾಡಿ ಕಸ ಕಡ್ಡಿಗಳನ್ನು ತೆಗೆದು ಸರಿಯಾಗಿ ಕಾರ್ಪೊರೇಷನ್ ನವರು ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಜೊತೆಗೆ ಸರ್ಕಾರದವರು ಸೊಳ್ಳೆಗಳ ನಿರ್ಮೂಲಕ್ಕೆ ಕಾರ್ಪೊರೇಷನ್‌ನವರಿಗೆ ಲೋನ್ ಕೊಡುತ್ತಿದ್ದಾರೆ. ಇದಕ್ಕೆ ಹೆಚ್ಚು ಹಣ ಬೇಕು. ಸರ್ಕಾರದವರು ಗ್ರ್ಯಾಂಟ್ ಸ್ವಲ್ಪ ಕೊಟ್ಟು, ಸೆಂಟ್ರಲ್ ಗವರ್ನಮೆಂಟಿನಿಂದ ನ್ಯಾಷನಲ್ ಮಲೇರಿಯಾ ಇರ್‍ಯಾಡಿಕೇಷನ್ ಸ್ಕೀಂ ಅವರನ್ನು ಅಪ್ರೋಚ್ ಮಾಡಿ ಅವರಿಂದ ಹಣವನ್ನು ತೆಗೆದುಕೊಂಡು ಸೊಳ್ಳೆ ನಿರ್ಮೂಲನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಪುದುಕೋಟೆಯಲ್ಲಿ ಮಿಲ್ಲರ್ ಅವರು ಒಂದು ರೀಸರ್ಚ ಮಾಡಿದ್ದಾರೆ, ಈ ಸೊಳ್ಳೆಗಳು ಹೇಗೆ ಬೆಳೆಯುತ್ತವೆ, ಹೇಗೆ ನಿರ್ಮೂಲನ ಮಾಡಬೇಕು ಎನ್ನುವ ಬಗ್ಗೆ. ಬೆಂಗಳೂರು ಸುತ್ತ ಎರಡು ಮೈಲಿ ದೂರದಲ್ಲಿ ವ್ಯವಸಾಯದ ಕ್ರಮವನ್ನು ತೆಗೆದುಕೊಳ್ಳಬಾರದು. ಸರ್ಕಾರದವರು ಒಂದು ಆರ್ಡಿನೆನ್ಸ್ ಹೊರಡಿಸಿದರೂ ಪರವಾಗಿಲ್ಲ, ಬೆಂಗಳೂರಿನ ಸುತ್ತ ಐದು ಮೈಲಿ ರೇಡಿಯಸ್‌ನಲ್ಲಿ ಯಾರು ಕಲ್ಟಿವೇಟ್ ಮಾಡಬಾರದು ಎಂದು ಹೇಳಬೇಕು. ಇದರಿಂದ 18ಲಕ್ಷ ಪ್ರಜೆಗಳಿಗೆ ಅನುಕೂಲವಾಗುತ್ತದೆ. ಈ ಸೊಳ್ಳೆಗಳು ಬಡ ಜನರ ರಕ್ತವನ್ನು ಹೀರುತ್ತವೆ, ಕೋರಮಂಗಲದಲ್ಲಿ ಸುಮಾರು 80ಪರ್ಸೆಂಟ್ ಸೊಳ್ಳೆಗಳು ಇವೆ. ಲೋ ಲೆವೆಲ್ ಏರಿಯಾದಲ್ಲಿ, ಸ್ಲಂ ಏರಿಯಾದಲ್ಲಿ ಬೆಂಗಳೂರಿನ ಮುಕ್ಕಾಲು ಭಾಗ ಆ ಕಡೆಯಿಂದ ಜನರು ಬರುತ್ತಾರೆ. ಆ ಏರಿಯಾದ ಬಗ್ಗೆ ಮಲತಾಯಿ ಧೋರಣೆ ತಾಳಬಾರದು ಎಂದು ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸುಂದರವಾದ ರಾಜಕಾರಣಿಗಳ ರಕ್ತವನ್ನು ಹೀರುವ ಸೊಳ್ಳೆಗಳು ನಿಮ್ಮಲ್ಲಿವೆ.

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು.—ಸೊಳ್ಳೆಗಳು ಸುಂದರವಾದವರನ್ನೂ ಕಚ್ಚುತ್ತವೆ, ಎಲ್ಲರನ್ನೂ ಕಚ್ಚುತ್ತವೆ. ಕೋರಮಂಗಲ ವ್ಯಾಲಿಯ ದೊಡ್ಡ ಚಾನಲ್ ಅನ್ನು ಹಂತಹಂತವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಮೊನ್ನೆತಾನೆ ಟ್ರಾನ್ಸ್‌ಪೋರ್ಟ್ ಕಂಪನಿಯವರೆಗೆ ಆಯಿತು. ಮೈಕೋ ಫ್ಯಾಕ್ಟರಿಯವರೆಗೆ ಬಂದಿದೆ. ಜನಗಳ ಕ್ಷೇಮದಿಂದ, ಎಲ್ಲಿಯೂ ನೀರನ್ನು ನಿಲ್ಲುವುದಕ್ಕೆ ಆಸ್ಪದ ಕೊಡಬಾರದು. ಅರ್ಧ ಎಕರೆ ಜಾಗದಲ್ಲಿ ನೀರು ನಿಂತಿದ್ದರೆ ಬೇಕಾದಷ್ಟು ಸೊಳ್ಳೆಗಳು ಬೆಳೆಯುವುದಕ್ಕೆ ಕಾರಣವಾಗುತ್ತದೆ. ಈ ಚಾನಲ್‌ಗೆ ಎಷ್ಟೇ ಖರ್ಚಾದರೂ ಪರವಾಗಿಲ್ಲ ಇದನ್ನು

(ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು)

ಮಾಡಬೇಕು. ಅಲ್ಲಿ ಮೂರನೆಯ ಒಂದು ಭಾಗ ಬಡವರು ಇದ್ದಾರೆ, ಅವರಿಗೆ ಕಾರ್ಪೋರೇಷನ್ನವರು ಇಲಿಗಳನ್ನು ಹಿಡಿಯುವುದಕ್ಕೆ ಹಿಂದೆ ಬೋನ್ ಅನ್ನು ಹೇಗೆ ಸಪ್ಲೈ ಮಾಡುತ್ತಿದ್ದರೋ ಅದೇ ರೀತಿಯಲ್ಲಿ ಇವರಿಗೆ ಸೊಳ್ಳೆ ಪರದೆಯನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದರೆ ತಪ್ಪಾಗಲಾರದು. ಏಕೆಂದರೆ ಸೊಳ್ಳೆಗಳು ಬಡ ಜನರ ರಕ್ತವನ್ನು ಹೀರುತ್ತವೆ, ಅವರ ಹತ್ತಿರ ಸೊಳ್ಳೆಪರದೆಯನ್ನು ಕೊಳ್ಳುವುದಕ್ಕೆ ಶಕ್ತಿಯಿಲ್ಲ. ಪುದುಕೋಟೆಯಲ್ಲಿ ಮಸ್ಕಿಟೋ ಇರ್‍ಯಾಡಿಕೇಷನ್ ಸ್ಕೀಂ ಯಾವರೀತಿ ಮಾಡಿದ್ದಾರೆಯೋ ಆರೀತಿ ತಾವು ಇಲ್ಲಿ ಎಲ್ಲಿ ಹುಲ್ಲು ಬೆಳೆಯುತ್ತದೆ, ನೀರು ಜಾಸ್ತಿ ನಿಲ್ಲುತ್ತದೆ ಅಂಥ ಕಡೆ ನೀರು ನಿಲ್ಲದಂತೆ ಮಾಡಿ, ಸೊಳ್ಳೆಗಳ ಬೆಳವಣಿಗೆಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು, ಪುದುಕೋಟೆಯ ಮಿಲ್ಲರ್ ರಿಪೋರ್ಟ್ ನೋಡಿ, ಅದರಲ್ಲಿರುವ ಕೆಲವು ಕಾರ್ಯಕ್ರಮಗಳನ್ನು ಇಲ್ಲಿ ಅಳವಡಿಸಬೇಕು ಎಂದು ಹೇಳುತ್ತೇನೆ.

12-00 NOON

ಕಾರ್ಪೋರೇಷನ್ ಮಾತೆತ್ತಿದರೆ ಕೋರ್ಟಿಗೆ ಹೋಗುತ್ತಾರೆ. ಕಾರ್ಪೋರೇಷನ್ ಕಮೀಷನರ್‌ಗೆ ಪವರ್ ಕಡಿಮೆ ಇದೆ. ಪಬ್ಲಿಕ್ ಹೆಲ್ತ್ ಆಕ್ಟ್ ಪ್ರಕಾರ ಅವರ ಮೇಲೆ ಚಾರ್ಜ್ ಮಾಡಬಹುದು ಕಾರ್ಪೋರೇಷನ್ ಕಮೀಷನರ್ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿಕ್ಕೆ ಹೆಚ್ಚಿನ ಪವರ್ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಮಾನ್ಯ ಮಿತ್ರರು ಅನೇಕರು ಹೇಳಿದಹಾಗೆ ಕೋಆರ್ಡಿನೇಷನ್ ಇಲ್ಲ. ನಗರದಲ್ಲಿ ಡ್ರೈನೇಜ್ ಎಲ್ಲಿ ಇದೆ ಅದನ್ನು ಸರಿಯಾಗಿ ನೋಡಿಕೊಳ್ಳುವವರು ಇಲ್ಲ. ವಾಟರ್‌ಬೋರ್ಡಿನವರು ಕಾರ್ಪೋರೇಷನ್‌ನವರಿಗೆ ಸೇರಿದೆ ಎಂದು ಹೇಳುತ್ತಾರೆ, ಕಾರ್ಪೋರೇಷನ್ ನವರು ಸಿಐಟಿಬಿಗೆ ಸೇರಿದೆ ಎಂದು ಹೇಳುತ್ತಾರೆ ಒಬ್ಬರಿಗೊಬ್ಬರಿಗೆ ಕೋಆರ್ಡಿನೇಷನ್ ಇಲ್ಲ. ಈ ದೃಷ್ಟಿಯಿಂದ ಒಂದು ಕೋಆರ್ಡಿನೇಷನ್ ಕಮಿಟಿ ಮಾಡಿ ಎಂದು ಹೇಳಿದ್ದಾರೆ. ಆ ತರಹ ಒಂದು ಕೋಆರ್ಡಿನೇಷನ್ ಕಮಿಟಿ ಇರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಜೋನಲ್ ಮ್ಯಾಪ್ ತಯಾರು ಮಾಡಬಹುದು. ಕಾರ್ಪೋರೇಷನ್ ಆಡಳಿತ ಎಲ್ಲೆಲ್ಲಿ ಇದೆ ಅಲ್ಲಿ ಜೋನಲ್ ಮ್ಯಾಪ್ ತಯಾರು ಮಾಡಿ ಪ್ರೈವೇಟ್ ಬೌಂಡ್ಸ್‌ನಲ್ಲಿ ನೀರು ನಿಲ್ಲುವುದಕ್ಕೆ ಅವಕಾಶ ಮಾಡಿದವರಿಗೆ ಶಿಕ್ಷೆ ವಿಧಿಸತಕ್ಕ ಕಾನೂನನ್ನು ತರಬೇಕು. ಜೊತೆಗೆ ಹಾಳು ಬಾವಿಗಳು ಕೆಲವುಕಡೆ ಇವೆ. ಬೆಂಗಳೂರಿನಲ್ಲಿ ಎಷ್ಟು ಹಾಳು ಬಾವಿಗಳಿವೆ ಸರ್ವೆ ಮಾಡಿದ್ದಾರೆ ಅದನ್ನು ನೋಡಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ಹಾಳುಬಾವಿಗಳಲ್ಲಿ ಮೀನುಗಳನ್ನು ಬಿಟ್ಟು ನೋಡಿಕೊಳ್ಳಬೇಕು. ಬೆಂಗಳೂರಿನ ಸ್ವೀವರೇಜ್ ವಾಟರ್ ನ್ಯಾಷನಲ್ ಡೈರಿಯ ಹತ್ತಿರ ಹರಿಯುತ್ತದೆ ಆ ನೀರಿನ ಆಶ್ರಯದಿಂದ ಅಲ್ಲಿ ಹಸಿರು ಹುಲ್ಲು ಬೆಳೆಯುತ್ತದೆ, ಅದು ಬೆಳೆಯುವುದರಿಂದ ಅಲ್ಲಿ ಸೊಳ್ಳೆಗಳು ವಿಪರೀತವಾಗಿ ಉತ್ಪತ್ತಿಯಾಗುತ್ತವೆ. ಅದರಿಂದ ಅಲ್ಲಿ ಬಂದಂಥ ನೀರನ್ನು ಹೊರಗಡೆ ಹಾಕಿದರೆ ಕಂಟ್ರೋಲ್ ಆಗುತ್ತದೆ. ಬಡವರ ರಕ್ತ ಹೀರುವುದು ಕಡಿಮೆಯಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸೊಳ್ಳೆ ಹೆಚ್ಚಾಗಲಿಕ್ಕೆ 10 ವರ್ಷಗಳ ಹಿಂದಿನ ಆಡಳಿತ ಕಾರಣ ತಾನೇ ? ಅದು ಅವರು ಮಾಡಿದ ಪಾಪದ ಫಲವೇ !

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಹಿಂದಿನ ಆಡಳಿತಕ್ಕೂ ಸೊಳ್ಳೆ ಅಭಿವೃದ್ಧಿಗೂ ಸಂಬಧವಿಲ್ಲ. ಹಿಂದೆ 40 ಸ್ಲಮ್ಸ್ ಇದದ್ದು ಈಗ 143 ಸ್ಲಮ್ಸ್‌ಗಳು ಆಗಿವೆ. ಡ್ರೈನೇಜ್ ಸಿಸ್ಟಮ್ಸ್ ಸರಿಯಿಲ್ಲ. ಇದನ್ನು ನಿವಾರಣೆ ಮಾಡಬೇಕಾದರೆ ಸರ್ಕಾರದವರು ಒಂದು ಕಾರ್ಯಕ್ರಮವನ್ನು ಏನು ಹಾಕಿದ್ದರೆ ಅದನ್ನು ಕಾರ್ಯರೂಪಕ್ಕೆ ಜಾಗ್ರತೆ ತಂದರೆ ಅನೂಕೂಲವಾಗುತ್ತದೆ ಕಾರ್ಪೋರೇಷನ್‌ನಲ್ಲಿ ಸ್ಟಾಫ್ ಏನು ಇದೆ ಅದು ಸಾಲದು. ಸೊಳ್ಳೆಗೋಸ್ಕರ ಡ್ರೈನೇಜ್‌ಗೆ ಎಣ್ಣೆ ಚೆಲ್ಲಿಸುತ್ತಾರೆ ಆ ಎಣ್ಣೆ ಸರಿಯಾಗಿ ಹಂಚುತ್ತಿದ್ದಾರೆಂದು ಗೊತ್ತಾಗುವುದಿಲ್ಲ. ಅದು ಕೂಡ ದುರುಪಯೋಗ ಮಾಡುತ್ತಾರೆಂದು ಗಮನಕ್ಕೆ ಬಂದಿದೆ. ಇದಕ್ಕೆ ಒಂದು ಮಸ್ಕಿಟೋ ಕಂಟ್ರೋಲ್ ಬೋರ್ಡ್ ರಚನೆ ಆದರೆ ಇದನ್ನು ವಾರ್ ಫುಟಿಂಗ್‌ನಲ್ಲಿ ಫೈಟ್ ಮಾಡಬೇಕು. ಹೊರದೇಶದಲ್ಲಿ ಯಾವರೀತಿ ಈ ಸೊಳ್ಳೆಗಳ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಆ ರೀತಿ ನಮ್ಮ ಸರ್ಕಾರದವರು ಸೊಳ್ಳೆಗಳ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನಮ್ಮ ಬೆಂಗಳೂರು ಗಾರ್ಡನ್ ಸಿಟಿ ಅಫ್ ಇಂಡಿಯಾ ಎಂದು ಹೆಸರು ಬಂದಿದೆ. ಆ ಹೆಸರನ್ನು ಉಳಿಸಿಕೊಳ್ಳಬೇಕೆಂದು ಹೇಳುತ್ತೇನೆ. ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ,...

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸೊಳ್ಳೆ ಕಾಟದ ಮಂತ್ರಿ ಯಾರು ?

ಅಧ್ಯಕ್ಷರು.—ಸದ್ಯಕ್ಕೆ ಶ್ರೀಮಾನ್ ನಂಜೇಗೌಡರು ವಹಿಸಿಕೊಂಡಿದ್ದಾರೆ.

† ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಶಾಮಣ್ಣನವರು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಬಹುಶಃ ಇವೊತ್ತಿನ ದಿವಸ ಏನು ಪರಿಸ್ಥಿತಿ ಇದೆ ಅದು ಬಹಳ ವರ್ಷಗಳಿಂದ ಬೆಂಗಳೂರು ನಗರಕ್ಕೆ ಸೊಳ್ಳೆ ಕಾಟ ತಪ್ಪಿದ್ದಲ್ಲ. ಸೊಳ್ಳೆ ಕಾಟದಿಂದ ಬೆಂಗಳೂರು ನಗರದ ಜನತೆಯನ್ನು ತಪ್ಪಿಸುವಲ್ಲಿ ಎಲ್ಲಾ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿವೆ. ಹಿಂದೆ ಇದ್ದಂಥ ಕಾಂಗ್ರೆಸ್ ಓ ಈಗ ಇರತಕ್ಕ ಆಡಳಿತ ಕಾಂಗ್ರೆಸ್ ಮುಂದೆ ಬರತಕ್ಕ ಯಾವ ಪಾರ್ಟಿ ಸೊಳ್ಳೆ ಕಾಟವನ್ನು ತಪ್ಪಿಸುವುದರಲ್ಲಿ ವಿಫಲವಾಗಿದ್ದಾರೆ. ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲಿ, ಶ್ರೀ ನಿಜಲಿಂಗಪ್ಪನವರ ಕಾಲದಲ್ಲೂ ನೋಡಿದ್ದೇವೆ. ಶ್ರೀ ಕೆ. ಸಿ. ರೆಡ್ಡಿಯವರ ಕಾಲದಲ್ಲೂ ಇತ್ತು. ಎಲ್ಲಾ ಕಾಲದಲೂ ಕಾರ್ಪೊರೇಷನ್ ಸಭೆಯಲ್ಲಿ ಈ ಸೊಳ್ಳೆ ನಿರ್ಮೂಲ ಮಾಡುವುದಕ್ಕೋಸ್ಕರ ಬೇಕಾದಷ್ಟು ಮನವಿಗಳನ್ನು ಮಾಡಿದ್ದೇವೆ. ಆದರೂ ಜನರಿಗೆ ಈ ಸೊಳ್ಳೆಗಳ ಕಾಟದಿಂದ ತೊಂದರೆ ಇದ್ದೇ ಇದೆ. ಸರ್ಕಾರದವರು ಸೊಳ್ಳೆಯನ್ನು ತಪ್ಪಿಸುವುದಕ್ಕೆ ಯಾವುದಾದರೂ ಹೊಸ ಯೋಜನೆ ಕಂಡುಹಿಡಿಯಬೇಕು. ಕೆ. ಸಿ. ರೆಡ್ಡಿಯವರ ಕಾಲದಿಂದ ಹಿಡಿದು ಇವೊತ್ತಿನವರೆಗೂ ಒಂದೇ ಸಮನೆ ಅಲ್ಲಿಂದ ಇಲ್ಲಿಯವರೆಗೂ ಮೆಮೊರಾಂಡಂ ಸಲ್ಲಿಸುತ್ತಿದ್ದೇವೆ ಆದರೆ ಸೊಳ್ಳೆ ಕಾಟ ತಪ್ಪಿಸುವುದಕ್ಕೆ ವರ್ಷಕ್ಕೆ 18 ಲಕ್ಷ ರೂಪಾಯಿ ಖರ್ಚುಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಕಾರ್ಪೊರೇಷನ್‌ನಲ್ಲಿ ಬಹಳ ವರ್ಷಗಳಿಂದ ಇದ್ದೀರಿ ಏನು ಮಾಡಿದಿರಿ ?

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಸರ್ಕಾರದ ಕೈಕೆಳಗೆ ನಿಂತಿದ್ದೇವೆ. 18 ಲಕ್ಷ ರೂಪಾಯಿಗಳನ್ನು ನೀವು ಏನು ಖರ್ಚುಮಾಡುತ್ತಿದ್ದೀರಿ, ನನಗನಿಸುತ್ತದೆ ನೀವು ಕೊಡುತ್ತಾ ಇರತಕ್ಕ ಔಷಧಿ ನೋಡಿದರೆ ನಾನು ತಿಳಿದುಕೊಂಡಿದ್ದೇನೆ ಸೊಳ್ಳೆಗಳಿಗೆ ಅದು ಟಾನಿಕ್ ಆಗಿದೆ. ಅದನ್ನು ತಜ್ಞರೇ ನೋಡಬೇಕು. ನಾನು ನೋಡಿದ ಹಾಗೆ 5 ವರ್ಷಗಳಲ್ಲಿ ಸಣ್ಣ ಸೊಳ್ಳೆ ನೋಡುತ್ತಾ ಇದ್ದೆವು. ನಿಮ್ಮ ಆಡಳಿತ ಬಂದು. ತೀರಾ ದೊಡ್ಡ ಸೊಳ್ಳೆ ನೋಡುತ್ತಾ ಇದ್ದೇವೆ. 18 ಲಕ್ಷದ ಪೈಕಿ ರಾಜಕೀಯ ಸೊಳ್ಳೆಗಳಿಗೆ ಎಷ್ಟು ಹೋಗುತ್ತದೋ ಗೊತ್ತಿಲ್ಲ. 18 ಲಕ್ಷ ಖರ್ಚು ಮಾಡ ತಕ್ಕದ್ದು ಸೊಳ್ಳೆ ನಿರ್ಮೂಲನಕ್ಕೆ ಔಷದೋಪಚಾರ ಮಾಡುತ್ತಿದ್ದೀರಿ ಔಷಧಿ ಹೋಗಿ ಅವಕ್ಕೆ ಆಹಾರವಾಗಿದೆ. ಅವು ದೊಡ್ಡದಾಗಿ ಬೃಹದಾಕಾರವಾಗಿ ಬೆಳೆಯುತ್ತಾ ಇವೆ. ಮಂತ್ರಿಗಳಿಗೆ ಅದು ತಟ್ಟಿಲ್ಲ. ನಿಮ್ಮ ಮನೆಯಲ್ಲಿ ಹೆಚ್ಚು ಹೆಚ್ಚು ಸೊಳ್ಳೆ ಪರದೆಗಳು ಇವೆ. ಸೊಳ್ಳೆ ಪರದೆ ಇರುವುದರಿಂದ ನಿಮ್ಮ ಕಡೆ ಸೊಳ್ಳೆಗಳು ಬಂದಿಲ್ಲ. ಅದರಿಂದ ಸೊಳ್ಳೆಗಳ ಅನುಭವ ಇವರಿಗೆ ಆಗಲಿಲ್ಲ. ಆದುದರಿಂದ ಬೆಂಗಳೂರು ನಗರದ ಬಡವರಿಗೆ ಆಗತಕ್ಕ ತೊಂದರೆ ಇವರಿಗೆ ಗೊತ್ತಿಲ್ಲ. ಶ್ರೀಮಂತ ವರ್ಗದವರು ದೊಡ್ಡ ದೊಡ್ಡ ಬಂಗಲೆಗಳಲ್ಲಿ ವಾಸಿಸುತ್ತಾರೆ ಅವರ ಮನೆಗಳಲ್ಲಿ ಐದೈದು ಹತ್ತತ್ತು ಸೊಳ್ಳೆ ಪರದೆಗಳು ಇರುತ್ತದೆ. ಮಂತ್ರಿ ವರ್ಗಕ್ಕೆ ಮತ್ತು ಹೆಚ್ಚು ಜನ ಶಾಸಕರಿಗೆ ಈ ಅನುಕೂಲಗಳು ಇವೆ. ಆದರೆ ನನಗಂತೂ ಇಲ್ಲ. ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಬಡವರಿಗೆ ಆಗಿ ನಾನು ಹೇಳುವುದು ಏನು 18 ಲಕ್ಷ ರೂಪಾಯಿ ಸೊಳ್ಳೆಗಳಿಗಾಗಿ ಖರ್ಚು ಮಾಡುತ್ತಿದ್ದೀರಿ ಸ್ವಲ್ಪ ಜಾಸ್ತಿ ಆದರೂ ಚಿಂತೆಯಿಲ್ಲ ಬಡವರಿಗೆ ಉಚಿತವಾಗಿ ಮೂರು ಮೂರು ಸೊಳ್ಳೆ ಪರದೆಗಳನ್ನು ಕೊಡಬೇಕು. ಸರ್ಕಾರ ಎಲ್ಲಿಯವರೆಗೆ ಸೊಳ್ಳೆ ನಿರ್ಮೂಲ ಮಾಡುವುದಿಲ್ಲ ಅಲ್ಲಿಯವರೆಗೆ ಮೂರು ಮೂರು ಪರದೆಗಳನ್ನು ಬಡವರಿಗೆ ಹಂಚಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮೂರು ಜನಗಳು ಇದ್ದರೆ !

ಶ್ರೀ ವಾಟಾಳ್ ನಾಗರಾಜ್.—ಸಣ್ಣ ಮಕ್ಕಳು ಸೇರಿ ಒಂದರಲ್ಲೇ ಮಲಗಿಕೊಳ್ಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಸೊಳ್ಳೆ ಪರದೆ ಕಟ್ಟಿಕೊಳ್ಳುವುದಕ್ಕೆ ಮಂಚ ಬೇಡವೆ !

ಶ್ರೀ ವಾಟಾಳ್ ನಾಗರಾಜ್.—ಮಂಚ ಕೇಳಿದರೆ ಅತಿರೇಕವಾಗುತ್ತದೆ. ಬೇಡ. ಸೊಳ್ಳೆ ಪರದೆ ಕಟ್ಟಿಕೊಂಡು ನೆಲದಲ್ಲಿ ಮಲಗುತ್ತಾರೆ. 5 ವರ್ಷದ ದುಡ್ಡನ್ನು ಉಳಿತಾಯವಾಗಿ ಕೊಡಬೇಕು. ಆರೋಗ್ಯ ಸಚಿವರಿಗೆ ಒಂದು ಸಲಹೆ ಮಾಡುತ್ತೇನೆ. ಮನುಷ್ಯರಿಗೆ ಕುಟುಂಬ ಯೋಜನೆ ಏನು

(ಶ್ರೀ ವಾಟಾಳ್ ನಾಗರಾಜ್)

ತಂದಿದ್ದೀರಿ ಅದೇ ರೀತಿ ತಮಗೆ ಇದು ಒಪ್ಪುವುದಾದರೆ ತಜ್ಞರಿಂದ ಒಂದು ಯೋಜನೆ ಮಾಡಿಸಿ ಸೊಳ್ಳೆ ನಿರೋಧವನ್ನು ಮಾಡಿದರೆ ಒಳ್ಳೆಯದು. ಲಕ್ಷಾಂತರ ಸೊಳ್ಳೆಗಳು ಒಂದು ದಿನಕ್ಕೆ ಹುಟ್ಟುತ್ತಿವೆ. ಅದಕ್ಕೂ ಕುಟುಂಬ ಯೋಜನೆ ಮಾಡತಕ್ಕ ವ್ಯವಸ್ಥೆ ತಮ್ಮ ಗಮನಕ್ಕೆ ಬರುವುದಾದರೆ ಒಳ್ಳೆಯದು. ಇರುವೆಗಿಂತ ಗಾತ್ರವಾಗಿ ಸೊಳ್ಳೆ ಕಾಣುತ್ತವೆ.

ಒಬ್ಬ ಸದಸ್ಯರು.—ಅದಕ್ಕೆ ನಿಮ್ಮನ್ನೇ ಛೇರ್‌ಮನ್ ಮಾಡಿದರೆ ಒಳ್ಳೆಯದಲ್ಲವೇ?

ಶ್ರೀ ವಾಟಾಳ್ ನಾಗರಾಜ್,—ನನ್ನನ್ನು ಮಾಡಿದರೆ ನಾನು ತಪ್ಪಿಸಿಕೊಂಡು ಹೋಗುವುದಿಲ್ಲ. ಏನು ಕೊಟ್ಟರೂ ಕರಾರುವಾಕ್ಕಾಗಿ ಮಾಡುತ್ತೇನೆ. ಚೇರ್‌ಮನ್ ಮಾಡಿದರೆ ವಾದ ಏನೂ ಇಲ್ಲ. ಕೈಲಾದಷ್ಟು ಕೆಲಸ ಮಾಡುತ್ತೇನೆ. ನಾನು ನೋಡುತ್ತಾ ಇದ್ದೇನೆ ಸಣ್ಣ ಸೊಳ್ಳೆಯಿಂದ ಜನರಿಗೆ ತೊಂದರೆಯಾಗುವುದಿಲ್ಲ. ಹೊಸ ಸರ್ಕಾರ ಬರುತ್ತಾ ಹೊಸ ಸೊಳ್ಳೆಗಳು ಬರುತ್ತಾ ಇವೆ. ಸೊಳ್ಳೆ ಸಂಗೀತ ಕೇಳಿರಬಹುದು. ತಮಗೆ ಅನುಭವವಿಲ್ಲ. ಕರ್ನಾಟಕ ಸಂಗೀತ, ಲಘು ಸಂಗೀತ, ಹಿಂದೂಸ್ಥಾನಿ ಸಂಗೀತ, ಜಾನಪದ ಗೀತೆ, ಪಿಟೀಲುವಾದನ ಎಲ್ಲಾ ಇವುಗಳಿಂದ ಶುರುವಾಗುತ್ತದೆ. 10 ಗಂಟೆ ಆದ ಮೇಲೆ ಕಿವಿ ಹತ್ತಿರ ಪದ ಹೇಳುತ್ತವೆ. ಸಾಮಾನ್ಯ ಜನರಿಗೆ ಸಂಗೀತ ಕೇಳತಕ್ಕ ಈ ಹೊಸ ಒಂದು ಸೌಲಭ್ಯ ಕಲ್ಪಿಸಿದ್ದೀರಿ. ಸೊಳ್ಳೆ ಕಾಟ ಸಂಪೂರ್ಣವಾಗಿ ನಿವಾರಿಸಬೇಕಾದರೆ ಚರಂಡಿ ವ್ಯವಸ್ಥೆ ಚೆನ್ನಾಗಿ ಆಗಬೇಕು. ಇಂದು ಸುಮಾರು 2 ಕೋಟಿ ರೂಪಾಯಿಗಳನ್ನು ಒಳ ಚರಂಡಿ ವ್ಯವಸ್ಥೆಗೆ ಖರ್ಚುಮಾಡುತ್ತಿದ್ದರೂ ಸರಿಯಾದ ಕೆಲಸವಾಗಿಲ್ಲ. ಇದರಿಂದ ಅಲ್ಲಲ್ಲಿ ಕೊಳಚೆ ನೀರು ನಿಂತು ಸೊಳ್ಳೆ ಉತ್ಪತ್ತಿಯಾಗಲು ಅವಕಾಶ ಜಾಸ್ತಿಯಾಗುತ್ತಿದೆ. ಅಲ್ಲಲ್ಲಿ ಅನೇಕ ಹುಲ್ಲುಗಾವಲುಗಳಿವೆ. ಕಂಟ್ರಾಕ್ಟರುಗಳನ್ನು ರಕ್ಷಣೆ ಮಾಡುತ್ತಿರುವುದರಿಂದ, ರಾಜಕೀಯ ಪ್ರಭಾವಕ್ಕೊಳಗಾಗಿರುವುದರಿಂದ ಸೊಳ್ಳೆ ಕಾಟ ಕಡಮೆ ಮಾಡಲು ಅವಕಾಶವಾಗಿಲ್ಲ. ಹುಲ್ಲುಗಾವಲುಗಳಿಗೆ ಅವಕಾಶ ಕೊಡದಂತೆ ಆಜ್ಞೆಯಾಗಿದ್ದರೂ ಕೂಡ ಹಿಂದಿದ್ದ ಮೇಯರುಗಳು ರಾಜಕೀಯ ದೃಷ್ಟಿಯಿಂದ ಆಜ್ಞೆಗೆ ಗಮನಕೊಡದೆ ಸೊಳ್ಳೆ ಜಾಸ್ತಿಯಾಗಿದೆ. ಸೊಳ್ಳೆ ಹೆಚ್ಚಿ ಅವು ಸಂಗೀತ ಹಾಡುತ್ತಿವೆ. ಆದುದರಿಂದ ಪರಿಣಾಮಕಾರಿಯಾಗಿ ವ್ಯವಸ್ಥಿತವಾಗಿ ಯೋಜನೆ ಮಾಡಿ, ಒಳ ಚರಂಡಿ ವ್ಯವಸ್ಥೆ ಸುವ್ಯವಸ್ಥಿತವಾಗಿ ಮಾಡಿ ಪೂರೈಸಿ, ಹುಲ್ಲು ಬೆಳೆಯುವುದನ್ನು ನಿಲ್ಲಿಸಬೇಕು. ಕೋರಮಂಗಲದ ಬಳಿ ಹುಲ್ಲನ್ನು ಹೆಚ್ಚಾಗಿ ಬೆಳೆಯುವರು. ಪ್ರಭಾವಯುತರಾದ ಕಂಟ್ರಾಕ್ಟರುಗಳು ಹುಲ್ಲು ಬೆಳೆಸುತ್ತಲೇ ಇದ್ದಾರೆ. ಹೊರಗಿನವರು ಬೆಂಗಳೂರು ಸುಂದರ ನಗರವೆಂದು ಇಲ್ಲಿಗೆ ಬಂದರೆ ವಿಮಾನ ನಿಲ್ದಾಣದಲ್ಲೇ ಸೊಳ್ಳೆಗಳು ಸ್ವಾಗತಿಸುವುವು, ಹೋಟೆಲು, ಗೆಸ್ಟ್ ಹೌಸು ಮುಂತಾದ ಎಲ್ಲಾ ಕಡೆಗಳಲ್ಲೂ ಹೆಚ್ಚಿವೆ ಅನೇಕ ಸಾರಿ ಈ ಬಗ್ಗೆ ವಾದವಿವಾದ ಮಾಡಿ ಮಮೊರಾಂಡಂ ಕೊಟ್ಟರೂ ತಕ್ಕ ಕ್ರಮ ತೆಗೆದುಕೊಂಡಿಲ್ಲ. ಬರುವ ಮೇಯರುಗಳೆಲ್ಲಾ ಹೇಳಿದಾಗ ಸರಕಾರಕ್ಕೆ ತಿಳಿಸಿ ತಕ್ಕ ಕ್ರಮ ತೆಗೆದುಕೊಂಡು ಸೊಳ್ಳೆಕಾಟ ತಪ್ಪಿಸುವುದಾಗಿ ಭರವಸೆ ಕೊಟ್ಟಿದ್ದಾರೆ, ಆದರೆ ಏನೂ ಆಗಿಲ್ಲ. ಆದುದರಿಂದ ಸರಕಾರ ಈಗಾದರೂ ಮನಸ್ಸುಮಾಡಿ ತತ್‌ಕ್ಷಣ ಸೂಕ್ತ ಕ್ರಮ ತೆಗೆದುಕೊಂಡು ಸೊಳ್ಳೆಕಾಟ ತಪ್ಪಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

†ಶ್ರೀ ಎಚ್. ಎನ್. ನಂಜೇಗೌಡ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಸೊಳ್ಳೆಗಳಿಗೂ ಕೂಡ ಜನನ ನಿಯಂತ್ರಣ ಯೋಜನೆಯನ್ನು ಜಾರಿಗೆ ತರಬೇಕೆಂದು ಸೂಚಿಸಿದ್ದಾರೆ. ಇದನ್ನು ವಿಚಾರ ಮಾಡಬೇಕಾಗುತ್ತದೆ. ವಿಚಾರ ಮಾಡಿ ಈ ಯೋಜನೆ ಅನುಷ್ಠಾನಕ್ಕೆ ತರುವುದಾದರೆ ಶ್ರೀ ವಾಟಾಳ್ ನಾಗರಾಜ್‌ರವರನ್ನೇ ಈ ಯೋಜನೆ ಕಾರ್ಯಕ್ರಮ ತೆಗೆದುಕೊಳ್ಳಲು ಮಾಡುವ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲು ಸರಕಾರ ಪರಿಶೀಲಿಸುವುದು ಎಂದು ತಿಳಿಸುತ್ತೇನೆ. ಸೊಳ್ಳೆ ಕಾಟ ತಪ್ಪಿಸಲು ಮಾನ್ಯ ಸದಸ್ಯರು ಅನೇಕ ಸಲಹೆ ಕೊಟ್ಟಿದ್ದಾರೆ. ಕಾರ್ಪೊರೇಷನ್ ಸರಕಾರದ ಸಹಾಯದಿಂದ ಸಾಕಾದಷ್ಟು ಕಾರ್ಯಕ್ರಮ ಈಗ ಕೈಕೊಂಡಿದೆ. ಹಾಗೆ ಕೈಕೊಂಡಿದ್ದರೂ ಕೂಡ ಸೊಳ್ಳೆಗಳ ಕಾಟ ಕಡಿಮೆಯಾಗಿದೆ ಎಂದು ಹೇಳುವ ಧೈರ್ಯ ನನಗಿಲ್ಲ. ಕಾರಣ ಇದುವರಗೆ ಕೈಕೊಂಡಿರುವ ಕ್ರಮಗಳಿಂದ ಸಂಪೂರ್ಣವಾಗಿ ಸೊಳ್ಳೆಗಳನ್ನು ನಿರ್ಮೂಲನಮಾಡಲು ಸಾಧ್ಯವಾಗಿಲ್ಲ. ಇದಕ್ಕೆ ಅನೇಕ ಕಾರಣಗಳುಂಟು. ಸಾಕಷ್ಟು ಡ್ರೈನೇಜ್ ಸಿಸ್ಟಂ ಇಲ್ಲ, ಸ್ಟೋರೇಜ್ ಸಿಸ್ಟಂ ಸರಿಯಾಗಿಲ್ಲ. ಮಾನ್ಯ ಸದಸ್ಯರು ಹೇಳಿದಹಾಗೆ ಹುಲ್ಲು ಮುಂತಾದ್ದು ಬೆಳೆಯಲು ಸ್ಯೂಅರೇಜ್ ವಾಟರನ್ನು ಬಳಸುತ್ತಿದ್ದಾರೆ. ಇದಕ್ಕೆ ಅವಕಾಶವಿಲ್ಲದಂತೆ ಮಾಡಬೇಕಾಗಿದೆ. ಅಲ್ಲದೆ ಸುಮಾರು ಒಂದು

6006
Accession No.
Date

ಒಂದೂವರೆ ವರ್ಷದಿಂದ ಕ್ಷಾಮ ಪರಿಸ್ಥಿತಿಯುಂಟಾಗಿ ಅದರ ಕಡೆಗೆ ಹೆಚ್ಚಾಗಿ ಗಮನ ಹರಿಸಲಾಗಿದೆ ಹೋದ ಜೂನ್ ತಿಂಗಳಲ್ಲಿ ಸೊಳ್ಳೆ ಕಾಟ ನಿರ್ಮೂಲ ಮಾಡಲು ತ್ವರಿತ ಕಾರ್ಯಕ್ರಮ ಕೈಕೊಳ್ಳಲು ಅಧಿಕಾರವರ್ಗ, ಈ ಸಭೆ ಮತ್ತು ಮೇಲ್ಮನೆ ಸದಸ್ಯರು ಸೇರಿದ ಒಂದು ಸಮಿತಿ ರಚಿಸಿತ್ತು. ಅದರಲ್ಲಿ ಶ್ರೀ ಶಾಮಣ್ಣನವರು ಮತ್ತು ಶ್ರೀ ಪಾಟೀಲ್ ನಾಗರಾಜರವರೂ ಇದ್ದಾರೆ. ಸಮಿತಿಯವರು ಬೇಕಾದ ಸ್ಥಳಗಳಿಗೆ ಭೇಟಿ ಕೊಟ್ಟರು. ತೊಂದರೆ ಯಾವರೀತಿ ನಿವಾರಣೆಮಾಡಬೇಕೆಂಬುದನ್ನು ಪರಿಶೀಲಿಸಿ ಸರಕಾರಕ್ಕೆ ವರದಿಮಾಡಿದ್ದಾರೆ. ಪೂರ್ಣವಾದ ವರದಿ ಇನ್ನೂ ಬರಬೇಕಾಗಿದೆ. ಅದು ಬಂದನಂತರ ಸರಕಾರ ಈ ವಿಷಯದಲ್ಲೇನು ಮಾಡಬೇಕು ಎಂಬುದನ್ನು ಪರಿಶೀಲಿಸುವುದು ಖಾಸಗಿ ವ್ಯಕ್ತಿಗಳು ಪೈಪುಗಳನ್ನು ಒಡೆದು ಸ್ಯೂಯೇಜ್ ವಾಟರನ್ನು ಉಪಯೋಗಿಸದಂತೆ ತಡೆಯಲು ಕಾನೂನಿಗೆ ತಿದ್ದುಪಡಿ ತರುವುದು ಮುಂತಾದುವುಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಸರಕಾರವೇನೂ ಮಾಡಿಲ್ಲವೆಂಬುದು ಸರಿಯಲ್ಲ. ಕಾರಣ ಮಲೇರಿಯ ಸೊಳ್ಳೆ ನಿರ್ಮೂಲನಕ್ಕೆ ಕಾರ್ಪೊರೇಷನ್ ಖರ್ಚುಮಾಡುವುದರಲ್ಲಿ ಅರ್ಧ ಸರಕಾರ ಕೊಡುತ್ತಿದೆ. ಇಷ್ಟು ಹೇಳಿ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಅವರಲ್ಲಿ ಮನವಿಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು ಸಮಾಧಾನಕರವಾಗಿದೆ. ಅವರು ಆಶ್ವಾಸನೆ ಕೊಟ್ಟಿರುವುದರಿಂದ ನನ್ನ ಉದ್ದೇಶ ಸಾಧಿಸಿದಂತಾಗಿದೆ. ಮತ್ತೊಮ್ಮೆ ಇದರ ಬಗ್ಗೆ ಆಶ್ವಾಸನೆ ಕೊಡಬೇಕೆಂದು ಕೇಳಿಕೊಂಡು ನನ್ನ ನಿರ್ಣಯವನ್ನು ವಾಪಸು ಪಡೆಯಲು ಅನುಮತಿ ಬೇಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.— ಆಗಲೇ ಹೇಳಿದಂತೆ ಸಂಬಂಧಪಟ್ಟ ಸಮಿತಿಯ ವರದಿ ಬಂದನಂತರ ಸರಕಾರ ಸೂಕ್ತವಾದ ಕ್ರಮ ಕೈಕೊಳ್ಳುವುದೆಂದು ಭರವಸೆ ಕೊಡುತ್ತೇನೆ

MADAM SPEAKER.—Has the hon. member leave of the House to withdraw the Resolution ?

Hon'ble Members .—Yes.

The Resolution was, by leave withdrawn

(ii) re: acquiring private land near slums in Bangalore and alloting the same to the slum dwellers.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ). —ನನ್ನ ನಿರ್ಣಯ ಈ ರೀತಿ ಇದೆ .— ಬೆಂಗಳೂರು ನಗರದಲ್ಲಿ ಹಾಲಿ ಕೊಳಚೆ ಪ್ರದೇಶಗಳಲ್ಲಿರುವ ಖಾಸಗೀ ಜಮೀನುಗಳನ್ನು ಸರ್ಕಾರದವರು ವಹಿಸಿಕೊಂಡು ಸದರಿ ಜಮೀನನು ಕೊಳಚೆ ಪ್ರದೇಶದ ನಿವಾಸಿಗಳಿಗೆ ಮಾದರಿ ಮನೆಗಳನ್ನು ನಿರ್ಮಿಸುವುದಕ್ಕಾಗಿ ಹಂಚಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ.

ಅಧ್ಯಕ್ಷರೇ, ಸೌಂದರ್ಯವಾದ ಬೆಂಗಳೂರು ನಗರದ ನಾಗರೀಕರಿಗೆ ಇರತಕ್ಕ ಮುಖ್ಯವಾದಂಥಾದ್ದು 3 ಸಮಸ್ಯೆಗಳು. ಅವು ಯಾವುವು ಎಂದರೆ (1) ನೀರಿನ ಸಮಸ್ಯೆ, ( ) ಸೊಳ್ಳೆ ಕಾಟ (3) ಊರಿನ ಸುತ್ತಮುತ್ತಲೂ ಇರತಕ್ಕಂಥ ಕೊಳಚೆ ಪ್ರದೇಶ.

ಇದರಲ್ಲಿ ಒಂದನೆಯದಾಗಿ ಹೇಳುವುದಾದರೆ ಈಗಾಗಲೇ ಸರ್ಕಾರದವರು ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ತರುವುದಕ್ಕೆ ಏರ್ಪಾಡು ಮಾಡಿ ಸಧ್ಯದಲ್ಲೇ ನೀರಿನ ಒಂದು ಸಮಸ್ಯೆಯನ್ನು ಬಗೆಹರಿಸತಕ್ಕಂಥ ಒಂದು ಕಾರ್ಯಕ್ರಮ ತಗೆದುಕೊಂಡಿರುವುದು ಬಹಳ ಸಂತೋಷದ ವಿಚಾರ.

ಇನ್ನು ಎರಡನೆಯದಾಗಿ ಸೊಳ್ಳೆ ಕಾಟದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಸರ್ಕಾರದವರು ಇದನ್ನು ನಿರ್ಮೂಲ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನೂ ಕೂಡ ಕೊಟ್ಟಿದ್ದಾರೆ.

Karnataka State Archives,

(ಶ್ರೀ ಟಿ. ಆರ್ ಶಾಮಣ್ಣ)—

ಇನ್ನು ಮೂರನೆಯದಾಗಿ ಹೇಳುವುದಾದರ ಬೆಂಗಳೂರು ನಗರದ ಕೊಳಚೆ ಪ್ರದೇಶದ ನಿರ್ಮೂಲದ ಬಗ್ಗೆ ಅದರಲ್ಲೂ ಕೂಡ ಖಾಸಗೀ ಜಮೀನುಗಳು ಇರತಕ್ಕಂಥ ಕಡೆ ಈ ಕೊಳಚೆ ಪ್ರದೇಶದ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ನಿನ್ನೆ ದಿನವೂ ಕೂಡ ಹೇಳಿದೆ. ಈವಾಗ ಬೆಂಗಳೂರಿನಲ್ಲಿ ಒಟ್ಟು 143 ಕೊಳಚೆ ಪ್ರದೇಶಗಳು ಇವೆ ಎಂದು ಅಧಿಕೃತವಾಗಿ ಹೇಳಿ ಕೊಟ್ಟಿದ್ದಾರೆ. ಅದರ ಬಗ್ಗೆ ಖಾಸಗೀ ಜಮೀನುಗಳಲ್ಲಿ ಇರತಕ್ಕಂಥಾದ್ದು 76, ಕಾರ್ಪೊರೇಷನ್ ಜಾಗದಲ್ಲಿ ಇರತಕ್ಕಂಥಾದ್ದು 31, ಟ್ರಸ್ಟ್ ಬೋರ್ಡ್ ಜಾಗದಲ್ಲಿ ಇರತಕ್ಕಂಥಾದ್ದು 13, ಸರ್ಕಾರದ ಜಾಗದಲ್ಲಿ ಇರತಕ್ಕಂಥಾದ್ದು 23. ಸರ್ಕಾರದವರು ಈಗಾಗಲೇ ಸರ್ಕಾರೀ ಜಮೀನಿನ ಮೇಲೆ, ಕಾರ್ಪೊರೇಷನ್ನಿನವರ ಜಮೀನಿನ ಮೇಲೆ ಮತ್ತು ಟ್ರಸ್ಟ್ ಬೋರ್ಡ್‌ಗಳ ಜಮೀನಿನ ಮೇಲೆ ಇರತಕ್ಕಂಥ ಕೊಳಚೆ ಪ್ರದೇಶಗಳನ್ನು ಸರಿಪಡಿಸುವುಧಕ್ಕೆ ತಕ್ಕ ಕಾರ್ಯಕ್ರಮಗಳನ್ನು ಆಗಲೇ ತೆಗೆದುಕೊಂಡಿದ್ದಾರೆ. ಶ್ರೀಮತಿ ಇಂಧಿರಾಗಾಂಧಿಯವರು ಈ ಸ್ಲಂಸ್‌ನವರ ಬಗ್ಗೆ ಒಂದು ವಿಶ್ವಾಸವನ್ನಿಟ್ಟುಕೊಂಡು ಇದನ್ನು ಉತ್ತಮಪಡಿಸಬೇಕೆಂದು ಇದಕ್ಕಾಗಿ 1½ ಕೋಟಿ ರೂಪಾಯಿ ಹಣವನ್ನು ಒದಗಿಸಿ ಕೊಟ್ಟಿದ್ದಾರೆ. ಈ ಹಣವನ್ನು ಸಾಧಾರಣವಾಗಿ ನಾನು ಈಗಾಗಲೇ ಹೇಳಿದ ಹಾಗೆ ಕಾರ್ಪೊರೇಷನ್, ಟ್ರಸ್ಟ್ ಬೋರ್ಡ್ ಮತ್ತು ಸರ್ಕಾರಿ ಜಮೀನುಗಳ ಮೇಲೆ ಇರತಕ್ಕಂಥ ಸ್ಲಂಸ್‌ಗೆ ಖರ್ಚಾಗುತ್ತಿದೆ ಆದರೆ ಖಾಸಗೀ ಜಮೀನಿನ ಬಗ್ಗೆ ಖರ್ಚು ಮಾಡುತ್ತಾ ಇಲ್ಲ. ಈಗ ಖಾಸಗೀ ಜಮೀನುಗಳಲ್ಲಿ ಇರತಕ್ಕಂಥಾ ಸ್ಲಂಸ್ ಒಂದಾನೊಂದು ಕಾಲದಲ್ಲಿ ದೊಡ್ಡ ತೋಟದ ಜಾಗವಾಗಿತ್ತು. ವಿಶಾಲವಾದ ಜಮೀನಾಗಿತ್ತು. ಈವಾಗ ಆ ಜಮೀನಿನ ಮಾಲೀಕರಿಗೆ ಲಕ್ಷಾಂತರ ರೂಪಾಯಿ ಲಾಭವಾಗುತ್ತದೆ. ಇದು ಹೇಗಾದರೂ ಆಗಲಿ ಆ ಖಾಸಗೀ ಜಮೀನುಗಳನ್ನು ಬಿಡಿಸಿಕೊಂಡು ಹೆಚ್ಚಿನ ಲಾಭವನ್ನು ಕೊಡಬೇಕು ಅಂತಲ್ಲ. ಈ ಖಾಸಗೀ ಜಮೀನ್‌ಗಳ ಮಾಲೀಕರಿಂದಲೇ ಈ ಸ್ಲಂಸ್‌ಗಳನ್ನು ತೆಗೆಸುವ ಪ್ರಯತ್ನ ಮಾಡಬೇಕು ಮತ್ತು ಸ್ಲಂಸ್‌ಗಳನ್ನು ಬೆಳೆಸುವುದಕ್ಕೆ ಈ ಖಾಸಗೀ ಜಮೀನುಗಳ ಮಾಲೀಕರೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಏತಕ್ಕೆಂದರೆ ಅವರಿಗೆ 10-10 ಅಡಿ ಜಾಗ ಕೊಟ್ಟು ಆ ಜಾಗಕ್ಕೆ 3-3 ರೂಪಾಯಿನಂತೆ ಬಾಡಿಗೆ ತೆಗೆದುಕೊಂಡಿದ್ದಾರೆ. ಇದರ ಮೇಲೆ ಒಂದು ಹತೋಟಿ ಇಲ್ಲದೇ ಇರುವುದರಿಂದ ಅವರಿಗೆ ಹೆಚ್ಚಿನ ಲಾಭ ಪಡೆಯುವುದಕ್ಕೆ ಅವಕಾಶವಾಗಿದೆ. ಬೆಂಗಳೂರು ನಗರದಲ್ಲಿ ಹೆಚ್ಚಿಗೆ ಸ್ಲಂಸ್‌ಗಳು ಇರತಕ್ಕಂಥಾದ್ದು ಕಲಾಸಿಪಾಳ್ಯಂ, ಮೈಸೂರು ರೋಡ್ ಮತ್ತು ಜಯಚಾಮರಾಜೇಂದ್ರ ರೋಡ್‌ನಲ್ಲಿ ಇದೆ. ಈ ಸ್ಲಂಸ್‌ಗಳು ಅತಿ ಮುಖ್ಯವಾದಂಥ ಜಾಗದಲ್ಲೇ ಇವೆ. ಬೆಂಗಳೂರಿಗೆ ಬರತಕ್ಕಂಥವರು ಇದು ಒಂದು ಸುಂದರವಾದ ನಗರ ಎಂದು ಏನು ಹೇಳುತ್ತಾರೋ ಅವರು ಈ ಸ್ಲಂಸ್‌ಗಳು ಇರುವುದನ್ನು ನೋಡಿದರೆ ಕಣ್ಣಿಗೆ ಕೊರತೆಯನ್ನು ಉಂಟು ಮಾಡುತ್ತದೆ. ಆದುದರಿಂದ ಬೆಂಗಳೂರು ನಾಗರೀಕರಿಗೆ ಅಥವಾ ಬೆಂಗಳೂರು ನಗರದ ಒಂದು ವೈಭವಕ್ಕೆ ಇದು ಇರುವುದು ಸರಿಯಾದುದಲ್ಲ. ಮತ್ತು ಈ ಖಾಸಗೀ ಜಮೀನುಗಳಲ್ಲಿರತಕ್ಕಂಥ ಸ್ಲಂಸ್‌ಗಳನ್ನು ನಿರ್ಮೂಲ ಮಾಡುವುದಕ್ಕೆ ಒಂದು ದೊಡ್ಡ ತೊಡಕು ಏನೆಂದರೆ ಅದಕ್ಕೆ ಅಪಾರವಾದ ಹಣ ಕೊಟ್ಟು ಮಾಡಬೇಕಾಗಿತ್ತು. ಈಗ ಹೆಚ್ಚಿನ ಹಣ ಕೊಡದೆ ಅದನ್ನು ತೆಗೆದುಕೊಳ್ಳುವುದಕ್ಕೆ ಈ ಕಾನೂನಿನಲ್ಲಿ ಸಾಕಷ್ಟು ಅವಕಾಶ ಇದೆ. ಆ ಲೇಔಟ್‌ಗಳಲ್ಲಿ ಒಂದು ಕಕ್ಕಸ್ಸು ಇಲ್ಲ. ಕೇವಲ 2 ಅಡಿ ಅಥವಾ 3 ಅಡಿ ಜಾಗ ಬಿಟ್ಟಿದ್ದಾರೆ. ಸಾಕಷ್ಟು ಬೆಳಕು ಇಲ್ಲ. ಚರಂಡಿ ವ್ಯವಸ್ಥೆ ಇಲ್ಲ, ಆದುದರಿಂದ ಈ ಕೊಳಚೆ ನೀರು ಸುತ್ತಮುತ್ತ ನಿಂತು ಅವರಿಗೆ ಅನಾನುಕೂಲವಾಗುವುದಲ್ಲದೆ ಸುತ್ತಮುತ್ತ ಇರತಕ್ಕಂಥ ಜನಗಳಿಗೂ ಕೂಡ ಆ ದುರ್ಗಂಧದ ಪ್ರಭಾವ ಹರಡಿ ಅವರು ಸಾಯುವ ಜೊತೆಗೆ ಸುತ್ತಮುತ್ತ ಇರತಕ್ಕಂಥ ಜನರಿಗೂ ಕೂಡ ಖಾಯಿಲೆ ಬರುವ ಅವಕಾಶ ಇದೆ. ಎಲ್ಲಕ್ಕಿಂತಲೂ ಇನ್ನೊಂದು ಶೋಚನೀಯವಾದ ವಿಚಾರ ಏನೆಂದರೆ ಸಾವಿರಾರು ಗುಡಿಸಲುಗಳು ಇರತಕ್ಕಂಥಾ ಜಾಗದಲ್ಲಿ ಯಾವ ವಿಧವಾದ ಒಂದು ಕಕ್ಕಸ್ಸೂ ಕೂಡ ಇಲ್ಲ. ಅವರು ಆದಕ್ಕಾಗಿ ಅದರ ಸುತ್ತಮುತ್ತ ಇರತಕ್ಕಂಥ ಒಂದು ಬಯಲು ಪ್ರದೇಶಕ್ಕೆ ಹೋಗಿ ನಾಚಿಕೆಗೇಡಿನ ಒಂದು ಪರಿಸ್ಥಿತಿಯನ್ನು ಉಂಟು ಮಾಡಿರುತ್ತಾರೆ. ಅದರಲ್ಲೂ ರೈಲಿನಲ್ಲಿ ಬರತಕ್ಕಂಥಾವರು ಈ ಒಂದು ಅವ್ಯವಸ್ಥೆಯನ್ನು ನೋಡತಕ್ಕಂಥಾದ್ದು ಎಲ್ಲರಿಗೂ ವ್ಯಸನ ಉಂಟು ಮಾಡತಕ್ಕಂಥ ಪರಿಸ್ಥಿತಿ. ನಾನು ಈಗಾಗಲೇ ಹೇಳಿದ ಹಾಗೆ ಸರ್ಕಾರದ ಜಾಗದಲ್ಲಿ, ಕಾರ್ಪೊರೇಷನ್ ಜಾಗದಲ್ಲಿ ಟ್ರಸ್ಟ್ ಬೋರ್ಡ್ ಜಾಗದಲ್ಲಿ ಇರತಕ್ಕಂಥಾವರಿಗೆ ಕಕ್ಕಸ್ಸು ಮತ್ತು ಲೈಟ್ ಇವುಗಳನ್ನು ಒದಗಿಸಬೇಕು ಎಂದು ಮಾಡಿದ್ದಾರೆ. ಆದರೆ ಖಾಸಗೀ ಜಮೀನುಗಳಲ್ಲಿರತಕ್ಕಂಥಾವರಿಗೆ ಯಾವುದೂ ಒದಗಿಸುತ್ತಾ ಇಲ್ಲ. ಇದರಿಂದ ಮತ್ತಷ್ಟು ಸ್ಲಂಸ್‌ಗಳು ಉದ್ಭವವಾಗುತ್ತದೆ. ಖಾಸಗೀ ಜಮೀನುಗಳಲ್ಲಿ ಅನೇಕ ಸ್ಲಂಸ್‌ಗಳು 30—40 ವರ್ಷದಿಂದಲೂ ಇವೆ. ಮೈಸೂರು ರೋಡಿನಲ್ಲಿ ಬಾಬಾ ಹಟ್ಸ್ ಬಹಳ ಹಿಂದಿನಿಂದಲೂ

ಇವೆ. ಒಂದೊಂದು ಮನೆಗೆ 5-6 ರೂಪಾಯಿಗಳಂತೆ ಬಾಡಿಗೆ ತೆಗೆದುಕೊಳ್ಳುತ್ತಿದ್ದಾರೆ. ಸುಮಾರು ಒಂದು ಸಾವಿರಕ್ಕಿಂತಲೂ ಜಾಸ್ತಿಯಾಗಿವೆ ಆ ಭಾಗದಿಂದ 3-3½ ಸಾವಿರ ರೂಪಾಯಿ ವರಮಾನ ಬರುತ್ತಿದೆ. ಅದೇ ರೀತಿ ಕಲಾಸಿಪಾಳ್ಯ, ರಾಜಮ್ಮ ಗಾರ್ಡನ್, ರಾಜಗೋಪಾಲ ನಾಯ್ಡು ಗಾರ್ಡನ್, ಮರಿಯಮ್ಮ ಗಾರ್ಡನ್, ಖಾದರ್ ಷರೀಫ್ ಗಾರ್ಡನ್ ಇವೆ. ಮತ್ತು ಅನೇಕ ತೋಟಗಳಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಅಲ್ಲೆಲ್ಲಾ ಸ್ಲಂಸ್‌ಗಳು ಇವೆ. ಈ ಸ್ಲಂಸ್‌ನಲ್ಲಿ ವಾಸ ಮಾಡತಕ್ಕಂಥ ಜನ ಯಾರು ಎಂದರೆ ನಮ್ಮ ನೆರೆ ರಾಜ್ಯದಿಂದ ಬಂದಿರತಕ್ಕಂಥಾವರೇ. ಅವರು ಬಹಳ ಬುದ್ಧಿವಂತರು, ಅಲ್ಲಿರುವ ಅನೇಕ ಜನ ಕೂಲಿ ಮಾಡಿಕೊಂಡಿದ್ದಾರೆ, ಅನೇಕ ಜನ ವ್ಯಾಪಾರ ಮಾಡಿಕೊಂಡಿದ್ದಾರೆ ಮತ್ತು ಕೆಲವರು ಸಣ್ಣಪುಟ್ಟ ಕೈಗಾರಿಕೆಗಳನ್ನೂ ಕೂಡ ಇಟ್ಟುಕೊಂಡಿದ್ದಾರೆ.

12-30 P.M.

ಇವರಲ್ಲಿ ಸಾಧಾರಣವಾಗಿ ಪಟ್ಟಣದೊಳಗಡೆಯೇ ಕೆಲಸ ಮಾಡುವಂತಹ ಜನರು. ಇವರನ್ನು ಊರಿಂದ ಹೊರಗೆ ಹೋಗಬೇಕೆಂದು ಹೇಳಿದರೆ ಇದರಿಂದ ಅವರಿಗೆ ಸೌಕರ್ಯವಾಗುವುದಿಲ್ಲ. ಸ್ಲಂಸ್‌ಗಳನ್ನು ಮೊದಲು ಕ್ಲಿಯರು ಮಾಡಬೇಕು. ಇದಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಮಲ್ಟಿ ಸ್ಟೋರೀಡ್ ಬಿಲ್ಡಿಂಗು ರೀತಿ ಕಟ್ಟಡಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡಬೇಕು. ಬಡವರು ಕಾರ್ಪೋರೇಷನ್ ಜಾಗದಲ್ಲಿರಲಿ ಇಲ್ಲವೇ ಖಾಸಗಿ ಜಾಗದಲ್ಲಿರಲಿ, ಅವರು ಬಡವರೇ. ಆದರೆ ಒಂದು ಭಾಗದ ಜನರಿಗೆ ಅನುಕೂಲ ಮಾಡಿಕೊಟ್ಟು ಮತ್ತೊಂದು ಭಾಗದಲ್ಲಿರತಕ್ಕ ಜನರಿಗೆ ಅನುಕೂಲ ಮಾಡಿಕೊಡದೇ ಇರುವುದು ಸರಿಯಾದುದಲ್ಲ, ಇದಕ್ಕೆ ಬೇಕಾದ ಹಣವನ್ನು ಇಲ್ಲಿರುವ ಜನರಿಂದಲೇ ಸರಕಾರ ವಸೂಲು ಮಾಡಿಕೊಳ್ಳಬಹುದು, ಇದಕ್ಕೆ ಬೇಕಾದ ಕಾಯಿದೆಗಳು ಕೂಡ ಅನುಕೂಲವಾಗಿವೆ, ಇದರ ಬಗ್ಗೆ ಸರಕಾರ ಮೊದಲು ಬೇಕಾಗುವ ಭೂಮಿಯನ್ನು ಅಕ್ವೈರು ಮಾಡಿಕೊಂಡು ಸ್ಲಂಸ್‌ಗಳನ್ನು ಮೊದಲು ತೆಗೆಯಬೇಕು, ಇದಕ್ಕೆ ಬೇಕಾಗುವ ಹಣವನ್ನು ಸಾಲದ ಮೂಲಕವಾಗಿ ಎಲ್ ಐ ಸಿ ಮೂಲಕವೋ ಇಲ್ಲವೇ ಡಿಬೆಂಚರುಗಳ ಮೂಲಕವೋ ಸಾಲ ತೆಗೆದು ಆದಷ್ಟು ಬೇಗ ಇಂತಹ ಸ್ಲಂಸ್‌ಗಳನ್ನು ತೆಗೆಯುವ ಕ್ರಮ ತೆಗೆದುಕೊಳ್ಳಬೇಕು. ಹಿಂದೆ ನಮಗೆ ಕೊಟ್ಟಿರುವ ಅಂಕೆಗಳ ಪ್ರಕಾರ ಆಗ ಸುಮಾರು 100 ಸ್ಲಂಸ್‌ಗಳು ಮಾತ್ರವೇ ಇತ್ತು, ಆದರೆ ಈಗ 147 ಸ್ಲಂಸ್‌ಗಳು ಇವೆ ಎಂದು ಈಚೆಗೆ ನಮಗೆ ಒದಗಿಸಿರುವ ಅಂಕೆಗಳಿಂದ ಗೊತ್ತಾಗುತ್ತದೆ. ಎಂದರೆ ಇದರಿಂದ ನಮಗೆ ತಿಳಿಯುವುದು ಹಿಂದೆ ಇದ್ದ ಸ್ಲಂಸ್‌ಗಳಿಗಿಂತಲೂ ಇನ್ನೂ ಹೆಚ್ಚಾಗುತ್ತಾ ಬರುತ್ತಿವೆ. ಇದಕ್ಕೆ ಅವಕಾಶ ಕೊಡುವುದು ಸರಿಯಲ್ಲ. ಸ್ಲಂಸ್‌ಗಳನ್ನು ತೆಗೆಯುವಾಗ ಇನ್ನೊಂದು ಕಡೆ ಸ್ಲಂಸ್‌ಗಳು ಆಗಲು ಅವಕಾಶ ಮಾಡಬಾರದು. ಇದರ ಬಗ್ಗೆ ತಮಿಳುನಾಡಿನಲ್ಲಿ ಒಂದು ರೀತಿ ಯೋಜನೆ ಮಾಡಿ ಸ್ಲಂಸ್‌ಗಳನ್ನು ತೆಗೆಯುವುದರಲ್ಲಿ ಸಾಕಾದಷ್ಟು ಮುಂದುವರಿದಿದ್ದಾರೆ. ಅಲ್ಲಿ ಬಡವರಿಗಾಗಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಸುಮಾರು ಐದು ಕೋಟಿ ರೂಪಾಯಿಗಳಷ್ಟು ಹಣವನ್ನು ಬಡವರಿಗಾಗಿ ಮನೆ ಕಟ್ಟಲು ಒದಗಿಸಿದ್ದೇವೆ ಎಂದು ಇಲ್ಲಿ ನಮ್ಮ ಅರ್ಥ ಸಚಿವರೂ ಹೇಳಿದ್ದಾರೆ. ಇದೇ ರೀತಿ ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟುವಂತೆ ಗ್ರಾಮಾಂತರ ಪ್ರದೇಶಗಳಲ್ಲೂ ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡಲು ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಅವರಿಗೆ ಹೇಳುತ್ತಿದ್ದೇನೆ. ನಾನು ಇಲ್ಲಿ ಸ್ಲಂಸ್‌ಗಳನ್ನು ಬೆಳೆಸಿಕೊಂಡು ಹೋಗಬೇಕೆಂದು ಹೇಳುತ್ತಿಲ್ಲ, ಇನ್ನು ಮುಂದಾದರೂ ಹೆಚ್ಚು ಸ್ಲಂಸ್‌ಗಳು ಹೊಸದಾಗಿ ಉದ್ಭವವಾಗದಂತೆ ನೋಡಿಕೊಳ್ಳಬೇಕಾದುದು ಅಗತ್ಯ. ಆದರೆ ಸ್ಲಂಸ್‌ಗಳನ್ನು ತೆಗೆಯುವಾಗ ಅದಕ್ಕೆ ತಕ್ಕಂತೆ ಮನೆಗಳನ್ನು ಕಟ್ಟಿಸಿ ಅವರಿಗೆ ಕೊಟ್ಟು ಹಳೆಯ ಸ್ಲಂಸ್‌ಗಳನ್ನು ಪೂರ್ತಿ ನಾಶಮಾಡಬೇಕು. ಆದರೆ ಈಚೆಗೆ ಕಲಾಸಿಪಾಳ್ಯದಿಂದ ಸ್ಲಂಸ್‌ಗಳನ್ನು ತೆಗೆದು ಜಯನಗರಕ್ಕೆ ಸ್ಥಳಾಂತರ ಮಾಡಿದ್ದರೂ ಹಿಂದೆ ಇದ್ದ ಸ್ಲಂಸ್‌ಗಳು ಹಾಗೇ ಇವೆ. ಇದರಿಂದ ಸ್ಲಂಸ್‌ಗಳು ನಿವಾರಣೆಯಾಗದೇ ಹಾಗೇ ಉಳಿದುಕೊಂಡು ಬರುತ್ತಿವೆ. ಇಂತಹ ಕ್ರಮಗಳನ್ನು ಸರಕಾರ ಮಾಡಬಾರದು, ಇದನ್ನು ತಪ್ಪಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಹಾಗೆ ಮಾಡದೆ ಇದ್ದರೆ ಬೆಂಗಳೂರು ನಗರದ ಮೇಲೆ ಒಂದು ರೀತಿಯ ಕಪ್ಪು ಚಿಹ್ನೆಗಳು ಬೆಳೆಯಲು ಅವಕಾಶವಾಗುತ್ತವೆ, ಬಡವರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತ ಇಂತಹ ಸ್ಲಂಸ್‌ಗಳು ಬೆಳೆಯಲು ಅವಕಾಶ ಖಂಡಿತ ಕೊಡಕೂಡದು ಎಂದು ಸರಕಾರದಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ನಮ್ಮ ಸರಕಾರವೇನೋ ಬಡವರನ್ನು ಉದ್ಧಾರ ಮಾಡುತ್ತೇವೆ, ಬಡವರಿಗೆ ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಘೋಷಣೆಗಳನ್ನೇನೋ ಮಾಡುತ್ತಿದ್ದಾರೆ. ಆದರೆ ಅದು ಬರೀ ಘೋಷಣೆಯಾಗಿಯೇ ಉಳಿದು ಬರುತ್ತಿದೆ. ಇದು ಕಾರ್ಯಗತವಾಗಬೇಕಾದರೆ ಆದಷ್ಟು ಜಾಗ್ರತೆ ಇಂತಹ ಕೆಲಸಗಳನ್ನು ಮಾಡಿ

(ಶ್ರೀ ಟಿ. ಆರ್. ಶಾಮಣ್ಣ)

ಇರುವ ಸ್ಲಂಸ್‌ಗಳನ್ನು ಕೂಡಲೇ ತೆಗೆಯಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ, ಇಲ್ಲದಿದ್ದರೆ ಇದರ ಸಮಸ್ಯೆ ಬಗೆ ಹರಿಯುವುದಿಲ್ಲ. ನಮ್ಮ ಸರಕಾರವೇನೋ ಸ್ಲಂಸ್‌ಗಳನ್ನು ತೆಗೆಯಬೇಕೆಂದು ಸುಮಾರು ಒಂದು ಕೋಟಿಯಷ್ಟು ಹಣ ಕೊಟ್ಟಿದೆ. ಇದರಲ್ಲಿ ಈಗಾಗಲೇ ಎರಡನೇ ಪ್ಲಾನ್‌ನಲ್ಲಿ ಸುಮಾರು 40 ಲಕ್ಷದಷ್ಟು ಬಹಳ ಖರ್ಚು ಮಾಡಿದ್ದಾರೆ ಮತ್ತು ಈಚೆಗೆ ಐದು ಅಥವಾ ಹತ್ತು ಲಕ್ಷದಷ್ಟು ಖರ್ಚು ಮಾಡಿದ್ದಾರೆ. ಆದರೆ ಸ್ಲಂಸ್‌ಗಳು ಬೆಳೆಯುತ್ತಲೇ ಹೋಗುತ್ತಿವೆ. ಹಿಂದೆ ನೂರು ಇದ್ದದ್ದು ಇಂದು ಇದು 147ರ ವರೆಗೆ ಹೆಚ್ಚಾಗಿವೆ. ಮತ್ತು ಇಂತಹ ಸ್ಲಂಸ್‌ಗಳು ಆಗಲು ರಾಜಕಾರಣಿಗಳೂ ಕಾರಣರು ಎಂದು ಹೇಳಬೇಕಾಗುತ್ತದೆ. ಕೆಲವು ವೇಳೆ ಇದಕ್ಕೆ ಉತ್ತೇಜನ ಕೊಡಬೇಕಾಗುತ್ತದೆ. ರಾಜಕೀಯ ದೃಷ್ಟಿಯಿಂದ ಇದನ್ನು ಬಗೆಹರಿಸಬೇಕಾದರೆ ಇದು ಸ್ವಲ್ಪ ಕಠಿಣವಾಗುತ್ತದೆ. ಇಂತಹ ಸ್ಲಂಸ್‌ಗಳನ್ನು ಇನ್ನು ಮುಂದೆ ಉತ್ತೇಜನ ಕೊಟ್ಟು ಮುಂದುವರಿಸುವುದು ಸರಿಯಾಗಿರುವುದಿಲ್ಲ. ಆದುದರಿಂದ ಸರಕಾರ ಕಟ್ಟು ನಿಟ್ಟಾದ ಕ್ರಮ ತೆಗೆದುಕೊಂಡು ಇನ್ನು ಮುಂದೆ ಸ್ಲಂಸ್‌ಗಳು ತಲೆ ಎತ್ತದಂತೆ ಮಾಡಬೇಕಾದುದು ಅಗತ್ಯ, ಬೆಂಗಳೂರು ನಗರದ ಹಿತದೃಷ್ಟಿಯಿಂದ ಬಡವರನ್ನು ಉದ್ಧಾರ ಮಾಡಬೇಕು ಎಂದರೆ ಇದನ್ನು ಮಾನವೀಯತೆ ದೃಷ್ಟಿಯಿಂದ ಪರಿಶೀಲಿಸಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಕೆಲಸ ಮಾಡಬೇಕು. ಯಾವುದನ್ನೂ ಅರ್ಧಂಬರ್ಧ ಕೆಲಸ ಮಾಡಬಾರದು, ಅದರಿಂದೇನೂ ಅನು ಕೂಲವಾಗುವುದಿಲ್ಲ. ಯಾವ ಕೆಲಸವನ್ನೂ ಪೀಸ್‌ಮೀಲ್ ಆಗಿ ಮಾಡಿದರೆ ಈ ಸಮಸ್ಯೆ ಪರಿಹಾರ ವಾಗುವುದಿಲ್ಲ. ನಾನು ಆಗಲೇ ಸೂಚಿಸಿದಂತೆ ಇದಕ್ಕೆ ಬೇಕಾದ ಹಣವನ್ನು ಸ್ಲಂಸ್‌ಗಳಲ್ಲಿ ವಾಸ ಮಾಡುವವರಿಂದಲೇ ಬೇಕಾದರೆ ಸ್ವಲ್ಪ ವಸೂಲು ಮಾಡಬಹುದು ಇಲ್ಲವೇ ಎಲ್ ಐ ಸಿ ಮೂಲಕ ಅಥವಾ ಡಿಬೆಂಚರು ಸಾಲದ ಮೂಲಕ ವಸೂಲು ಮಾಡಬಹುದು, ಸರಕಾರದಲ್ಲಿ ಹಣ ಕಾಸಿನ ಸ್ಥಿತಿ ಚೆನ್ನಾಗಿಲ್ಲದೆ ಇರುವುದರಿಂದ ಬೇರೆ ಕಡೆಯಿಂದ ಸುಲಭ ಬಡ್ಡಿಯ ಮೇಲೆ ಸಾಲ ಪಡೆದುಕೊಂಡು ಇದರ ನಿವಾರಣೆಗೆ ಪ್ರಯತ್ನ ಮಾಡಬಹುದು, ಸರಕಾರ ಇದರ ಬಗ್ಗೆ ನಿರ್ದಿಷ್ಟವಾದ ನೀತಿ ಅನುಸರಿಸಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ., ಈ ನಿರ್ಣಯದ ಬಗ್ಗೆ ಮಾತನಾಡುವಾಗ ಒಂದೆರಡು ವಿಷಯಗಳನ್ನು ಮಾತ್ರ ಇಲ್ಲಿ ಸರಕಾರದ ಗಮನಕ್ಕೆ ತರಬೇಕಾಗಿದೆ. ಒಂದೇ ಒಂದು ಮುಖ್ಯ ವಿಷಯ ಸರಕಾರದ ಗಮನಕ್ಕೆ ತರಬೇಕಾಗಿರುವುದು, ಖಾಸಗೀ ಜಮೀನು ಗಳನ್ನು ಅಕ್ವೈರು ಮಾಡಿಕೊಂಡು ಅಲ್ಲಿ ನಿವೇಶನಗಳನ್ನು ಕೊಟ್ಟು ಇದರ ಬಗ್ಗೆ ನಿರ್ಣಯ ಮಾಡಿ ಹರಿಜನರಿಗೆ ಅನುಕೂಲವಾಗಲಿ ಎಂದು ಸರಕಾರ ಒಪ್ಪಿಕೊಂಡು ಕೊಟ್ಟಿರುವ ನೀತಿಯನ್ನು ಈಚೆಗೆ ಬದಲಾವಣೆ ಮಾಡಿದ್ದಾರೆ. ಇದರ ಬಗ್ಗೆ ನಾನು ಈ ಸಭೆಯ ಮಾನ್ಯ ಉಪನಾಯಕರಲ್ಲಿ ಹೇಳು ವುದು ಹಿಂದೆ ನಮ್ಮ ಕ್ಷೇತ್ರದಲ್ಲ ಪೈಪು ಲೈನಿನಲ್ಲಿ ವಾಸವಾಗಿದ್ದ 72 ಜನ ಹರಿಜನಗಿರಿಜನರಿಗೆ ಎಲ್ಲ ಸೌಕರ್ಯಗಳನ್ನೂ ಕೊಡಬೇಕು ಎಂದು ಇವರಿಗೆ ಇಲ್ಲಿರುವ ಮನೆಗಳಿಗಾಗಿ ಸೈಟುಗಳನ್ನು ಕೊಡ ಬೇಕೆಂದು ನಿರ್ಣಯವೂ ಆಗಿತ್ತು. ಇದಕ್ಕೆ ತದ್ವಿರುದ್ಧವಾಗಿ ಈಗ ಹೊಸದಾಗಿ ಒಂದು ಸರಕಾರದ ಆರ್ಡರು ಬಂದಿದೆ. ಅದರಲ್ಲಿ ಇಲ್ಲಿರುವ ಈಚೆಗೆ ಬಂದಿರುವ 30 ಜನರಲ್ಲಿ ಏಳು ಜನಕ್ಕೆ ಸೈಟು ಕೊಡ ಬೇಕು ಎಂದು ಮಾಡಿರುವುದು ಸರಿಯಲ್ಲ. ಇಲ್ಲಿ ಈಚೆಗೆ ಬಂದಿರುವ 30 ಜನರಲ್ಲಿ 15 ಜನರಿಗೆ ಎರಡು ಮೂರು ಮನೆಗಳಿವೆ ಮತ್ತು ಇವರಿಗೆಲ್ಲಾ ತಿಂಗಳಿಗೆ ಎರಡು ಸಾವಿರ ರೂಪಾಯಿಗಳಷ್ಟು ಬಾಡಿಗೆ ಬರುತ್ತಿವೆ. ಇಷ್ಟು ವರಮಾನವಿರುವವರಿಗೇ ಸೈಟುಗಳನ್ನು ಕೊಟ್ಟರೆ ಬಡವರಾಗಿರುವ ಹರಿಜನರ ಗತಿಯೇನು? ಇಂತಹ ಒಂದು ಆಜ್ಞೆ ಸರಕಾರ ಕೊಡಬಾರದಾಗಿತ್ತು. ಸರಕಾರ ಇದನ್ನು ತಡೆಹಿಡಿಯಬೇಕು. ಇಲ್ಲಿರುವ ಖಾಸಗೀ ಜನರು 40-50 ಜನರು ಬೇಕಾದಷ್ಟು ಆಸ್ತಿ ಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ, ಇಂತಹವರಿಗೆ ಸೈಟುಗಳನ್ನು ಕೊಡುವುದು ಸರಿಯಲ್ಲ, ಹಿಂದೆ ಇದ್ದವರಿಗೆ ಇಲ್ಲಿನ ಸೈಟುಗಳನ್ನು ಕೊಡಬೇಕೆಂದು ಇದೆ. ಈಗ ಸರಕಾರ ನೋಟೀಸು ಕೊಟ್ಟು ಇವರನ್ನೆಲ್ಲಾ ಖಾಲಿ ಮಾಡು ಎಂದು ಹೇಳುತ್ತಿದ್ದಾರಂತೆ. ಇವರೆಲ್ಲ ಹರಿಜನರು ಹಾಗೂ ಬಡವರು. ದಯವಿಟ್ಟು ಸರಕಾರ ಇಂತಹ ಒಂದು ಆಜ್ಞೆಯನ್ನು ತಡೆಹಿಡಿದು ಬಡಜನಕ್ಕೆ ಅನುಕೂಲ ಮಾಡಿಕೊಡಬೇಕು, ಹಿಂದಿನ ಸರಕಾರ ಕೂಡ ಇವರ ಬಗ್ಗೆ ಮಾಡಿರಲಿಲ್ಲ. ಈಗಲಾದರೂ ಬಡವರ ಬಗ್ಗೆ ಪರಿಶೀಲನೆ ಮಾಡಿ ಸರಕಾರದ ನೀತಿಗೆ ವಿರೋಧವಾಗಿರುವ ಆರ್ಡರನ್ನು ಹಿಂತೆಗೆದು ಕೊಂಡು ಇಲ್ಲಿನ ಬಡಜನಕ್ಕೆ ಸೈಟುಗಳು ಸಿಗುವ ವ್ಯವಸ್ಥೆ ಮಾಡಬೇಕು ಮತ್ತು ಇದರಿಂದ 72 ಬಡ ಜನರಿಗೆ ತೊಂದರೆಯಾಗುತ್ತದೆ. ಇದನ್ನು ಕೂಡಲೇ ಸರಕಾರ ತಡೆಹಿಡಿಯಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಶಾಮಣ್ಣನವರು ಗುಡಿಸಲುವಾಸಿಗಳ ಬಗ್ಗೆ ತಂದಿರುವ ನಿರ್ಣಯ ಬಹಳ ಗಮನಾರ್ಹವಾದ ವಿಷಯ ವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಬೆಂಗಳೂರು ನಗರದಲ್ಲಿ ಈ ಬಗ್ಗೆ ತೀವ್ರವಾದ ಆಸಕ್ತಿವಹಿಸಿ ಒಂದು ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಲು ಯೋಚನೆ ಮಾಡುತ್ತಿದ್ದರು. ಈಗಲೂ ಅದೇ ಯೋಚನೆಯಲ್ಲಿಯೇ ಇದ್ದಾರೆಂದು ನಾನು ತಿಳಿಯುತ್ತೇನೆ. ಆದರೆ ಅವರ ಒಂದು ಮಾತಿನ ಬರಾಟೆಯಲ್ಲಿ ಅವರು ಮಂತ್ರಿ ಗಳಾಗಿ ಉಳಿಯುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಈ ಪ್ರಶ್ನೆ ಮಾತ್ರ ಹಾಗೆಯೇ ಉಳಿಯು ತ್ತದೆ. ಈಗ ಬೆಂಗಳೂರು ನಗರದಲ್ಲಿ ಎರಡು ತರಹ ಗುಡಿಸಲುವಾಸಿಗಳಿದ್ದಾರೆ. ಸರ್ಕಾರೀ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡಿರುವವರದ್ದು ಒಂದು ಗುಂಪಾದರೆ, ಖಾಸಗೀ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡಿರುವವರದ್ದು ಇನ್ನೊಂದು ಗುಂಪು. ಮಾನ್ಯ ಶಾಮಣ್ಣನವರು ತಂದಿರುವ ನಿರ್ಣಯ ಖಾಸಗೀ ಜಮೀನುಗಳಲ್ಲಿ ಗುಡಿಸಲು ಹಾಕಿಕೊಂಡಿರುವವರ ಬಗ್ಗೆ ಮಾತ್ರ ಸೀಮಿತ ವಾಗಿದೆ. ಅದರೆ ಎರಡು ತರಹ ಜಮೀನುಗಳಲ್ಲಿಯೂ ಗುಡಿಸಲು ಹಾಕಿಕೊಂಡಿರುವವರ ಪರಿಸ್ಥಿತಿಯೂ ಗಂಭೀರವಾಗಿದೆ. ಅವರುಗಳಿಗೆ ನೀರಿನ ಸೌಕರ್ಯ ಇಲ್ಲ. ದೀಪದ ಸೌಕರ್ಯವಿಲ್ಲ. ವಾಸಮಾಡಲು ಸರಿಯಾದ ಮನೆಗಳಿಲ್ಲ ; ಒಂದು ರೀತಿಯ ಕಠಿನ ಪರಿಸ್ಥಿತಿ ಅವರುಗಳಿಗೆ ಬಂದಿದೆ ಎಂದರೆ ತಪ್ಪಾಗಲಾರದು. ಇವರುಗಳ ಪ್ರಶ್ನೆ ಅನೇಕ ವರ್ಷಗಳಿಂದ ಹಾಗೆಯೇ ಮುಂದುವರಿದು ಕೊಂಡು ಬರುತ್ತಿದೆ. ಇನ್ನೊಂದು ಮುಖ್ಯವಾದ ಪ್ರಶ್ನೆಯೆಂದರೆ ಈ ರೀತಿಯ ಗುಡಿಸಲುವಾಸಿಗಳ ಪ್ರದೇಶಗಳು ಬೆಂಗಳೂರು ನಗರದಲ್ಲಿ ಜಾಸ್ತಿಯಾಗುತ್ತಿರುವುದು. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇವರುಗಳಿಗೆಲ್ಲಾ ಬೇರೆ ಕಡೆ ಸೈಟ್ ಮಾಡಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಘೋಷಣೆ ಹೊರಡಿಸಿದ್ದಾರೆ. ಅದರ ಅರ್ಥವೇನೋ ಒಳ್ಳೆಯದು, ಆದರೆ ಆಗಿರುವುದಾದರೂ ಏನು? ಈಗ ಅನೇಕ ಕಡೆಗಳಲ್ಲಿ ಹೊಸದಾಗಿ ಏನು ಗುಡಿಸಲುಗಳು ಏಳುತ್ತಿವೆ. ಅಲ್ಲಿ ವ್ಯಾಪಾರ ಸಹ ಆಗುತ್ತಿದೆ ಎಂದು ಗೊತ್ತಾಗಿದೆ. ಅದು ಪತ್ರಿಕೆಗಳಲ್ಲಿಯೂ ಸಹ ಪ್ರಕಟವಾಗಿದೆ. ಯಾರೋ ಕೆಲವರು ಸೇರಿಕೊಂಡು, "ನಮಗೆ ಬಸವಲಿಂಗಪ್ಪನವರು ಗೊತ್ತು, ಆ ಜಾಗವನ್ನು ನಿಮಗೆ ಮಾಡಿಸಿಕೊಡುತ್ತೇವೆಂದು" ಹೇಳಿ ಗುಡಿಸಲುವಾಸಿಗಳಿಂದ ನೂರು, ಇನ್ನೂರು ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಇಂತಹವರು ಕೆಲವರು ಸೇರಿಕೊಂಡು, ಇಂದಿರಾನಗರ ವೆಲ್‌ಫೇರ್ ಅಸೋಸಿಯೇಷನ್ ಎಂದು ಮಾಡಿಕೊಂಡು, ಮಾನ್ಯ ಬಸವಲಿಂಗಪ್ಪನವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವರ ಮೆರವಣಿಗೆಯನ್ನು ಸಹ ಮಾಡಿಸಿದರು. ಮತ್ತು ಅವರಿಂದ ಉದ್ಘಾಟನೆಯನ್ನು ಸಹ ಮಾಡಿಸಿದರು. ತಮಗೆ ಅನುಕೂಲ ಮಾಡಿಕೊಳ್ಳುವುದಕ್ಕಾಗಿಯೇ ಇಂತಹ ಕೆಲವು ಪುಢಾರಿ ಗಳು ಇಂದು ಹುಟ್ಟಿಕೊಂಡಿದ್ದಾರೆ. ಇವರು ಹಣ ಮಾಡಿಕೊಳ್ಳುತ್ತಿರುವುದಲ್ಲದೆ, ಗುಡಿಸಲುಗಳನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಸರ್ಕಾರದವರು ಮಾಡಿದಂತಹ ಘೋಷಣೆಯನ್ನು ಕಾರ್ಯಗತ ಮಾಡದಿದ್ದರಿಂದ ಗುಡಿಸಲುಗಳ ಸಂಖ್ಯೆ ಇಂದು ಬೆಂಗಳೂರು ನಗರದಲ್ಲಿ ಬೆಳೆಯುತ್ತಾ ಹೋಗುತ್ತಿದೆ.

ಶ್ರೀ ಎಚ್. ಎನ್. ನಂಜೇಗೌಡ.—ನೂರು ಇನ್ನೂರು ರೂಪಾಯಿಗಳನ್ನು ಕೆಲವರು ತೆಗೆದು ಕೊಳ್ಳುತ್ತಿದ್ದಾರೆಂದು ತಾವು ಹೇಳಿದಿರಿ. ಅದನ್ನು ತಡೆಗಟ್ಟುವುದು ನಮ್ಮ ಮತ್ತು ನಿಮ್ಮ ಕರ್ತವ್ಯ ವಾಗಿದೆ. ಇಂತಹವರು ಈ ರೀತಿ ಅಪರಾಧ ಮಾಡುತ್ತಿದ್ದಾರೆಂದು ತಾವು ಮಂತ್ರಿಗಳಿಗಾಗಲೀ, ಸರ್ಕಾರಕ್ಕಾಗಲೀ ಹೇಳಿದರೆ ನಮ್ಮ ಕೈಲಾದದ್ದು ಮಾಡಬಹುದು. ಲಂಚ ರುಷುವತ್ತು ಇದ್ದರೆ ಅದನ್ನು ಯಾವ ರೀತಿ ತಡೆಗಟ್ಟಬೇಕೆಂಬ ಬಗ್ಗೆ ಎಲ್ಲರ ಜವಾಬ್ದಾರಿಯೂ ಇದೆ ಎಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಬೇಲಿಯೇ ಎದ್ದು ಹೊಲ ಮೇಯುವಾಗ ಯಾರಿಗೆ ಹೇಳಬೇಕು ?

ಶ್ರೀ ಎಚ್. ಎನ್. ನಂಜೇಗೌಡ.—ಯಾರು ಹೊಲ ಮೇಯುತ್ತಿದ್ದಾರೆ ಎಂಬುದು ಗೊತ್ತಿದ್ದರೆ ಹೇಳಿ ; ಅದು ಬಿಟ್ಟು ಸುಮ್ಮನೆ ಭ್ರಮೆ ಇಟ್ಟುಕೊಂಡಿದ್ದರೆ ಅದು ಹೋಗಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಹಣ ವಸೂಲಿ ಮಾಡುತ್ತಿರುವುದು ಎರಡು ಕಡೆಗಳಲ್ಲಿ ನಡೆಯುತ್ತಿದೆ. ನಮ್ಮ ಪಾರ್ಟಿಯವರೇನಾದರೂ ಆ ರೀತಿ ಮಾಡಿದ್ದರೆ ಅವರನ್ನು ಪಾರ್ಟಿಯಿಂದ ಹೊರಕ್ಕೆ ಹಾಕಿಸಿ ಪಬ್ಲಿಕ್ ಆಗಿ ಎಕ್ಸ್‌ಪೋಸ್ ಮಾಡುತ್ತಿದ್ದೆವು. ಆದರೆ ಅವರು ನಿಮ್ಮ ಪಾರ್ಟಿ ಯವರೇ ಅಥವಾ ಯಾವ ಪಾರ್ಟಿಯವರು ಎಂಬುದು ಗೊತ್ತಿಲ್ಲ. ಆದರೆ ಅವರು ದೇವರಾಜ ಅರಸ್ ಮತ್ತು ಇಂದಿರಾಗಾಂಧಿಯವರ ಫೋಟೋಗಳನ್ನು ಹಾಕಿಕೊಂಡು ಅವರ ಹೆಸರುಗಳನ್ನು ಹೇಳಿಕೊಳ್ಳುತ್ತಾ ಜನರಿಗೆ ವಂಚನೆ ಮಾಡುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ಪಾರ್ಟಿಯ ಹೆಸರನ್ನು ಹೇಳಿಕೊಂಡು ಯಾರೋ ಒಬ್ಬರು ತಮ್ಮ ಸ್ವಾರ್ಥಕ್ಕೆ ಲಾಭ ಮಾಡಿಕೊಳ್ಳುತ್ತಿದ್ದಾರೆಂದು ಗೊತ್ತಾಗಿ, ಅದನ್ನು ತನಿಖೆ ಮಾಡಿಸಿ ನೋಡಿದಾಗ ಅವರು ನಮ್ಮ ಪಾರ್ಟಿಯ ಸದಸ್ಯರಲ್ಲ ಎಂಬುದು ಗೊತ್ತಾಯಿತು. ಯಾರೋ ಮಾಡಿದ ತಪ್ಪಿಗೆ ನನ್ನ ಮಗ ದಂಡ ತೆತ್ತ ಎಂಬಂತೆ, ಆಡಳಿತ ನಡೆಸುತ್ತಿರುವ ಪಕ್ಷದ ಹೆಸರನ್ನು ಹೇಳಿಕೊಂಡು ಯಾರೋ ಕೆಲವರು ಈ ರೀತಿ ಮಾಡಿದರೆ ಅವನ್ನು ಪತ್ತೆ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಹಣ ವಸೂಲಿ ಮಾಡುವವರಿಗೆ ಪೋಲೀಸರ, ಸರ್ಕಾರದ ಅಧಿಕಾರಿಗಳ ಮತ್ತು ಕಾರ್ಪೊರೇಷನ್ ಅಧಿಕಾರಿಗಳ ಕುಮ್ಮಕ್ಕು ಇದೆ. ಅದು ಇಲ್ಲದೆ ಹೋದರೆ ಅವರು ಮಾಡುವುದಕ್ಕಾಗುವುದಿಲ್ಲ. ಯಶವಂತಪುರದಲ್ಲಿ ಕೆಲವರು ಇದ್ದಾರೆ. ಅವರಿಗೆ ಪೋಲೀಸರ ಬೆಂಬಲವಿದೆ. ಅಧಿಕಾರಿಗಳ ಬೆಂಬಲವಿದೆ. ''ಮುಖ್ಯಮಂತ್ರಿಗಳಿಗೆ ಫೋನು ಮಾಡುತ್ತೇವೆ.'' ''ಬಸವಲಿಂಗಪ್ಪನವರಿಗೆ ಫೋನು ಮಾಡುತ್ತೇವೆ'' ಎಂದು ಯಾವಾಗಲೂ ಜನರಿಗೆ ಹೇಳುತ್ತಿರುತ್ತಾರೆ. ಅವರು ನಿಮ್ಮ ಪಾರ್ಟಿಯ ಜನರೇ ಅಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಇವರ ವಿಚಾರದಲ್ಲಿ ಹುಷಾರಾಗಿರಿ, ಜಾರಿಬೀಳಬೇಡಿಯೆಂದು ಹೇಳುತ್ತಿದ್ದೇನೆಯೇ ಹೊರತು ಬೇರೆ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಗುಡಿಸಲುವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಸಾಮಾಜಿಕ ದೃಷ್ಟಿಯಿಂದ, ಮಾನವೀಯ ದೃಷ್ಟಿಯಿಂದ ಇವರುಗಳಿಗೆ ಅನುಕೂಲ ಮಾಡಿಕೊಡುವುದು ಅತಿ ಮುಖ್ಯವೆಂದು ಹೇಳುತ್ತೇನೆ. ಆದರೆ ಇದುವರೆಗೆ ಮಾಡಿಕೊಡದಿರುವುದಕ್ಕೆ ಕಾರಣವೇನು ? ಹಳೆಯ ಕಥೆ ಬೇಡ. ಹಿಂದೆ ಶ್ರೀ ಬಿ. ಎಂ. ಪಾಟೀಲರು ಈ ಖಾತೆಯ ಮಂತ್ರಿಗಳಾಗಿದ್ದಾಗ ಎಲ್ಲ ಅನುಕೂಲ ಮಾಡಿಕೊಡುವುದಾಗಿ ಹೇಳಿದರು ; ಆದರೆ ಏನನ್ನೂ ಮಾಡಲಿಲ್ಲ ; ಅವರಿಗೂ ಮುಂಚೆ ಶ್ರೀ ಆರ್. ಎಂ. ಪಾಟೀಲರು ಇದ್ದರು. ಅವರಿಗೆ ಗತ್ತು, ಗಮ್ಮತ್ತು ಜಾಸ್ತಿ, ಆದರೂ ಅವರ ಕೈಯಲ್ಲಿಯೂ ಏನೂ ಆಗಲಿಲ್ಲ. ಮಾನ್ಯ ಬಸವಲಿಂಗಪ್ಪನವರು ಈ ಖಾತೆ ವಹಿಸಿಕೊಂಡ ಮೇಲೆ ಗುಡಿಸಲುವಾಸಿಗಳೆಲ್ಲರ ಫೋಟೋ ಹಿಡಿಸಿದರು, ಜನರ ಪಟ್ಟಿ ಮಾಡಿಸಿದರು. ಯಾರು ಯಾರು ಎಲ್ಲೆಲ್ಲಿ ವಾಸಮಾಡಬೇಕೆಂಬುದನ್ನು ತೀರ್ಮಾನ ಮಾಡುವುದಾಗಿ ಹೇಳಿದರು. ಫೋಟೋ ತೆಗೆಸಿಕೊಳ್ಳದ ಜನರು ಮತ್ತೆ ಫೋಟೋ ತೆಗೆಸಿಕೊಂಡರು. ಒಳ್ಳೆಯ ಅಭಿಪ್ರಾಯದಿಂದಲೇ ಇದನ್ನು ಮಾಡಿಸಿದರು. ನನ್ನ ಕ್ಷೇತ್ರದ ಬಗ್ಗೆ ನಾನು ಹೇಳುತ್ತಿರುವುದು ; ಆದರೆ ಆ ಫೋಟೋಗಳು ಎಲ್ಲಿ ಹೋದವೋ, ಆ ಪಟ್ಟಿ ಎಲ್ಲಿ ಹೋಯಿತೋ ಎಂಬುದು ಇದುವರೆಗೆ ಗೊತ್ತಿಲ್ಲ. ಆದರೆ ಒಂದು ಗೊತ್ತಿದೆ. ಇವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದರೆ, ಫೋಟೋ ತೆಗೆಸಿದ ಜಾಗದಲ್ಲಿದ್ದ ಗುಡಿಸಲುಗಳನ್ನು ಕಾರ್ಪೊರೇಷನ್ ಅಧಿಕಾರಿಗಳು ಬಂದು ನಿರ್ನಾಮ ಮಾಡಿಸಿರುವುದು.

ಶ್ರೀ ಎಚ್. ಡಿ. ದೇವೇಗೌಡ.—ಸ್ಲಮ್ ಕ್ಲಿಯರೆನ್ಸ್ ಪ್ರೋಗ್ರಾಮಿನಲ್ಲಿ ಅದೂ ಒಂದು ಕಾರ್ಯಕ್ರಮ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಕ್ಷೇತ್ರದಲ್ಲಿರುವ ಸ್ಲಮ್‌ಗಳ ಸಂಖ್ಯೆ ಮತ್ತು ಜನರ ಸಂಖ್ಯೆಯನ್ನು ಪಟ್ಟಿ ಮಾಡಿಕೊಡಿ ಎಂದು ನನಗೆ ಹೇಳಿದರು. ಅದರಂತೆ ನನ್ನ ಕ್ಷೇತ್ರದಲ್ಲಿರುವ 12—15 ಸ್ಲಮ್‌ಗಳಿಗೆ ಹೋಗಿ ಜನರೊಡನೆ ಚರ್ಚೆ ಮಾಡಿ ಜಾಸ್ತಿ ಜನರ ಹೆಸರು ಕೊಡಬಾರದೆಂದು ಗಮನಿಸಿ ಒಂದು ಪಟ್ಟಿ ಮಾಡಿದ್ದೂ ಆಯಿತು. ಅದನ್ನು ಸರ್ಕಾರಕ್ಕೆ ಕೊಟ್ಟಿದ್ದೂ ಆಯಿತು. ಇಷ್ಟೆಲ್ಲಾ ಮಾಡಿದ ಮೇಲೆ ಆಗಿದ್ದೇನೆಂದರೆ, ಕಾರ್ಪೊರೇಷನ್ ಅಧಿಕಾರಿಗಳು ಪೋಲಿಸರ ಸಹಾಯದಿಂದ ಬೋವಿಪಾಳ್ಯದಲ್ಲಿರುವ ಎಲ್ಲ ಗುಡಿಸಲುಗಳನ್ನು ನೆಲಸಮ ಮಾಡಿದರು. ಫೋಟೊ ಹಿಡಿದಿದ್ದು ಏತಕ್ಕೆ, ನೆಲಸಮ ಮಾಡಿದ್ದು ಏತಕ್ಕೆ ಎಂದು ಕೇಳುತ್ತೇನೆ. ಗರೀಬಿ ಹಟಾವೊ ಮಾಡುತ್ತೇವೆಂದು ಹೇಳುವ ಜನರು ಬಡಜನರ ಗುಡಿಸಲುಗಳನ್ನು ನೆಲಸಮ ಮಾಡಿದ್ದು ಸರಿಯೇ ಎಂದು ಕೇಳುತ್ತೇನೆ. ಅವರಿಗೆ ವಾಸಕ್ಕೆ ತೊಂದರೆಯಾಗಿ ನನ್ನ ಹತ್ತಿರ ಬಂದು ಗೋಳಿಟ್ಟರು. ಎಲ್ಲರೂ ಬೀದಿಗೆ ಬಂದು ಬೀಳುವಂತೆ ಇವರು ಮಾಡಿದರು.

ಅವರಿಗೆ ಹಿಂದೆ ಆಶ್ವಾಸನೆಯನ್ನು ಕೊಟ್ಟು ಈಗ ಬೇರೆ ಜಾಗ ಕೊಡುತ್ತೇವೆ ಎಂದು ಹೇಳಿದರೆ ಅವರಿಗೆ ಯಾವ ರೀತಿ ನಂಬಿಕೆ ಬರುತ್ತದೆ? ಎಲ್ಲವನ್ನೂ ಮಾತಿನಲ್ಲಿ ಹೇಳುತ್ತಾರೆಯೇ ವಿನಾ ಕೃತಿಯಲ್ಲಿ ಮಾಡುತ್ತಿಲ್ಲ. ಗುಡಿಸಲುಗಳನ್ನು ಇವರು ಧ್ವಂಸ ಮಾಡುವುದು ನ್ಯಾಯವೇ ?ಬೇರೆ ಜಾಗ ಮಾಡಿ ತೋರಿಸಿ ಸ್ಲಮ್‌ಕ್ಲಿಯರೆನ್ಸ್ ಮಾಡುತ್ತೇವೆ ಎಂದು ಭರವಸೆ ಕೊಡುತ್ತೀರಿ, ಆದರೆ

ನೀವು ಏನು ಮಾತು ಕೊಡುತ್ತೀರೋ ಅದರಂತೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಬೆಂಗಳೂರಿನ ಸುತ್ತಮುತ್ತ 10 ಸಾವಿರ ಸೈಟುಗಳನ್ನು ಮಾಡಿದ್ದೇವೆ ಎಂದು ಹೇಳಿದಿರಿ, ಏತಕ್ಕೆ ಅವುಗಳನ್ನು ಯಾರಿಗೂ ಹಂಚಿಲ್ಲ, ಅವುಗಳನ್ನು ಏತಕ್ಕೆ ಹಾಗೆಯೇ ಉಳಿಸಿಕೊಂಡಿದ್ದೀರಿ ? ಆ ಸೈಟುಗಳನ್ನು ತಾವು ಹಂಚುವುದಾದರೆ ಬಡವರಿಗೆ ಹಂಚಿ, ಗುಡಿಸಿಲಿನಲ್ಲಿ ವಾಸಮಾಡುವವರಿಗೆ ಹಂಚಿ. ಈ ಸಂಬಂಧದಲ್ಲಿ ಮಧ್ಯಸ್ಥಗಾರರು ಮತ್ತು ಕೆಲವು ಪುಡಾರಿಗಳು ದುಡ್ಡು ಮಾಡಿಕೊಳ್ಳುತ್ತಾರೆ ಎನ್ನುವ ಆರೋಪಣೆ ಇದೆ.

ಶ್ರೀ ಎಚ್. ಡಿ. ದೇವೇಗೌಡ.--ಕಲೆಕ್ಷನ್ ಮತ್ತು ಕನ್‌ಸಾಲಿಡೇಷನ್ ಆಗದಿದ್ದರೆ ಹೇಗೆ

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮಾನ್ ದೇವೇಗೌಡರು ಈ ರೀತಿ ಮಾತನಾಡಬಾರದು ತಮ್ಮ ಮಂತ್ರಿಮಂಡಲದಲ್ಲೂ ಕಲೆಕ್ಷನ್ ಮತ್ತು ಕಾನ್‌ಸಾಲಿಡೇಷನ್ ಬೇಕಾದಷ್ಟು ಇತ್ತು. ಈಗಲೂ ಆಗುತ್ತಿದೆ. ನಾನು ಶ್ರೀಮಾನ್ ದೇವೇಗೌಡರ ಬಗ್ಗೆ ಹೇಳುವುದಿಲ್ಲ. ಅವರ ಮಂತ್ರಿಮಂಡಲ ಎಂದರೆ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಶ್ರೀಮಾನ್ ವೀರೇಂದ್ರಪಾಟೀಲರ ಮಂತ್ರಿಮಂಡಲದ ಬಗ್ಗೆ ನಾನು ಹೇಳುತ್ತಿದ್ದೇನೆ. ಅವರು ಕಲೆಕ್ಷನ್ ಮತ್ತು ಕನ್‌ಸಾಲಿಡೇಷನ್ ಬೇಕಾದಷ್ಟು ಮಾಡಿಕೊಂಡಿದ್ದಾರೆ. ಈಗ 10 ಸಾವಿರ ಸೈಟ್ಸ್‌ಗಳನ್ನು ಏನು ಮಾಡಿದ್ದೇವೆ ಎಂದು ಸರ್ಕಾರದವರು ಹೇಳುತ್ತಾರೆ ಆ ಸೈಟುಗಳಿಗೆ ಇಂತಿಂಥಾ ಸ್ಲಮ್ ಇಂತಿಂಥಾ ಕಡೆ ಹೋಗಬೇಕು ಎಂದು ಹೇಳಿ ಅವರನ್ನು ಸ್ಲಮ್‌ನಿಂದ ಕಳುಹಿಸಿ ಆಮೇಲೆ ಕ್ಲಿಯರೆನ್ಸ್ ಮಾಡಿ. ಈಗ ಕೆಲವು ಖಾಸಗೀ ಜಾಗದಲ್ಲಿ ಸ್ಲಮ್ಸ್ ಇದೆ. ಅದನ್ನು ಏನು ಮಾಡುತ್ತೀರಿ ? ಜಾಗದ ಮಾಲೀಕರು ತಕರಾರು ತರುತ್ತಾರೆ. ಈಗ ತಾವು ಸ್ಲಮ್ ಇಂಪ್ರೂವ್ ಮಾಡುವ ಸ್ಕೀಮನ್ನು ಮಾಡಿದರೆ ಅದಕ್ಕೆ ಕೇಂದ್ರ ಸರ್ಕಾರದವರು ದುಡ್ಡು ಕೊಡುತ್ತಾರೆ. ಆದರೆ ಖಾಸಗೀ ಜಾಗದಲ್ಲಿ ಅನೇಕರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಆದ್ದರಿಂದ ಆ ಜಮೀನಿನ ಮಾಲೀಕರಿಗೆ ಕಾಂಪೆನ್‌ಸೇಷನ್ ಕೊಡುವುದಕ್ಕೆ ಮಾಡುವ ಬದಲು ಲ್ಯಾಂಡ್ ವ್ಯಾಲ್ಯೂ ಅಮೌಂಟ್ ಅನ್ನು ಕೊಟ್ಟು ಆ ಜಾಗವನ್ನು ಸರ್ಕಾರದವರೇ ತೆಗೆದುಕೊಂಡು ಅದನ್ನು ಸ್ಲಮ್ ಇಂಪ್ರೂವ್‌ಮೆಂಟ್ ಮಾಡಿ ಇನ್ನೊಂದು ಕಡೆ ಸ್ಲಮ್ ಕ್ಲಿಯರೆನ್ಸ್ ಮಾಡಿದರೆ ಸ್ಲಮ್ ಇಂಪ್ರೂವ್‌ಮೆಂಟ್ ಆಗುತ್ತದೆ ಮತ್ತು ಸ್ಲಮ್ ಕ್ಲಿಯರೆನ್ಸ್ ಕೂಡ ಆಗುತ್ತದೆ. ಆ ರೀತಿ ಖಾಸಗೀ ಜಮೀನುಗಳಿಗೆ ಲ್ಯಾಂಡ್ ಅಮೌಂಟ್ ಎಂದು ಕೊಡುವುದಾದರೆ ಖಾಸಗೀಯವರಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದು ತಪ್ಪುತ್ತದೆ. ಆ ಖಾಸಗೀ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ಅವರಿಗೆ ಮಾರ್ಕೆಟ್ ವ್ಯಾಲ್ಯೂ ಕೊಡಬೇಕಾಗಿಲ್ಲ. ಆ ರೀತಿ ಅವರಿಗೆ ಮಾರ್ಕೆಟ್ ವ್ಯಾಲ್ಯೂ ಕೊಡುವುದು ನ್ಯಾಯವೂ ಅಲ್ಲ. ಧರ್ಮವೂ ಅಲ್ಲ. ಈ ಬಗ್ಗೆ ರಾಜ್ಯಾಂಗವನ್ನು ಕೂಡ ತಿದ್ದುಪಡಿ ಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಆ ಖಾಸಗೀ ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಮಾರ್ಕೆಟ್ ವ್ಯಾಲ್ಯೂ ಕೊಡುವುದಕ್ಕೆ ಬದಲಾಗಿ ಅಮೌಂಟ್ ಎಂದು ಕೊಟ್ಟು ಅದನ್ನು ಅಕ್ವೈರ್ ಮಾಡಿಕೊಳ್ಳಬಹುದು. ಇದನ್ನು ದೇಶದ ಹಿತದೃಷ್ಟಿಯಿಂದ ಮಾಡಿದ್ದಾರೆ. ಇದನ್ನು ಸರ್ಕಾರದವರು ಏತಕ್ಕೆ ಉಪಯೋಗ ಮಾಡಿಕೊಳ್ಳುವುದಿಲ್ಲ ? ಧೈರ್ಯವಾಗಿ ಆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಿ. ಈಗ ನೀವು ಪರಿಹಾರ ಕೊಡಬೇಕಾಗಿಲ್ಲ. ಕಾನ್‌ಸ್ಟಿಟ್ಯೂಷನ್ ತಿದ್ದುಪಡಿಯಾಗಿದೆ. ಸ್ಲಮ್ ಇಂಪ್ರೂವ್‌ಮೆಂಟ್‌ಗೆ ಕೇಂದ್ರ ಸರ್ಕಾರದವರು ದುಡ್ಡು ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ಈಗ ಆ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಿಂದೆ ಈ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಒಂದು ತೀರ್ಮಾನವಾಗಿತ್ತು, ಮತ್ತು ಒಂದು ತೀರ್ಮಾನಕ್ಕೆ ಬಂದಿದ್ದರು ಇದಕ್ಕೆ ಟ್ರಸ್ಟ್ ಬೋರ್ಡಿನವರು 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದೂ, ಕಾರ್ಪೊರೇಷನ್‌ನವರು 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದೂ ಸರ್ಕಾರದವರು 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಒಪ್ಪಿಕೊಂಡಿದ್ದರು. ಈ ಒಂದು ಕೋಟಿ ರೂಪಾಯಿಗಳನ್ನು ರಿವಾಲ್ವಿಂಗ್ ಫಂಡ್ ಆಗಿ ಇಟ್ಟು ಈ ಹಣವನ್ನು ಸ್ಲಮ್ ಕ್ಲಿಯರೆನ್ಸಿಗಾಗಿ ಉಪಯೋಗಿಸಬೇಕೆಂದು ಒಂದು ತೀರ್ಮಾನಕ್ಕೆ ಬಂದಿದ್ದರು. ಆ ತೀರ್ಮಾನ ಎಲ್ಲಿ ಹೋಯಿತು ? ಅದು ಏತಕ್ಕೆ ಜಾರಿಗೆ ಬರಲಿಲ್ಲ ? ಅದಕ್ಕೆ ಯಾರು ಹೊಣೆ ? ಈಗ ಆ ಒಂದು ಕೋಟಿ ರೂಪಾಯಿ ಇದ್ದರೆ ತಕ್ಷಣ ಈ ಸ್ಲಮ್ ಕ್ಲಿಯರೆನ್ಸ್ ಕೆಲಸಕ್ಕೆ ಉಪಯೋಗಿಸುವುದಕ್ಕೆ ಅನುಕೂಲವಾಗುತ್ತದೆ. ತಕ್ಷಣ ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಏತಕ್ಕೆ ಮಾಡಕೂಡದು ? ತಕ್ಷಣ ಅದನ್ನು ತೆಗೆದುಕೊಳ್ಳಿ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಸ್ಲಮ್ ಕ್ಲಿಯರೆನ್ಸಿಗೆ ಒಂದು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಎಂದು ಮಾಡಬೇಕು. ಇದು ಅತಿ ಮುಖ್ಯವಾಗಿ ಆಗ

(ಶ್ರೀ ಎಂ. ಎಸ್. ಕೃಷ್ಣನ್)

ಬೇಕಾಗಿದೆ, ಇದನ್ನು ಮಾಡಿ ಬೆಂಗಳೂರು ನಗರದಲ್ಲಿ ಇರತಕ್ಕ ಸ್ಲಮ್‌ಗಳನ್ನು ಕ್ಲಿಯರ್ ಮಾಡಿ ಬೆಂಗಳೂರು ನಗರವನ್ನು ಸುಂದರ ನಗರವನ್ನಾಗಿ ಮಾಡಿ ಬಡವರಿಗೆ ಸೈಟುಗಳನ್ನು ಕೊಟ್ಟು, ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

MADAM SPEAKER.—The House will now rise and meet again at One of the Clock on Monday the 19th March 1973.

The House adjourned at One of the Clock to meet again at One of the Clock on Monday, the 19th March 1973.

WD 20063- GPB 75 22-6-197